ಸಾಹಿತ್ಯ ದಾಸೋಹ – ೨೦೬

ಸಂಚಿಕೆ 30 – ನವೆಂಬರ್ 2022   08.10.2022ರ ದಾಸೋಹದ ಬರಹಗಳ ಸಂಕಲನ

ಸಮನ್ವಯ ಸಮಿತಿ ★ ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ಕಳೆದ ತಿಂಗಳು ಅಂದರೆ 8ನೇ ಅಕ್ಟೋಬರ್ 2022ರಂದು ಅಂತರಜಾಲ ಮುಖೇನ ನಡೆದ 206ನೆಯ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಿದ ಬರಹಗಳನ್ನೊಳಗೊಂಡ ಈ ಸುಂದರ ಸಂಚಿಕೆ ಯನ್ನು ತಮ್ಮ ಮಡಿಲಿಗಿರಿಸಲು ಸಂತಸವೆನಿಸುತ್ತದೆ. ಇದು ನಮ್ಮ ಪಿಡಿಎಫ್ ರೂಪದ 30ನೆಯ ಸಂಚಿಕೆ ಎಂಬುದು ಹೆಮ್ಮೆಯ ವಿಷಯ.

206ನೆಯ ದಾಸೋಹದ ಅಧ್ಯಕ್ಷತೆವಹಿಸಿ ಯಶಸ್ವಿಗೊಳಿಸಿದ ಶ್ರೀಮತಿ ಶಾಂತಿ ವಾಸು ಅವರಿಗೆ ಹಾಗೂ ತಮ್ಮ ಲೇಖನಗಳನ್ನು ನೀಡಿ ಸಹಕರಿಸಿದ ಬರಹಗಾರರಿಗೆ ಮತ್ತು ಎಲ್ಲ ನೋಡುಗರಿಗೆ ಕೃತಜ್ಞತೆಗಳು.

'ಪ್ರಗತಿಯ ಪ್ರತಿಮೆ' ಎಂಬ ಶೀರ್ಷಿಕೆಯೊಂದಿಗೆ ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರ 108 ಅಡಿ ಎತ್ತರದ ಬೃಹತ್ ಹಾಗೂ ಆಕರ್ಷಕ ಕಂಚಿನ ಪ್ರತಿಮೆ ನಿನ್ನೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರಿಂದ ಅನಾವರಣಗೊಂಡಿದೆ. ಅತ್ಯಂತ ಸಕಾಲಿಕವಾದ ಈ ಬೃಹತ್ ಪ್ರತಿಮೆಯ ಚಿತ್ರವೇ ಈ ಸಂಚಿಕೆಯ ಮುಖಪುಟದ ವಿಶೇಷ.

ಕನ್ನಡ ನಾಡು 67ನೇ ರಾಜ್ಯೋತ್ಸವವನ್ನು ಆಚರಿಸುತ್ತ ಮುನ್ನಡೆಯುತ್ತಿದೆ. ಈ ಸಂದರ್ಭದಲ್ಲಿ ನಾಡು ನುಡಿಯ ಬಗ್ಗೆ ಎಲ್ಲರೂ ಪ್ರಾಂಜಲ ಸೇವೆ ಸಲ್ಲಿಸುವ ಸಂಕಲ್ಪದ ಮಾಸವೂ ಆಗುವುದೆಂದು ನಿರೀಕ್ಷಿಸೋಣವೆ?

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ, ಬೆಂಗಳೂರು

12.11..2022

ದಾಸೋಹದ ಪುಟಗಳಲ್ಲಿ ...

01	ಸಾಹಿತ್ಯ ದಾಸೋಹ 206 – ಕಾರ್ಯಕ್ರಮ ವರದಿ	ಹು.ವಾ. ಶ್ರೀಪ್ರಕಾಶ್	5
02	'ಬದಲಾಗುತ್ತಿರುವ ಹವಾಗುಣ ಮತ್ತು ಜೀವನ' – ಕಾರ್ಯಕ್ರಮ ವರದಿ	ಹು.ವಾ. ಶ್ರೀಪ್ರಕಾಶ್	7
03	ಕಥಾ ಚಿಂತನ – ಮನೋಮಂಥನ	ವಿಠ್ಠಲ್ ಇಜೇರಿ	12
04	ಭಾರತಿ	ಎಲ್. ಗಿರಿಜಾ ರಾಜ್	14
05	ಹೇಳ, ಇವಳೇಕೆ ಕಳ್ಳೆ	ಶೀಲಾ ಅರಕಲಗೂಡು	16
06	ಇಂಗ್ಲಿಷ್ ಸಿಲೆಬೆಲ್ಲುಗಳು ಹಾಗೂ ಕನ್ನಡ ಸ್ವರಗಳು	ಜೀವಿ ಹೆಗಡೆ	18
07	ಮನೆ ಮಾರಾಟಕ್ಕಿದೆ	ನಾಗರತ್ನ ಚಂದ್ರಶೇಖರ್	20
08	ದಸರಾ ಸವಿ ನೆನಪು	ರೇಣುಕಾ ದೇಸಾಯಿ	22
09	ಹೆಸರಿನಲ್ಲೇನಿದೆ?	ಪೋರ	25
10	ಮರಳ ಕಾಡಿಗೆ (ಕವನ)	ಮಹಾಬಲ	28
11	ಕನ್ನಡ ಸಂಘದಲ್ಲ ಮುದ್ರಿತ ಪತ್ರ ಆರಂಭಿಸಿದ್ದು	ಶ್ರೀಧರ ಬಾಣಾವರ	29
12	ಗಜಲ್ (ಕವನ)	ಮಹಾಬಲ	31
13	ಸೀತಾರಾಮಯ್ಯ ಮೇಷ್ಟ್ರ ಕನ್ನಡ ಪಾಠ	ಕೆ.ಎನ್. ಭಗವಾನ್	32
14	ಕೆಲವು ಭೇಟಿಗಳು ಪೂರ್ವನಿಯೋಜಿತವಿರುತ್ತವೆ	ರಾಧಿಕಾ ಗುಜ್ಜರ್	34
15	ಚರಿತಾರ್ಥ (ಕವನ)	ಭ.ರಾ. ವಿಜಯಕುಮಾರ್	36
16	ಸುಬ್ಬೂ ಮತ್ತು ವೆಂಕಿ	ಉಷಾರಾಣಿ	37
17	ದೂರದ ಬೆಟ್ಟ ನುಣ್ಣಗೆ	ಸುಜಾತಾ ರವೀಶ್	43
18	ಹ್ಯಾಂಡ್ ಬುಕ್ ಆಫ್ ಟ್ರೆಜರಿ ಮ್ಯಾನೇಜ್‌ಮೆಂಟ್ (ಪುಸ್ತಕ ಪರಿಚಯ)	ಬೆಂ.ಶ್ರೀ. ರವೀಂದ್ರ	45

ಮುಖಪುಟದ ಚಿತ್ರ: 'ಪ್ರಗತಿಯ ಪ್ರತಿಮೆ'

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲ ಅನಾವರಣಗೊಂಡ ಕೆಂಪೇಗೌಡರ ಕಂಚಿನ ಪ್ರತಿಮೆ

ಚಿತ್ರ ಕೃಪೆ: ಅಂತರ್ಜಾಲ

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ ೨೦೬

ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

ದಿನಾಂಕ 8ನೇ ಅಕ್ಟೋಬರ್ 2022ರಂದು ಶನಿವಾರ ಮಧ್ಯಾಹ್ನ 3.30ಕ್ಕೆ ಅಂತರ್ಜಾಲ ಮುಖೇನ ಕಾರ್ಯಕ್ರಮ ಆರಂಭವಾಯಿತು. ಶ್ರೀ ವಿಠಲ ಇಜೇರಿಯವರು ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಶಾಂತಿ ವಾಸು ಅವರನ್ನು ಪರಿಚಯಿಸಿದರು.

ಶ್ರೀಮತಿ ಶಾಂತಿ ವಾಸುರವರು ಚಿತ್ರಕಲೆ, ಸಾಹಿತ್ಯ, ಶಿಕ್ಷಣ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಮಕ್ಕಳಿಗೆ ವಿಶಿಷ್ಟ ರೀತಿಯಲ್ಲಿ ಚಿತ್ರಕಲೆಯನ್ನು ಕಲಿಸಲು ನಿಸರ್ಗ ಎಜುಕೇಶನ್ ಟ್ರಸ್ಟ್ ವತಿಯಿಂದ ಅಭಿಯಾನ ಕೈಗೊಂಡಿರುವರಲ್ಲದೆ ಕುಂಚ ಕಲೆಯಲ್ಲಿ ರಾಜ್ಯ ಪ್ರಶಸ್ತಿ ಪಡೆದಿದ್ದು, ಚಿತ್ರಕಲೆಯ ಬಗ್ಗೆ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನಗಳನ್ನು ನಾಡಿನ ಹಲವೆಡೆಗಳಲ್ಲಿ ಮತ್ತು ಗೋವಾ, ಮುಂಬೈಗಳಲ್ಲೂ ನಡೆಸಿರುತ್ತಾರೆ. ಇವರ ಅನೇಕ ಲೇಖನ, ಕವನ, ಕಥೆಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆಧ್ಯಾತ್ಮದಲ್ಲಿ ಒಲವು ಹೊಂದಿರುವ ಇವರು 'ಸಾಯಿಬಾಬಾ ಸರ್ವಾಂತರ್ಯಾಮಿ' ಎಂಬ ಪುಸ್ತಕ ಪ್ರಕಟಿಸಿರುವರಲ್ಲದೆ, 'ಬಜಾರಿನ ಕನ್ನಡಿ' ಎಂಬ ಕವನ

ಸಂಕಲನವನ್ನೂ ಹೊರತಂದಿದ್ದಾರೆ. ಸಮಾಜ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದು, ಪ್ಲಾಸ್ಟಿಕ್ ಬಳಕೆ, ಪರಿಸರ ನಾಶದ ವಿರುದ್ಧವೂ ಅಭಿಯಾನಗಳನ್ನು ನಡೆಸಿದ್ದಾರೆ. ರಾಣಿ ಚೆನ್ನಮ್ಮ ಪ್ರಶಸ್ತಿ, ವೀರ ಮಹಿಳೆ ಪ್ರಶಸ್ತಿ, ನಂದಾದೀಪ ಪ್ರಶಸ್ತಿ, ಅನುಪಮಾ ನಿರಂಜನ ಪ್ರಶಸ್ತಿಯಂತಹ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಶ್ರೀಮತಿ ಶಾಂತಿ ವಾಸುರವರು ಭಾಜನರಾಗಿದ್ದಾರೆ ಎಂದು ಪರಿಚಯಿಸಿ ಅವರನ್ನು ಸ್ವಾಗತಿಸಿದರು.

ನಂತರ ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರರವರು ವೇದಿಕೆಯ ಸದಸ್ಯರೆಲ್ಲರಿಗೂ ದೀಪಾವಳಿ ಮತ್ತು ಕನ್ನಡ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಿ, ಇದು 206ನೇ ದಾಸೋಹವಾಗಿದ್ದು ನೋಡಿಯೋದಲ್ಲಿ ನಡೆಯುತ್ತಿರುವ 73ನೇ ಕಾರ್ಯಕ್ರಮವಾಗಿದೆ ದಾಸೋಹದ ಬರಹಗಳನ್ನು ಸಂಚಿಕೆ ರೂಪದಲ್ಲಿ ತರಲು ಶ್ರೀ ಗುರುಪ್ರಸಾದ್ ಹಾಲ್ಕುರಿಕೆಯವರು ಸ್ವಯಂಪ್ರೇರಣೆಯಿಂದ ಆರಂಭಿಸಿ, ಹತ್ತು ಹನ್ನೆರಡು ಸಂಚಿಕೆಗಳನ್ನು ತಂದರು. ನಂತರ ಆ ಜವಾಬ್ದಾರಿಯನ್ನು ಶ್ರೀ ಶೃಂಗೇಶ್ವರ ಶರ್ಮರವರು ವಹಿಸಿಕೊಂಡು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಇಂದು 29ನೇ ಸಾಹಿತ್ಯ ಸಂಚಿಕೆ ಬಿಡುಗಡೆಯಾಗುತ್ತಿದೆ.

ಅಕ್ಟೋಬರ್ 16ರಂದು ಭಾನುವಾರ ಸಂಜೆ 5:00 ಗಂಟೆಗೆ ಖ್ಯಾತ ವೈಜ್ಞಾನಿಕ ಬರಹಗಾರರಾದ ಶ್ರೀ ಟಿ.ಆರ್. ಅನಂತರಾಮು ಅವರಿಂದ "ಬದಲಾಗುತ್ತಿರುವ ಹವಾಗುಣ ಮತ್ತು ಬದಲಾಗುತ್ತಿರುವ ಜೀವನ" ಎಂಬ ವಿಷಯದ ಬಗ್ಗೆ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ. ನವಂಬರ್ ತಿಂಗಳಿನಲ್ಲಿ ರಾಜ್ಯೋತ್ಸವದ ಅಂಗವಾಗಿ ಪ್ರತಿಯೊಬ್ಬರೂ ಬೇರೆ ಬೇರೆ ಪ್ರಕಾರದ ಒಟ್ಟು ಐದು ಪುಸ್ತಕಗಳ ಪರಿಚಯ/ವಿಮರ್ಶೆ ಮಾಡಿಕೊಡಬೇಕು .ಕವನ, ಪ್ರಬಂಧ, ಕಥಾ ಸಂಕಲನ, ಪತ್ತೆದಾರಿ ಕಾದಂಬರಿ, ಮತ್ತೊಂದು ಇಷ್ಟವಾದ ಯಾವುದೇ ಪ್ರಕಾರದ ಬಗ್ಗೆ ಬರೆಯಬಹುದು .ಈ ಪರಿಚಯ, ವಿಮರ್ಶಾಲೇಖನವನ್ನು ವೇದಿಕೆಯಲ್ಲಿ ಪ್ರಸ್ತುತಪಡಿಸಬೇಕು ಎಂದು ಹೇಳಿ ಸದಸ್ಯರು ಈ ವಿಶೇಷ ಸಾಹಿತ್ಯಕ ಚಟುವಟಿಕೆಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳಬೇಕೆಂದು ಕೋರಿದರು.

ಖೋ ಕಾದಂಬರಿ ನವೆಂಬರ್‌ನಲ್ಲಿ ಬಿಡುಗಡೆಯಾಗಲಿದೆ. ಪ್ರಾಚಾರ್ಯ ಎಚ್ಚೆಸ್ಕೆಯವರ ಬದುಕು ಬರಹ ಕುರಿತ ಪುಸ್ತಕ ಅಂತಿಮ ಹಂತದಲ್ಲಿದ್ದು ಪ್ರಕಟಣೆಗೆ ಸಿದ್ಧವಾಗಿದೆ. ಇದು ನಮ್ಮ ವೇದಿಕೆಯ ಮಹತ್ವದ ಸಾಧನೆಯಾಗಲಿದೆ ಎಂದು ಹೇಳಿದ ಶ್ರೀ ರವೀಂದ್ರ ಅವರು, ಕನ್ನಡದ ಕೆಲಸದಲ್ಲಿ ಹೆಚ್ಚು ಹೆಚ್ಚು ತೊಡಗಿಕೊಳ್ಳಬೇಕು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಕನ್ನಡ ಹೆಚ್ಚು ವಿಜೃಂಭಿಸುವಂತೆ ಮಾಡಬೇಕು ಎಂದು ಸದಸ್ಯರಿಗೆ ಕರೆ ನೀಡಿದರು.

ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ ಪ್ರದೇಶದಲ್ಲಿ ಕಂಡುಬರುವ ಹನ್ನೆರಡು ವರ್ಷಕ್ಕೊಮ್ಮೆ ಅರಳುವ ಅಪರೂಪದ ನೀಲಕುರುಂಜಿ ಹೂಗಳ ಆಕರ್ಷಕ ಮುಖಪುಟವಿರುವ ಸಾಹಿತ್ಯ ದಾಸೋಹ 205ರ ಸಂಚಿಕೆಯನ್ನು ಶ್ರೀ ಶೃಂಗೇಶ್ವರ ಶರ್ಮರವರು ಬಿಡುಗಡೆ ಮಾಡಿ ಸಂಚಿಕೆಯ ಪುಟಗಳನ್ನು ಪ್ರದರ್ಶಿಸಿದರು. ಸದಸ್ಯರು ಲೇಖನಗಳನ್ನು ಕಳಿಸುವ ಮುನ್ನ ಮತ್ತೊಮ್ಮೆ ಓದಿ ತಪ್ಪುಗಳನ್ನು ತಿದ್ದಿ ಕಳಿಸಬೇಕೆಂದು ವಿನಂತಿಸಿದರು.

ನಂತರ ಒಟ್ಟು 16 ಸದಸ್ಯರು ತಮ್ಮ ವಿವಿಧ ಪ್ರಸ್ತುತಿಗಳನ್ನು ಮಂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಶಾಂತಿ ವಾಸು ಅವರು ವೇದಿಕೆಯಲ್ಲಿ ಪ್ರಸ್ತುತಪಡಿಸಿದ ಎಲ್ಲ ಬರಹಗಳ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಿ ಪ್ರೋತ್ಸಾಹದ ನುಡಿಗಳನ್ನಾಡಿದರು. ವೇದಿಕೆಯು ನಿರಂತರವಾಗಿ ಸಾಹಿತ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ ಅವರು, ವೇದಿಕೆಯ ಹೆಮ್ಮೆಯ ಕಾರ್ಯಕ್ರಮವಾದ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸುತ್ತಿರುವುದು ಸಂತಸ ತಂದಿದೆ ಎಂದರು. ವೇದಿಕೆಯ ಸದಸ್ಯರೆಲ್ಲರೂ ಆಯಾಸ ಕಾಣದ ಸಾಹಿತಿಗಳೇ ಸರಿ ಎಂದ ಅವರು ಸಾಹಿತ್ಯ ಕಮ್ಮಟಗಳನ್ನು ಏರ್ಪಡಿಸುವುದರ ಮೂಲಕ ಹೆಚ್ಚು ಹೆಚ್ಚು ಯುವಕರನ್ನು ಸಾಹಿತ್ಯದೆಡೆಗೆ ಸೆಳೆಯಬೇಕಾದ ಅಗತ್ಯತೆಯನ್ನು ತಿಳಿಸಿದರು.

ದಾಸೋಹದ ಸಂಚಾಲಕರಾದ ಶ್ರೀ ಕೆ ಎನ್ ಮಹಾಬಲರವರು ಕೊನೆಯಲ್ಲಿ ಎಲ್ಲರಿಗೂ ವಂದಿಸಿದರು..

***

ಸಮನ್ವಯ ಸಮಿತಿ - ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

'ಬದಲಾಗುತ್ತಿರುವ ಹವಾಗುಣ ಮತ್ತು ಬದಲಾಗುತ್ತಿರುವ ಜೀವನ'

ಉಪನ್ಯಾಸ ಮತ್ತು ಸಂವಾದ : ಶ್ರೀ ಟಿ.ಆರ್. ಅನಂತರಾಮು

ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

ದಿನಾಂಕ 16ನೆಯ ಅಕ್ಟೋಬರ್ 2022ರಂದು ಭಾನುವಾರ ಸಂಜೆ ಐದು ಗಂಟೆಗೆ ಅಂತರ್ಜಾಲ ವೇದಿಕೆಯ ಮುಖೇನ ಕಾರ್ಯಕ್ರಮ ಆರಂಭವಾಯ್ತು. ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ. ರವೀಂದ್ರರವರು ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀಮತಿ ಜಿ.ವಿ.ನಿರ್ಮಲಾರವರು ಎಲ್ಲರನ್ನೂ ಸ್ವಾಗತಿಸಿ, ಉಪನ್ಯಾಸಕರಾದ ಶ್ರೀ. ಟಿ.ಆರ್. ಅನಂತರಾಮು ಅವರನ್ನು ವೇದಿಕೆಗೆ ಪರಿಚಯಿಸಿದರು.

ತುಮಕೂರು ಜಿಲ್ಲೆಯ ಶಿರಾ ತಾಲೂಕಿನವರಾದ .ಶ್ರೀ ಟಿ.ಆರ್.ಅನಂತರಾಮುರವರು, ಮೈಸೂರು ವಿಶ್ವವಿದ್ಯಾ ನಿಲಯದಿಂದ ಭೂ ವಿಜ್ಞಾನ ಪದವೀಧರರಾಗಿ, ಐದು ವರ್ಷ ಕಾಲ ಅಧ್ಯಾಪಕ ವೃತ್ತಿಯನ್ನು ನಡೆಸಿ, ನಂತರ 1977ರಲ್ಲಿ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆಯನ್ನು ಸೇರಿ ವಿವಿಧ ಹುದ್ದೆಯನ್ನು ನಿರ್ವಹಿಸಿ ನಿವೃತ್ತರಾಗಿರುತ್ತಾರೆ. ಚಿನ್ನದ ನಿಕ್ಷೇಪಗಳಿಗಾಗಿ ಶೋಧನೆ ನಡೆಸುತ್ತಿದ್ದಾಗ ಇವರಿಗೆ ಸಾಹಿತ್ಯ ಸರಸ್ವತಿ ಒಲಿದಿದ್ದು ವಿಶೇಷ .ಇವರ ಕೊಡುಗೆಯಿಂದ ಕನ್ನಡ ವಿಜ್ಞಾನ ಸಾಹಿತ್ಯ ಶ್ರೀಮಂತವಾಗಿದೆ ಸರಳವಾಗಿ ಸ್ವಾರಸ್ಯವಾಗಿ ಬರೆಯುವ ಇವರ ಅನೇಕ ಕೃತಿಗಳು ಕನ್ನಡದ ಎಲ್ಲಾ ಹೆಸರಾಂತ ಪತ್ರಿಕೆಗಳು ಹಾಗೂ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. ಅನೇಕ ವಿಜ್ಞಾನ ಗೋಷ್ಠಿ ಗಳಲ್ಲಿ ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶಿರಾ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನವನ್ನೂ ಅಲಂಕರಿಸಿದ್ದಾರೆ. ವಿಜ್ಞಾನದ ವಿಷಯಗಳನ್ನು ರಸವತ್ತಾದ ಆಕರ್ಷಕ ಶೈಲಿ ಬಳಸಿ ಸಾಮಾನ್ಯರಿಗೂ ತಿಳಿಯುವಂತೆ ಪ್ರಿಯವಾಗುವಂತೆ ಬರೆಯುವ ಇವರ ಬಗ್ಗೆ ಪ್ರೊ. ಹೆಚ್ ಆರ್ ರಾಮಕೃಷ್ಣರಾವ್ 'ಟಿ.ಆರ್.ಎ. ಒಂದು ಬ್ರಾಂಡ್ ನೇಮ್' ಎಂದಿದ್ದಾರೆ.

ಗುಣಾತ್ಮಕವಾದ ಮೌಲ್ಯಯುತವಾದ ಕೃತಿಗಳಿಂದ ಅತ್ಯಂತ ಜನಪ್ರಿಯ ವಿಜ್ಞಾನ ಬರಹಗಾರರೂ, ಅಂಕಣಕಾರರೂ ಆಗಿರುವ ಶ್ರೀ ಅನಂತರಾಮು ಅವರು ಈವರೆಗೆ ರಚಿಸಿರುವ ಪುಸ್ತಕಗಳ ಒಟ್ಟು ಸಂಖ್ಯೆ 119. ಈ ಪೈಕಿ ಸ್ವಂತ ರಚನೆ 60, ಅನುವಾದ 19, ಸಂಪಾದಿತ ಕೃತಿಗಳು 32, ಇತರರೊಡನೆ ಸಂಪಾದಿಸಿದ ಕೃತಿಗಳು 8.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪ್ರವಾಸ ಸಾಹಿತ್ಯ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಪ್ರಶಸ್ತಿ, ಪರಿಸರ ಮತ್ತು ಅರಣ್ಯ ಇಲಾಖೆ ಪ್ರಶಸ್ತಿ, ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಅಕಾಡೆಮಿ ಮತ್ತು ಇಲಾಖೆಯ ಪ್ರಶಸ್ತಿ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅನುವಾದ ಪ್ರಶಸ್ತಿ, ಶಿವರಾಮ ಕಾರಂತ ವಿಜ್ಞಾನ ಪ್ರಶಸ್ತಿ, ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ. ತುಮಕೂರು ವಿಶ್ವವಿದ್ಯಾನಿಲಯವು 2015ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. 2021ರಲ್ಲಿ ಸಮಾನಮನಸ್ಕರೆಲ್ಲ ಸೇರಿ "ಡಾ. ಟಿ ಆರ್ ಅನಂತರಾಮು ವಿಜ್ಞಾನ ಪ್ರತಿಷ್ಠಾನ" ಆರಂಭಿಸಿದ್ದು ಈ ಪ್ರತಿಷ್ಠಾನವು ವಿಜ್ಞಾನ ಪ್ರಸರಣ, ವಿಜ್ಞಾನ ಮಾಸಪತ್ರಿಕೆ ಪ್ರಕಟಣೆ, ವಿದ್ಯಾರ್ಥಿಗಳಿಗೆ ವಿಜ್ಞಾನದಲ್ಲಿ ಆಸಕ್ತಿ ಮೂಡಿಸುವ ಕಾರ್ಯಗಳಲ್ಲಿ ತೊಡಗಿದೆ ಎಂದ ಶ್ರೀಮತಿ ಜಿ.ವಿ.ನಿರ್ಮಲಾ ಅವರು ಡಾ ಟಿ ಆರ್ ಅನಂತರಾಮುರವರ ವೃತ್ತಿ ಪ್ರವೃತ್ತಿಗಳ ಬಗ್ಗೆ ಪರಿಚಯ ನೀಡಿ ಅವರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು.

ನಂತರ ಡಾ ಟಿ.ಆರ್.ಅನಂತರಾಮುರವರು "ಬದಲಾದ ಹವಾಗುಣ ಮತ್ತು ಬದಲಾಗುತ್ತಿರುವ ಜೀವನ" ಎಂಬ ವಿಷಯದ ಕುರಿತು ಸುಮಾರು ಒಂದು ಗಂಟೆ ಕಾಲ ಉಪನ್ಯಾಸ ನೀಡಿದರು. ಅದರ ಸಾರಾಂಶ ಇಂತಿದೆ:

ಇತ್ತೀಚೆಗೆ ಮಳೆ ಕಾರಣಕ್ಕೆ ರೆಡ್ ಎಲರ್ಟ್, ಯೆಲ್ಲೋ ಅಲರ್ಟ್ ಕೊಡುವುದನ್ನು ಗಮನಿಸಿರುತ್ತೀರಿ .ಕರಾವಳಿ ತೀರ ಪ್ರದೇಶದ ಮೀನುಗಾರರಿಗೆ ಕೊಡುವ ಇಂತಹ ಸೂಚನೆಗಳನ್ನು ಒಳನಾಡಿಗೂ ಕೊಡುತ್ತಿರುವುದು ಮಳೆಯ ಪರಿಣಾಮವನ್ನು ತೋರಿಸುತ್ತದೆ. ಬೆಂಗಳೂರಿನಲ್ಲೇ 1972ರ ಡಿಸೆಂಬರ್ ತಿಂಗಳಲ್ಲಿ ಚಳಿ ತಡೆಯಲು ರೈಲು ನಿಲ್ದಾಣದ ಬಳಿಯಲ್ಲಿ ಟಿಬೆಟಿಯನ್ನರು ಮಾರುವ ಸ್ವೆಟರ್‌ಗಳನ್ನು ಖರೀದಿಸುತ್ತಿದ್ದೆವು. ಈಗ ಮಳೆ, ಚಳಿ ಮತ್ತು ಬೇಸಿಗೆ ಕಾಲಗಳು ಒಂದರ ಮೇಲೊಂದು ಬಂದು ಋತುಗಳ ಬದಲಾವಣೆ ಕ್ರಮವೇ ತಪ್ಪಿತೇನೋ ಎನ್ನುವಂತಾಗಿದೆ. ಕಳೆದ 50 ವರ್ಷಗಳಲ್ಲಿ ಹವಾಗುಣ ಬಹಳಷ್ಟು ಬದಲಾಗಿದೆ. ದಿನನಿತ್ಯ ವಾತಾವರಣದಲ್ಲಿ ಆಗುವ ಬದಲಾವಣೆಯನ್ನು ಹವಾಮಾನದ ಬದಲಾವಣೆ ಎಂದರೆ ಶಾಶ್ವತವಾಗಿ ಆಗುವ ಬದಲಾವಣೆಗಳನ್ನು ಹವಾಗುಣ ಬದಲಾವಣೆ ಎನ್ನುತ್ತೇವೆ. ಇದನ್ನು ಗಂಭೀರವಾಗಿ ಗಮನಿಸಬೇಕಾಗುತ್ತದೆ .

ವರ್ಷಕ್ಕೆ 500 ಮಿಲಿಮೀಟರ್ ಮಳೆಯಾಗುತ್ತಿದ್ದ ಬೆಂಗಳೂರಿನಲ್ಲಿ ಸೆಪ್ಟೆಂಬರ್ ತಿಂಗಳೊಂದರಲ್ಲೇ 1100 ಮಿ.ಮೀ. ಮಳೆಯಾಗಿದೆ. ಬಂಗಾಳ ಕೊಲ್ಲಿ ಇಕ್ಕಟ್ಟಾಗಿದ್ದು ಇಲ್ಲಿ ಪ್ರತಿವರ್ಷ ಏಳುವ ಆರೇಳು ಚಂಡಮಾರುತಗಳು ಮತ್ತು ಹಿಂದೂ ಮಹಾಸಾಗರದಲ್ಲಿ ಏಳುವ ಚಂಡಮಾರುತಗಳು ಅಪಾರ ನಷ್ಟ ಉಂಟುಮಾಡುತ್ತಿವೆ.

ಗ್ಲೋಬಲ್ ವಾರ್ಮಿಂಗ್ (ಜಾಗತಿಕ ತಾಪಮಾನ) ಇಂದು ಜಗತ್ತನ್ನೇ ಕಾಡುತ್ತಿದೆ. ಈ ವ್ಯತ್ಯಯವನ್ನು ಶತಮಾನದ ಆರಂಭದಲ್ಲೇ ಗುರುತಿಸಿದ್ದರು. 1950ರಲ್ಲಿ ಇಂಗ್ಲೆಂಡಿನಿಂದ ಆರಂಭವಾದ ಕೈಗಾರಿಕಾ ಕ್ರಾಂತಿ ಕಾಲಕ್ರಮೇಣ ವಿವಿಧ

ದೇಶಗಳಲ್ಲಿ ಆರಂಭವಾಯ್ತು. ವಿಶ್ವದೆಲ್ಲೆಡೆ ಕಲ್ಲಿದ್ದಲು ಬಳಸಿ ಶಕ್ತಿ ಉತ್ಪಾದಿಸುತ್ತಿದ್ದು, ಈಗ ನಾವು ಕಲ್ಲಿದ್ದಲನ್ನು ತ್ಯಜಿಸಲಾರದ ಸ್ಥಿತಿ ತಲುಪಿದ್ದೇವೆ. ಇವತ್ತು ಇಂಧನದಲ್ಲಿ ಕಲ್ಲಿದ್ದಲು ಆದ್ಯತೆಯ ಪರಿಕರವಾಗಿ ಬಳಕೆಯಲ್ಲಿದ್ದು ಜಗತ್ತನ್ನೇ ಆಳುತ್ತಿದೆ .ಕಲ್ಲಿದ್ದಲ ಉತ್ಪಾದನೆಯಲ್ಲಿ ಭಾರತ ಮೂರನೆಯ ಸ್ಥಾನದಲ್ಲಿದೆ. ಭಾರತದಲ್ಲಿ 110 ಉಷ್ಣಸ್ಥಾವರಗಳಿವೆ. ದೇಶದ ಶೇಕಡ 70ರಷ್ಟು ಶಕ್ತಿ ಉತ್ಪಾದನೆ ಕಲ್ಲಿದ್ದಲಿನಿಂದ ಆಗುತ್ತದೆ. ರಾಯಚೂರು ಥರ್ಮಲ್ ಪ್ಲಾಂಟ್‌ನಲ್ಲಿಯೇ ದಿನವೊಂದಕ್ಕೆ 2000 ಟನ್ ಕಲ್ಲಿದ್ದಲು ಬೇಕಾಗುತ್ತದೆ ಕಲ್ಲಿದ್ದಲು ಉರಿಸಿದಾಗ ಕಾರ್ಬನ್ ಡೈ ಆಕ್ಸೈಡ್ ವಾಯುಗೋಳವನ್ನು ಸೇರುತ್ತಿರುವುದು ಸಮಸ್ಯೆಯಾಗುತ್ತಿದೆ .ಇಂಟರ್ ಗವರ್ನಮೆಂಟ್ ಪ್ಯಾನೆಲ್ ಆನ್ ಕ್ಲೈಮೆಟಿಕ್ ಚೇಂಜಸ್ (IPCC) ತಾಪಮಾನದ ಬಗ್ಗೆ ಮಾಹಿತಿ ನೀಡುತ್ತದೆ.

ವಾಯುಗೋಳದಲ್ಲಿ ನೈಟ್ರೋಜನ್ ಶೇಕಡ ಎಪ್ಪತ್ತು ಇರುತ್ತದೆ. ಕಾರ್ಬನ್ ಡೈ ಆಕ್ಸೈಡ್ ಪ್ರಮಾಣವನ್ನು ಪಾರ್ಟ್ ಪರ್ ಮಿಲಿಯನ್ (10 ಲಕ್ಷದಲ್ಲಿ ಒಂದು ಭಾಗ) ಎಂದು ಅಳೆಯಲಾಗುತ್ತದೆ. ಇಂಟರ್‌ನ್ಯಾಷನಲ್ ಸ್ಪೇಸ್ ಸ್ಟೇಷನ್ ದಿನಕ್ಕೆ 15 ಸಾರಿ ಭೂಮಿಯನ್ನು ಸುತ್ತುತ್ತದೆ ಜಪಾನಿನವರು ಇದರಲ್ಲಿ ಸ್ಪೆಕ್ಟಮ್ ಇರಿಸಿದ್ದು ಯಾವ ದೇಶಗಳು ಎಷ್ಟೆಷ್ಟು ಕಾರ್ಬನ್ ಡೈ ಆಕ್ಸೈಡ್ ಉತ್ಪಾದಿಸುತ್ತವೆ ಎನ್ನುವುದನ್ನು ಇದು ತೋರಿಸುತ್ತದೆ. ಪ್ರತಿವರ್ಷ 40 ಶತಕೋಟಿ ಟನ್ ಕಾರ್ಬನ್ ಡೈಆಕ್ಸೈಡ್ ವಾಯುಮಂಡಲ ಸೇರುತ್ತಿದೆ. ಅಮೆರಿಕ, ಚೀನಾ ತರುವಾಯ ಭಾರತ ಮೂರನೇ ಸ್ಥಾನದಲ್ಲಿದೆ. ನಮ್ಮಲ್ಲಿ ಜನಸಂಖ್ಯೆಯೂ ಹೆಚ್ಚು ಮತ್ತು ಶಕ್ತಿಯ ಬೇಡಿಕೆಯೂ ಹೆಚ್ಚು.

ಗ್ಲೋಬಲ್ ವಾರ್ಮಿಂಗ್ ಸಂಪೂರ್ಣವಾಗಿ ಮಾನವ ನಿರ್ಮಿತ ಅವಘಡವಾಗಿದೆ. ಕೈಗಾರಿಕೀಕರಣ ಬೇಕೇ ಬೇಕು, ಕಬ್ಬಿಣ ಅಲ್ಯೂಮಿನಿಯಂಗಳು ಅತಿ ಅಗತ್ಯ. ಆದರೆ ಇದರ ಪರಿಣಾಮ ಪ್ರಕೃತಿಯ ಮೇಲೆ ಹಲವಾರು ರೀತಿಯಲ್ಲಿ ಆಗುತ್ತಿದೆ ಒಂದು ವರ್ಷದಲ್ಲಿ 12 ಮಿಲಿಯನ್ ಹೆಕ್ಟೇರ್ ಕಾಡು ನಾಶವಾಗುತ್ತಿದೆ. ಪ್ರತಿ ಆರು ಸೆಕೆಂಡಿಗೆ ಒಂದು ಫುಟ್ಬಾಲ್ ಮೈದಾನದಷ್ಟು ಕಾಡು ನಾಶವಾಗುತ್ತಿದೆ ಅಮೆಜಾನ್ ಕಾಡು ವಿಶ್ವದ ಶ್ವಾಸಕೋಶವಿದ್ದಂತೆ. ಅದೂ ನಾಶವಾಗುತ್ತಿದೆ. ಉಪಗ್ರಹಗಳಿಂದ ಕಾಡು ನಾಶದ ಪ್ರಮಾಣ ತಿಳಿಯುತ್ತದೆ

ಉತ್ಪತ್ತಿಯಾಗುವ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣ ತಗ್ಗಿಸಲು ಪ್ರಕೃತಿಯೂ ನಮಗೆ ನೆರವಾಗುತ್ತದೆ. ಮರಗಳು ಮಣ್ಣು ಹಾಗೂ ಸಮುದ್ರವು ಕಾರ್ಬನ್ ಡೈಆಕ್ಸೈಡ್ ಹೀರಿ ಉಪಕರಿಸುತ್ತವೆ. ಸಮುದ್ರವು ಶೇಕಡ 40ರಷ್ಟು ಕಾರ್ಬನ್ ಡೈಆಕ್ಸೈಡ್ ಹೀರಿಕೊಳ್ಳುತ್ತಿದ್ದು, ಇನ್ನಷ್ಟು ಹೀರಿಕೊಳ್ಳಲಾರದ ಸಂತೃಪ್ತ ಸ್ಥಿತಿ ಮುಟ್ಟುತ್ತಿರುವುದು ಅಪಾಯಕಾರಿ ಸಂಗತಿಯಾಗಿದೆ. ಸಾಗರಗಳು ಆಮ್ಲೀಯವಾಗಿ ಜಲಚರಗಳಿಗೆ ಕುತ್ತು ಬಂದಿದೆ. ಆಸ್ಟ್ರೇಲಿಯಾದ ಈಶಾನ್ಯ ಭಾಗ ಅಂಡಮಾನ್ ಮತ್ತು ಲಕ್ಷದ್ವೀಪಗಳ ಹವಳದ ದಿಬ್ಬಗಳು ಬಿಳಚಾಗುತ್ತಿವೆ. ಗ್ಲೋಬಲ್ ವಾರ್ಮಿಂಗ್‌ನ ಪರಿಣಾಮ ಕಣ್ಣಿಗೆ ರಾಚುತ್ತಿದೆ. ಸುಮಾರು 140 ಕೋಟಿ ಜನಸಂಖ್ಯೆ ಇರುವ ಭಾರತದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ತಲೆಯ ಮೇಲೆ ಎರಡುವರೆ ಕೆಜಿ ಕಾರ್ಬನ್ ಡೈ ಆಕ್ಸೈಡ್ ಇದ್ದರೆ 38 ಕೋಟಿ ಜನಸಂಖ್ಯೆ ಇರುವ ಅಮೆರಿಕದ ಪ್ರತಿವ್ಯಕ್ತಿಯ ತಲೆ ಮೇಲೆ 20 ಕೆಜಿ ಇದೆ.

ಲಾಲ್‌ಬಾಗ್ ಗಾಜಿನಮನೆಯಲ್ಲಿ ಗಿಡಗಳನ್ನು ಬೆಳೆಸುವುದನ್ನು ನೋಡಿರಬಹುದು .ಇದಕ್ಕೆ ಬೇಕಾದ ಸೂರ್ಯನ ಶಾಖ ಒಳಗಿನ ಗಾಳಿ ಹಿಡಿದಿಟ್ಟಿರುವುದರಿಂದ ಸಿಗುತ್ತದೆ. ಉತ್ತರ ಧ್ರುವ, ದಕ್ಷಿಣ ದ್ರುವದಂತಹ ಶೀತಲ ಪ್ರದೇಶದಲ್ಲಿ ಗಾಜಿನ ಮನೆಗಳಲ್ಲಿ ಟೊಮೆಟೋ ಬದನೆಕಾಯಿಗಳನ್ನು ಬೆಳೆಯುತ್ತಾರೆ .

ಕಾರ್ಬನ್ ಡೈ ಆಕ್ಸೈಡ್ ಗಿಂತ೮ ಪಟ್ಟು ಹೆಚ್ಚು ಪ್ರಮಾಣದ ಶಾಖವನ್ನು ಹಿಡಿದಿಡಬಲ್ಲ ಮೀಥೇನನ್ನು ಪಾರ್ಟ್ ಪರ್ ಬಿಲಿಯನ್ (ಶತಕೋಟಿಗೆ ಒಂದು) ಎಂದು ಅಳೆಯಲಾಗುತ್ತದೆ. ಸಮುದ್ರದ ಆಳದಲ್ಲಿ, ಜೌಗು ಪ್ರದೇಶದಲ್ಲಿ, ಜಾನುವಾರುಗಳ ಉಸಿರಾಟದಲ್ಲಿ ಮೀಥೇನ್ ಇರುತ್ತದೆ.

ಆರ್ಕ್ಟಿಕ್ ಸರ್ಕಲ್‌ಗೆ ಅಮೆರಿಕ ರಷ್ಯಾ ದೇಶಗಳು ಅಲ್ಲಿ ದೊರೆಯುವ ದೊಡ್ಡ ಪ್ರಮಾಣದ ಅನಿಲ ನಿಕ್ಷೇಪಗಳನ್ನು ಅರಸಿ ಹೋಗುತ್ತಿವೆ. ನಾವು ಉತ್ಪಾದಿಸುವ ತೈಲ ನಮಗೆ ಶೇಕಡ 20ರಷ್ಟು ಕೂಡಾ ಸಾಕಾಗದು. ಸುಮಾರು ಶೇಕಡಾ ೮೦ರಷ್ಟನ್ನು ಸೌದಿ ಅರೇಬಿಯಾ, ಮಧ್ಯ ಪ್ರಾಚ್ಯವೇ ಮೊದಲಾದ ದೇಶಗಳಿಂದ ಆಮದು ಮಾಡಿಕೊಳ್ಳುತ್ತೇವೆ. ನಮ್ಮ ಬಹುತೇಕ ಹಣ, ಚಿನ್ನ ಮತ್ತು ತೈಲಗಳಿಗಾಗಿ ವ್ಯಯವಾಗುತ್ತಿದೆ. ನಾವು ಪ್ರತಿದಿನ 40 ಲಕ್ಷ ಬ್ಯಾರೆಲ್ ತೈಲ ಆಮದು ಮಾಡಿಕೊಳ್ಳುತ್ತೇವೆ. ಪ್ರತಿವರ್ಷ ಭಾರತದಲ್ಲಿ 23 ಕೋಟಿ ವಾಹನಗಳು ಉತ್ಪಾದನೆಯಾಗುತ್ತಿವೆ. ಇನ್ನು 30–40 ವರ್ಷಗಳಲ್ಲಿ ತೈಲೋತ್ಪಾದನೆ ಬರಿದಾಗುತ್ತದೆ.

ಗ್ಲೋಬಲ್ ವಾರ್ಮಿಂಗ್ ಕೃಷಿ ಮೀನುಗಾರಿಕೆಯ ಮೇಲೂ ಪ್ರಭಾವ ಬೀರುತ್ತದೆ ಜೈವಿಕ ವೈವಿದ್ಯ ನಾಶವಾಗುತ್ತಿದೆ ಸೆಟಲೈಟ್‌ಗಳ ಗ್ಲೇಸಿಯರ್ ಮಾನಿಟರ್‌ಗಳಿಂದ ಹಿಮಾಲಯದ ಹಿಮ ನದಿಗಳು ಮುಂಕ್ಕೆ ಹರಿಯವ ಬದಲು ಹಿಂದೆ ಸರಿಯುವುದನ್ನು ಗಮನಿಸಲಾಗಿದೆ. ನದಿಗಳು ಬತ್ತಿದರೆ ಮುಂದೇನು ಎಂಬ ಸಮಸ್ಯೆ ಕಾಡುತ್ತಿದೆ. ಜಲಕ್ಷಾಮ ತಪ್ಪಿಸಲು ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ

ಚಳಿಗೆ ಕಂಬಳ ಹೊದ್ದಂತೆ ಬೇಸಿಗೆಯಲ್ಲಿ ಕಂಬಳ ಹೊದ್ದರೆ ಏನಾದೀತು? ಉಷ್ಣವರ್ಧಕ ಅನಿಲಗಳು ಭೂಮಂಡಲದಲ್ಲಿ ಹೊದಿಕೆಯಂತೆ ಶಾಖವನ್ನು ಹಿಡಿದಿಟ್ಟುಕೊಂಡು ಅಂತರಿಕ್ಷಕ್ಕೆ ಸೇರಿಹೋಗದ ಹಾಗೆ ತಡೆಯುವುದರಿಂದ ಭೂಮಿಯ ಮೇಲೆ ಶಾಖ ಹೆಚ್ಚುತ್ತದೆ. ಈ ಉಷ್ಣವರ್ಧಕ ಅನಿಲಗಳಾದ ಕಾರ್ಬನ್ ಡೈ ಆಕ್ಸೈಡ್, ಮೀಥೇನ್, ನೈಟ್ರಸ್ ಆಕ್ಸೈಡ್ ಮತ್ತು ನೀರಿನ ಬಾಷ್ಪ ಇವನ್ನು ಗ್ರೀನ್ ಹೌಸ್ ಗ್ಯಾಸಸ್ ಎನ್ನುತ್ತಾರೆ.

ವಿಜ್ಞಾನದಲ್ಲಿ ಭೂಮಿಯ ಪಂಚಾಂಗವನ್ನು ನಾಲ್ಕು ಕಾಲಮಾನದಲ್ಲಿ ಅಳೆಯುತ್ತಾರೆ ಅಂಟಾರ್ಟಿಕಾದಲ್ಲಿ ಹಿಮಯುಗದ ಪಳಯುಳಿಕೆಗಳಿವೆ. ಶಿಲೆಯನ್ನು ಓದುವ ರೀತಿಯಿಂದ ಇವುಗಳನ್ನು ಅಭ್ಯಾಸ ಮಾಡಿ ಸಾವಿರಾರು ಯುಗದ ಇತಿಹಾಸ ಬಗೆಯುತ್ತಾರೆ. ಅಂಟಾರ್ಟಿಕಾವನ್ನು ವಿಜ್ಞಾನಕ್ಕೋಸ್ಕರ ಮುಡಿಪಾಗಿಟ್ಟಿದ್ದಾರೆ .ಒಂದು ವೇಳೆ ಗ್ಲೋಬಲ್ ವಾರ್ಮಿಂಗ್ ಹೀಗೆಯೇ ಮುಂದುವರೆದರೆ ಅಂಟಾರ್ಟಿಕಾದ ಹಿಮಕರಗಿ ಸಮುದ್ರಮಟ್ಟ ಹೆಚ್ಚುತ್ತದೆ.

ಗಾಳಿಯು ಕೆಂಗೇರಿಯಲ್ಲೂ ಹಂಗೇರಿಯಲ್ಲೂ ಒಂದೇ. ಚಿಕ್ಕಪೇಟೆಯಲ್ಲಿ ಉರಿಸಿದ ಬೆಂಕಿಯಿಂದ ಎದ್ದ ಕಲ್ಮಶ, ಧೂಳು, ಉಷ್ಣ, ಉತ್ತರ ದ್ರುವದ ಗೋಳಕ್ಕೆ ಹೋಗುತ್ತದೆ ಕರೋನ ವೈರಸ್ ಹರಡಿದ್ದು ಎಲ್ಲರಿಗೂ ಗೊತ್ತೇ ಇದೆ. ಐಪಿಸಿಸಿ (Inter-governmental Panel on Climatic Changes) ಯು ವಾತಾವರಣದಲ್ಲಿ ಶಾಖ ಎರಡು ಡಿಗ್ರಿಯಷ್ಟು ಹೆಚ್ಚುವ ಎಚ್ಚರಿಕೆ ನೀಡಿದೆ. ಇದು ಅಪಾಯಕಾರಿ. ಎಲ್ಲ ದೇಶಗಳೂ ಇದರ ಹೊಣೆ ಹೊತ್ತು ಪ್ರಿ ಇಂಡಸ್ಟ್ರಿಯಲ್ ಲೆವೆಲ್‌ಗೆ ತರುವ ಪ್ರಯತ್ನ ಮಾಡಬೇಕೆಂದು ತಿಳಿಸಿದೆ. ಈ ಶುದ್ಧಗೊಳಿಸುವ ಕ್ರಿಯೆ (anthropocene) ಸುಲಭ ಸಾಧ್ಯವಲ್ಲ.

ಈಗೀಗ ಪರ್ಯಾಯಗಳ ಬಗ್ಗೆ ಆಲೋಚಿಸಲು ಆರಂಭಿಸಿದ್ದೇವೆ. ನಮ್ಮ ದೇಶವು ಪರ್ಯಾಯ ವ್ಯವಸ್ಥೆಯತ್ತ ಹೆಜ್ಜೆ ಇರಿಸಿದ್ದು, ಸೌರಶಕ್ತಿ (ಸೋಲಾರ್ ಎನರ್ಜಿ) ಕಡೆ ಮುಖ ಮಾಡಿದೆ. ಪಾವಗಡದ ಹತ್ತಿರ ದೇಶದಲ್ಲೇ ಎರಡನೆಯದಾದ ದೊಡ್ಡ ಸೋಲಾರ್ ಪಾರ್ಕ್ ನಿರ್ಮಿಸಿದೆ. ಎಲ್ಲ ದೇಶಗಳು ಕಾಲಮಿತಿಯಲ್ಲಿ ಕಾರ್ಬನ್ ಡೈಆಕ್ಸೈಡ್ ಪ್ರಮಾಣ ತಗ್ಗಿಸಬೇಕಾಗಿದೆ. ಉಷ್ಣ ಸ್ಥಾವರಗಳನ್ನು ಒಮ್ಮೆಲೇ ನಿಲ್ಲಿಸುವುದು ಸಾಧ್ಯವಿಲ್ಲ ಹಂತತಹಂತವಾಗಿ ನಿಲ್ಲಿಸಬೇಕಾಗಿದೆ. ಜಾಗತಿಕ ತಾಪಮಾನ ಸರಾಸರಿ 139 ಡಿಗ್ರಿ ಸೆಲ್ಸಿಯಸ್ ಎನ್ನಲಾಗಿದೆ. ತಾಪಮಾನ ತಗ್ಗಿಸಲು ಅಂತರರಾಷ್ಟ್ರೀಯ ಸಹಕಾರ ಅಗತ್ಯ .ರಾಜಕೀಯ ನಿರ್ಧಾರಗಳು, ಯುದ್ಧಗಳ ಪರಿಣಾಮ ಸಂಪನ್ಮೂಲಗಳ ಮೇಲೆ ಆಗುತ್ತದೆ. ನಿಸರ್ಗದ ಸಂಪನ್ಮೂಲಗಳ ಕೊಳ್ಳು ಕೊಡುವಿಕೆಯೂ ಅನಿವಾರ್ಯ.

ಈಗ ಆಟೋಗಳಿಗೆ ಗ್ಯಾಸ್ ಬಳಸುತ್ತಿದ್ದು ಹೊಗೆ ಸ್ವಲ್ಪ ಕಡಿಮೆಯಾಗಿದೆ. ಬೀದಿ ದೀಪಗಳಿಗೆ ಜೋಗದ ವಿದ್ಯುತ್ ಬದಲು ಸೋಲಾರ್ ಅಳವಡಿಸಬಹುದು. ಕೇವಲ ಪ್ಯಾರಿಸ್, ಕ್ಯೋಟೋ ಒಪ್ಪಂದಗಳಿಂದ ಏನೂ ಆಗುವುದಿಲ್ಲ ಸರ್ಕಾರ ದಿಟ್ಟ ಕ್ರಮ ಕೈಗೊಂಡರೆ ಬದಲಾವಣೆ ಸಾಧ್ಯ.

ಅಕಾಲಿಕ ಮಳೆ ಅಸಾಮಾನ್ಯ ಪ್ರಕೃತಿಯ ಬದಲಾವಣೆಗೆ ಮನುಷ್ಯನೇ ಕಾರಣ. ಮನುಷ್ಯ ಭೂಮಿಯ ಸಂಪನ್ಮೂಲಗಳ ಮತ್ತು ಎಲ್ಲ ಜೀವ ಪ್ರಭೇದಗಳ ಮೇಲೆ ಅಧಿಕಾರ ಚಲಾಯಿಸುತ್ತಿದ್ದಾನೆ ನಿಸರ್ಗವನ್ನು ಪಳಗಿಸಲು ಹೋದರೆ ಅದು ಮೌನವಾಗಿ ತಿರುಗಿ ಬೀಳುತ್ತದೆ. ಗ್ಲೋಬಲ್ ವಾರ್ಮಿಂಗ್ ತಡೆಯಲು ನೆಟ್ ಜೀರೋ ಅಂದರೆ ಎಷ್ಟು ಕಾರ್ಬನ್ ಉತ್ಪತ್ತಿಯಾಗುತ್ತದೋ ಅಷ್ಟು ಗಾಳಿಯಲ್ಲಿ ಹೀರುವಂತೆ ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದ ತಂತ್ರಜ್ಞಾನ ಬಳಸಬೇಕು .ಅರಣ್ಯ ಹೆಚ್ಚಿಸಬೇಕು

ಉಷ್ಣವರ್ಧಕ ಅನಿಲಗಳ ಪ್ರಮಾಣ ತಗ್ಗಿಸಲು ಕ್ರಮ ಸುಲಭ ಸಾಧ್ಯವಲ್ಲ. ಈ ನಿಟ್ಟಿನಲ್ಲಿ ಗಂಭೀರವಾಗಿ ಆಲೋಚಿಸಬೇಕಾಗಿದೆ ಎಂದರು

ನಂತರ ನಡೆದ ಸಂವಾದದಲ್ಲಿ ಕೇಳುಗರ ಪ್ರಶ್ನೆಗಳಿಗೆ ಉತ್ತರಿಸಿದ ಶ್ರೀ ಅನಂತರಾಮು ಅವರು, ನನ್ನೊಬ್ಬನಿಂದ ಏನಾಗುತ್ತದೆ ಎಂದುಕೊಳ್ಳದೆ ಪ್ರತಿಯೊಬ್ಬರೂ ಬದಲಾವಣೆಗೆ ಶ್ರಮಿಸಬೇಕು. ಮರಗಳನ್ನು ದತ್ತು ತೆಗೆದುಕೊಂಡು ಬೆಳೆಸಬೇಕು. ಪರಿಸರದ ಬಗ್ಗೆ ಮಕ್ಕಳಲ್ಲಿ ಪ್ರೀತಿ ಮೂಡಿಸಬೇಕು .ಜನರನ್ನು ಈ ದಿಸೆಯಲ್ಲಿ ಸುಶಿಕ್ಷಿತರನ್ನಾಗಿಸುವುದು ಅಗತ್ಯ ಎಂದರು

ಕಾರ್ಯಕ್ರಮ ನಿರ್ವಹಣೆ ಮಾಡಿದ ಶ್ರೀ ಬೆಂ ಶ್ರೀ ರವೀಂದ್ರ ರವರು ಮಾತನಾಡಿ, ಅರಿವು ಮೂಡಿಸುವ, ಅಂತರಾತ್ಮ ಚುಚ್ಚುವ ಚಿಂತನೀಯವಾದ ಮಾಹಿತಿಪೂರ್ಣ ಉಪನ್ಯಾಸ ನೀಡಿದ ಡಾ.ಟಿ.ಆರ್. ಅನಂತರಾಮುರವರಿಗೆ ವೇದಿಕೆಯ ಎಲ್ಲರ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು. ಅತಿಥಿಗಳನ್ನು ಅತ್ಯುತ್ತಮವಾಗಿ ಪರಿಚಯಿಸಿದ ಶ್ರೀಮತಿ ಜಿ.ವಿ. ನಿರ್ಮಲರವರಿಗೆ, ಆತಿಥ್ಯವಹಿಸಿದ ಶ್ರೀಮತಿ ರೇಣುಕಾ ದೇಸಾಯಿ ಹಾಗೂ ತಂತ್ರಜ್ಞಾನ ನಿರ್ವಹಣೆ ಮಾಡಿದ ಶ್ರೀ ಗುರುರಾಜ ಶಾಸ್ತ್ರಿ ಅವರಿಗೆ ಮತ್ತು ವೀಕ್ಷಕರಾಗಿ ಆಗಮಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು..

***

ಕಥಾ ಪ್ರಪಂಚ

ಕಥಾ ಚಿಂತನ ~ ಮನೋಮಂಥನ

ಪಂಡಿತ್ ರಾಮಶರ್ಮಾ ಆಚಾರ್ಯ

– ವಿಠ್ಠಲ್ ಇಜೇರಿ

ಕಥೆಗಳಲ್ಲಿ ಸ್ವಾರಸ್ಯ ಕಾಣದಿರುವವರು ಅಪರೂಪ.

ಎಲ್ಲ ಕಾಲದಲ್ಲೂ, ಎಲ್ಲ ದೇಶಗಳಲ್ಲೂ ಮಾರ್ಮಿಕವಾದ, ಬೋಧಪ್ರದ ಕತೆಗಳು ಎಲ್ಲ ವಯಸ್ಸಿನವರಿಗೂ, ಎಲ್ಲ ವರ್ಗದವರಿಗೂ ಆಸಕ್ತಿಕರವಾಗಿವೆ. ನಮ್ಮ ದೇಶದ ಸಂತರು ಸಮಾಜದಲ್ಲಿ, ಸಾರ್ವಜನಿಕರಲ್ಲಿ ನೈತಿಕ ಮತ್ತು ಮೌಲಿಕ ಗುಣಗಳು ಸುಲಭವಾಗಿ ಲಭಿಸಲಿ ಎಂದು ಸ್ವಾರಸ್ಯಪೂರ್ಣ ಕತೆಗಳನ್ನು ತಮ್ಮ ಪ್ರವಚನಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಹೇಳುತ್ತಿದ್ದರು ಮತ್ತು ಗ್ರಂಥಗಳ ರೂಪದಲ್ಲಿ ನೀಡುತ್ತಿದ್ದರು. ಕಥೆಯು ಒಂದು ಕಲಾಕೃತಿ, ಕತೆಯ ತಿರುಳು ಮತ್ತು ಅಂತಃಸ್ಸತ್ವವನ್ನು ಕಥೆಗಾರ ಮಾರ್ಮಿಕವಾಗಿ ಅಡಗಿಸಿರುತ್ತಾನೆ ಮತ್ತು ಸುಲಭವಾಗಿ ತಿಳಿಸಿಕೊಡುತ್ತಾನೆ. ಕಥೆಯು ನಿರೂಪಣೆಗೊಂಡಾಗ ಓದುಗನಿಗೆ ಸಂತೋಷ ಮತ್ತು ಸಮಾಧಾನದ ಅನುಭವವಾದರೆ ಅಂಥ ಕಥೆಯು ಸಾರ್ಥಕ. ಕತೆಗಳನ್ನು ಓದುವುದರಿಂದ ಇಲ್ಲವೇ ಕೇಳುವುದರಿಂದ ಮನಸ್ಸಿನ ಅಂತಃಸ್ಸತ್ವ ಹೆಚ್ಚುವುದು ಮತ್ತು ಆತ್ಮಶಕ್ತಿ ವೃದ್ಧಿಸುವುದು. ಕಥೆ ಕೇಳುವುದರಿಂದ ಸಂಕುಚಿತ ಮನಸ್ಸು ಅರುಳುವುದು. ಪ್ರಸ್ತುತ ಕಥಾ ಚಿಂತನ, ಮನೋಮಂಥನ ಗ್ರಂಥದಲ್ಲಿ ನಮ್ಮ ದೇಶದ ಹಾಗೂ ಇತರ ದೇಶದ ಸಾಕಷ್ಟು ಮೌಲ್ಯಯುತ ಕತೆಗಳನ್ನು ಪ್ರಕಟಿಸಲಾಗಿದೆ. ಈ ಕತೆಗಳು ಮಕ್ಕಳಿಗೆ ಮತ್ತು ಹಿರಿಯರಿಗೂ ಇಷ್ಟವಾಗುವಂತಿವೆ. ಮೂಲ ಹಿಂದಿ ಗ್ರಂಥದಲ್ಲಿಯ 400ಕ್ಕೂ ಹೆಚ್ಚಿನ ಕತೆಗಳ ಪೈಕಿ ಬೋಧಪ್ರದವಾದ 150 ಕತೆಗಳನ್ನು ಈ ಸಂಗ್ರಹದಲ್ಲಿ ಕೊಡಲಾಗಿದೆ. ಮೂಲ ಹಿಂದಿ ಕತೆಗಳನ್ನು (ಪ್ರೇರಣಾಪ್ರದ ಧೃಷ್ಟಾಂತ) ರಚಿಸಿದವರು ಉತ್ತರ ಭಾರತದ ಹರಿದ್ವಾರದ ಗಾಯತ್ರಿ ತಪೋಭೂಮಿಯ ಪಂಡಿತ ಶ್ರೀರಾಮಶರ್ಮಾ ಆಚಾರ್ಯ ಅವರು. ಇದನ್ನು ಕನ್ನಡದಲ್ಲಿ ಅನುವಾದ ಮಾಡಿದವರು ಚಳ್ಳಕೆರೆ ಶಾರದಾಶ್ರಮದ ಮಾತಾ ತ್ಯಾಗಮಯಿ ಅವರು. ಅವರಿಗೆ ಸ್ಫೂರ್ತಿ ನೀಡಿ ಪ್ರಕಟಿಸಿದವರು ರಾಮಕೃಷ್ಣ ಆಶ್ರಮ ಮೈಸೂರು. ಈಗ ಒಂದೆರಡು ಚಿಕ್ಕ ಕತೆಗಳು:

ಕಥೆ–1 : ಸೌಂದರ್ಯ ಮತ್ತು ಲಜ್ಜೆ

ಪ್ರಜಾಪತಿಯು ಸೌಂದರ್ಯವನ್ನು ಸೃಷ್ಟಿಸುವುದರ ಜೊತೆಗೆ ಲಜ್ಜೆಯನ್ನೂ ಸೃಷ್ಟಿಸಿ ನೀವಿಬ್ಬರೂ ಸೋದರಿಯರು. ಒಬ್ಬರನ್ನೊಬ್ಬರು ರಕ್ಷಿಸುತ್ತ ಒಟ್ಟಿಗೆ ಇರಿ ಎಂದು ಆಜ್ಞಾಪಿಸಿದ. ಬಹಳ ಸಮಯ ಅವರಿಬ್ಬರೂ ಹಾಗೆಯೇ ಇದ್ದರು. ಒಂದು ದಿನ ಸೌಂದರ್ಯ ತನ್ನ ಸೋದರಿ ಲಜ್ಜೆಯನ್ನು ಗದರಿಸುತ್ತ ನಾನು ಪ್ರಪಂಚದ ಭೋಗಗಳನ್ನು ಅನುಭವಿಸಲು ಜನ್ಮ ತಾಳಿರುವೆ. ನೀನು ನನ್ನನ್ನು ಯಾವಾಗಲೂ ತಡೆಯುತ್ತಿರುವಿ, ನನ್ನ ಸುಖಕ್ಕೆ ಅಡ್ಡಿಪಡಿಸುತ್ತಿರುವಿ, ನನಗಿನ್ನು ನಿನ್ನ ಅವಶ್ಯಕತೆ ಇಲ್ಲ ಹೊರಟುಹೋಗು ಎಂದು ಹೇಳಿತು.

ಲಜ್ಜೆ "ಸೋದರಿ, ಹಾಗೆ ಹೇಳಬೇಡ, ನಿನ್ನ ರಕ್ಷಣೆ ನನ್ನ ಜವಾಬ್ದಾರಿ ಎಂದು ಸೃಷ್ಟಿಕರ್ತ ಹೇಳಿದ್ದಾನೆ" ಅಂದರೂ, ಸೌಂದರ್ಯಕ್ಕೆ ಲಜ್ಜೆಯ ಮಾತು ರುಚಿಸಲಿಲ್ಲ, ಲಜ್ಜೆಯನ್ನು ಓಡಿಸಿತು. ಸೌಂದರ್ಯ ಈಗ ಸ್ವಚ್ಛಂದವಾಗಿ ಬಾಳ ತೊಡಗಿತು. ಕ್ರಮೇಣ ಸೌಂದರ್ಯದ ಶಕ್ತಿ ಕುಂದಿತು. ಅದು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸ್ಥಿತಿಗೆ ತಲುಪಿದಾಗ ಪ್ರಜಾಪತಿ ಪ್ರತ್ಯಕ್ಷನಾಗಿ, "ಮಗು, ಹಾಗೆ ಮಾಡಬೇಡ. ಲಜ್ಜೆಯನ್ನು ತ್ಯಜಿಸಬೇಡ. ಅದು ನಿನ್ನ ರಕ್ಷಣೆಗೆ ಇರುವುದು " ಎಂದು ನುಡಿದನು.

ಕಥೆ –2 : ತಿರುಗಿ ಬರದ ಜೀವ

ಹಸನ್ ಒಬ್ಬ ರತ್ನದ ವ್ಯಾಪಾರಿ. ಒಮ್ಮೆ ವ್ಯವಹಾರದ ನಿಮಿತ್ತ ರೋಮ್ ನಗರಕ್ಕೆ ಹೋದ. ಅಲ್ಲಿಯ ಮಂತ್ರಿ ಹಸನ್ ಅವರ ಆತ್ಮೀಯ ಮಿತ್ರನಾದ. ಒಂದು ದಿನ ಮಂತ್ರಿ ತನ್ನ ಮಿತ್ರ ಹಸನ್‌ನನ್ನು ಹತ್ತಿರದ ಕಾಡಿಗೆ ಕರೆದುಕೊಂಡು ಹೋದ. ಅಲ್ಲೊಂದು ವಜ್ರ, ವೈಡೂರ್ಯಗಳಿಂದ ಅಲಂಕಾರಗೊಂಡ ಅಚ್ಚ ಬಿಳಿ ಡೇರೆ ಇತ್ತು. ಸುತ್ತಲೂ ಸೈನಿಕರಿದ್ದರು. ಹತ್ತಾರು ವೈದ್ಯರು, ಸಾಕಷ್ಟು ಸುಂದರ ಯುವಸುಂದರಿಯರು, ರಾಜಪಾರಿವಾರ ಇತ್ತು. ಸ್ವಲ್ಪ ಸಮಯ ಕಳೆಯಿತು. ಸೈನಿಕರು ಡೇರೆ ಸುತ್ತ ಸುತ್ತಿ ರೋಮನ್ ಭಾಷೆಯಲ್ಲಿ ಅದೇನೋ ಪ್ರಾರ್ಥನೆ ಸಲ್ಲಿಸಿ ಹೊರಟುಹೋದರು. ನಂತರ ಬಿಳಿ ಕೋಟು ಧರಿಸಿದ ಹಲವಾರು ವೈದ್ಯರು ಡೇರೆ ಸುತ್ತುಹಾಕಿ ಅದೇ ರೋಮನ್ ಪ್ರಾರ್ಥನೆ ಸಲ್ಲಿಸಿ ಹೋದರು. ನಂತರ ಸರ್ವಾಲಂಕೃತ ಸುಂದರಿಯರು ಕಳಶಗಳೊಂದಿಗೆ ಡೇರೆ ಸುತ್ತ ಸುತ್ತಿ ಪ್ರಾರ್ಥನೆ ಮಾಡಿದರು. ಆ ಮೇಲೆ ರಾಜಪರಿವಾರ ಹಾಗೆಯೇ ಅನುಸರಿಸಿದರು. ಹಸನ್ ಇದೆಲ್ಲ ಏನು? ಎಂದು ಕೇಳಿದ. ಮಂತ್ರಿ "ಕೆಲ ವರ್ಷಗಳ ಮುಂಚೆ ನಮ್ಮ ರಾಜಕುಮಾರ ತೀರಿಹೋದ. ಡೇರೆಯ ಒಳಗೆ ಅವನ ಸಮಾಧಿ ಇದೆ. ನಮ್ಮ ರಾಜರಿಗೆ ಅವನ ಮೇಲೆ ಬಹಳ ಪ್ರೀತಿ, ಭವಿಷ್ಯದ ಬಗ್ಗೆ ಭರವಸೆ ಇತ್ತು. ಯಾಕೆಂದರೆ ರಾಜಕುಮಾರ ಒಳ್ಳೇ ಶೂರ, ಧೀರ, ಜಾಣ, ಅಪ್ರತಿಮ ಸುಂದರ ಮತ್ತು ಅಪರೂಪದ ಗುಣವಂತನಾಗಿದ್ದನು. ಪ್ರತಿವರ್ಷ ಅವನ ವಾರ್ಷಿಕ ತಿಥಿಯ ದಿನ 'ಮಗು ನಿನ್ನನ್ನು ನಮ್ಮ ರಾಜ್ಯದ ಸಂಪತ್ತು, ವಿದ್ಯೆ, ಸೌಂದರ್ಯ, ಬಂಧುಬಾಂಧವರ ಪ್ರೀತಿ ಯಾವುದರಿಂದಲೂ ಮರಳಿ ಬದುಕಿಸಲು ಸಾಧ್ಯವಿಲ್ಲ, ಅದಕ್ಕಾಗಿ ನಿನ್ನ ಆತ್ಮಕ್ಕೆ ಸ್ವರ್ಗದಲ್ಲಿ ಶಾಂತಿ ಸಿಗಲಿ' ಎಂಬ ಆ ಪ್ರಾರ್ಥನೆಯೊಂದಿಗೆ ಮಹಾರಾಜರು ಈ ರೀತಿಯ ವಿಧಿಯನ್ನು ಕೈಗೊಳ್ಳುತ್ತಾರೆ" ಎಂದು ಹೇಳಿದ.

***

ಏರಿಸಿ, ಹಾರಿಸಿ, ಕನ್ನಡದ ಬಾವುಟ

ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಸಂಚಾಲಕ ಸಮಿತಿ, ಸಮನ್ವಯ ಸಮಿತಿ, ಕನ್ನಡವೇ ಸತ್ಯ ವೇದಿಕೆ

ಸಣ್ಣ ಕತೆ

ಭಾರತಿ

– ಎಲ್. ಗಿರಿಜಾರಾಜ್

ಹೌದು ಅವಳೊಬ್ಬ ನಿಗೂಢ ಮಹಿಳೆ. ಅವಳನ್ನು ಹೆಚ್ಚು ಜನ ನೋಡಿರಲಿಲ್ಲ. ಆದರೆ ನೋಡಿದವರೆಂದೂ ಮರೆಯಲಾರದ ವ್ಯಕ್ತಿತ್ವ ಅದು! ಅವಳದು ಬೆಳದಿಂಗಳನಂತಹ ಚೆಲುವು, ಅವಳ ಮಧುರಧ್ವನಿ, ಅನ್ಯಾಯಗಳನ್ನು ಕಂಡಾಗ ಸಿಡಿಲಿನಂತೆ ಮೊಳಗುತ್ತಿತ್ತು. ಸದಾ ಮಂದಸ್ಮಿತ ಭಾವ ಸೂಸುವ ತುಟಿಗಳು ಆಗ ಬಿಗಿದುಕೊಳ್ಳುತ್ತಿದ್ದವು. ಎಲ್ಲಕ್ಕಿಂತ ಹೆಚ್ಚಾಗಿ ಕೆಲವೊಮ್ಮೆ ಕ್ರೋಧಾಗ್ನಿ ಸೂಸುವ ಕಣ್ಣುಗಳು ಬಹುತೇಕ ಸಮಯಗಳಲ್ಲಿ ಕರುಣೆಯ ಕೊಳಗಳಂತಿರುತ್ತಿದ್ದವು.

ಎಲ್ಲಿ ದುಃಖಿತರಿದ್ದಾರೋ, ಎಲ್ಲಿ ದೀನರೋ, ಎಲ್ಲಿ ಅಳುವೋ, ಎಲ್ಲಿ ನಿರಾಶೆಯೋ, ಅವಳು ಅಲ್ಲಿ ಪ್ರತ್ಯಕ್ಷವಾಗುತ್ತಿದ್ದಳು. ಅಲ್ಲೆಲ್ಲಾ ಚೈತನ್ಯ, ಆಶಾಭಾವದ ಜೀವಂತಿಕೆಯ ಬೀಜಗಳನ್ನು ಚೆಲ್ಲಿ ಮರೆಯಾಗುತ್ತಿದ್ದಳು. ಅವು ಮೊಳಕೆಯೊಡೆದು ಚಿಗುರಿ ಅಲ್ಲೆಲ್ಲೂ ದುಃಖದ ನಿರಾಶೆಗಳ ಕಾರ್ಮೋಡ ಕವಿಯದಂತೆ ಸದಾ ನಗುವೇ ತುಂಬಿರುವಂತೆ ಮಾಡುತ್ತಿದ್ದವು. ಜನಗಳು ಅವಳಲ್ಲಿ ಆಪದ್ಬಾಂಧವಿಯನ್ನು ಕಂಡಿದ್ದರು.

ಒಮ್ಮೆ ಓಡುತ್ತಿದ್ದ ರೈಲಿನಲ್ಲಿ ಒಂದು ಮಗು ತುಂಬಾ ಗಲಾಟೆ ಮಾಡುತ್ತಿತ್ತು. ಏನು ಮಾಡಿದರೂ ಸುಮ್ಮನಾಗಲಿಲ್ಲ. ಬೋಗಿಯ ತುಂಬಾ ಅದರ ಆಕ್ರಂದನ ತುಂಬಿತು. ಅಲ್ಲಿ ಇದ್ದಕ್ಕಿದ್ದಂತೆ ಒಂದು ಹೊಸ ಸುಗಂಧ ತುಂಬಿಕೊಂಡಿತು. ಒಬ್ಬ ಹೆಣ್ಣುಮಗಳು ಅಲ್ಲಿಗೆ ಇದ್ದಕ್ಕಿದ್ದಂತೆ ಬಂದಳು. ಮಗುವಿನ ಕೆನ್ನೆ ಸವರಿ ಮುತ್ತಿಟ್ಟು, ಅದರ ಬೊಗಸೆ ತುಂಬಾ ಚಾಕಲೇಟು ಹಣ್ಣುಗಳನ್ನು ತುಂಬಿದಳು. ಸಾಲದೆ ಅದರ ಫ್ರಾಕ್‌ನ್ನು ಸರಿಯಾಗಿ ಅಗಲಿಸಿ ಅದರ ಮಡಿಲಿಗೂ ತುಂಬಿದಳು. ಅವಳನ್ನು ಬೆರಗಿನಿಂದ ನೋಡುತ್ತಾ ಮಗು ಕಿಲಕಿಲನೇ ನಗತೊಡಗಿತು. ಜನರೆಲ್ಲಾ ಆ ದೃಶ್ಯವನ್ನು ಅಚ್ಚರಿಯಿಂದ ನೋಡು ನೋಡುತ್ತಿರುವಂತೆ ಅವಳು ಅಲ್ಲಿಂದ ಕ್ಷಣಾರ್ಧದಲ್ಲಿ ಕಣ್ಮರೆಯಾದಳು.

ಸ್ವಲ್ಪ ದಿನಗಳ ನಂತರ ಸಾಯಬೇಕೆಂದು ರೈಲ್ವೆ ಹಳಿಗಳ ಮೇಲೆ ಮಲಗಿದ್ದ ಯುವಕನೊಬ್ಬನನ್ನು ಹೆಣ್ಣುಮಗಳೊಬ್ಬಳು ರೈಲು ಧಾವಿಸುತ್ತಿದ್ದಂತೆ ಹಾರಿ, ಅನಾಮತ್ತಾಗಿ ಎತ್ತಿ ಅಪಾಯದಿಂದ ಪಾರುಮಾಡಿದ ವಿಷಯ ಜನಮಾನಸದಲ್ಲಿ ಹರಿದಾಡತೊಡಗಿತು. ಅಷ್ಟೇ ಅಲ್ಲ, ಆ ಯುವಕ ಹೇಳಿದಂತೆ "ದೇವರು ಜನ್ಮ ನೀಡಿರುವುದು ಬದುಕುವುದಕ್ಕೆ! ಹೇಡಿಗಳು ಮಾತ್ರ ಸಾಯುತ್ತಾರೆ, ಬದುಕಿ ಸಾಧಿಸು, ಧೀರನಾಗು ವಿವೇಕಾನಂದರು ನಿನ್ನ ಆದರ್ಶವಾಗಲಿ ಎಂದು ನನ್ನ ಕಿವಿಯಲ್ಲಿ ಉಸುರಿ ಹೋದಳು ಆ ದೇವತೆ" ಎಂದನಂತೆ. ಮತ್ತೊಂದೆಡೆ ಯುವತಿಯೊಬ್ಬಳೊಂದಿಗೆ ಬಹಳ ಅಸಭ್ಯನಾಗಿ ನಡೆದುಕೊಳ್ಳುತ್ತಿದ್ದ ಯುವಕನಿಗೆ ದವಡೆ ಹಲ್ಲು ಮುರಿಯುವಂತೆ ಕಪಾಳಕ್ಕೆ ಹೊಡೆದು, ಬುದ್ಧಿ ಕಲಿಸಿದ್ದಳಂತೆ ಅವಳು. ಇಂತಹ ಅದೆಷ್ಟೋ ಕೆಲಸಗಳನ್ನು ಮಾಡಿ ಮನೆ ಮಾತಾದಳು ಆಕೆ. ಬಡವರ ಕಷ್ಟಗಳಿಗೆ ಸದ್ದಿಲ್ಲದಂತೆ ಹಣ ಒದಗಿಸಿ, ಸುದ್ದಿ ಮಾಡದೆ, ತನ್ನ ಪರಾಕು ಹೇಳಿಕೊಳ್ಳದೆ ಅವರಿಗೆ ಒಳ್ಳೆಯದನ್ನು ಹಾರೈಸಿ ಕಣ್ಮರೆಯಾಗಿ ಬಿಡುತ್ತಿದ್ದಳು. ಯಾರೋ ಸಾಹಸಿ ತರುಣರಿದ್ದರು. ಕಷ್ಟಪಟ್ಟು ಆಕೆಯ ಬಗ್ಗೆ ಕೆಲವು ವಿಷಯಗಳನ್ನು ಸಂಗ್ರಹಿಸಿದರು.

ಸುಮಾರು 35 ವರ್ಷದ ಮಹಿಳೆ. "ಭಾರತಿ" ಅವಳ ಹೆಸರು. ಗಂಡನ ದೌರ್ಜನ್ಯ, ಶೋಷಣೆಗಳಿಂದ ನೊಂದು, ವಿದ್ಯಾವಂತೆಯಾದ ಅವಳು ಸಮಾಜಕ್ಕೆ ಏನಾದರೂ ಸಹಾಯ ಮಾಡಲೇಬೇಕು, ಅದಕ್ಕೆ ಮುನ್ನ ನಾನು ದೈಹಿಕವಾಗಿ ಮತ್ತು ಮಾನಸಿಕವಾಗಿ ಶಕ್ತಳಾಗಬೇಕೆಂದು ಒಂದು ಯೋಗಶಾಲೆ ಸೇರಿ, ದೇಹ ದಂಡಿಸಿ, ಆಧ್ಯಾತ್ಮಿಕ ವಿಷಯಗಳಲ್ಲಿ ಪರಿಣತಳಾಗಿ ಪ್ರಾಣಾಯಾಮ ಸಮಾಧಿಸ್ಥಿತಿಯನ್ನು ಅಭ್ಯಾಸ ಮಾಡಿರುವುದಲ್ಲದೆ ಕರಾಟೆ ವಿದ್ಯೆ ಬಲ್ಲಳಂತೆ. ಶ್ರೀ ವಿವೇಕಾನಂದರ ಜಾಗೃತ ಚೇತನವೇ ಅವಳಿಗೆ ಗುರುವಂತೆ. ಮಾತ್ರವಲ್ಲ, ಆರಾಧ್ಯ ದೈವವಂತೆ, ಅವಳಿಗೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದು ಇಷ್ಟವಿಲ್ಲ. ಒಳ್ಳೆಯ ಕೆಲಸಗಳಿಗೆ ನೂರು ವಿಘ್ನಗಳನ್ನು ತಂದೊಡ್ಡುವ ದುಷ್ಟಶಕ್ತಿಗಳ ಕಣ್ಣು ಬಿದ್ದರೆ ತನ್ನ ಪ್ರಯತ್ನ, ಸೇವೆಗಳು ಮಣ್ಣುಪಾಲಾಗುತ್ತದೆ ಎಂಬ ಅರಿವು ಆಕೆಗಿತ್ತು.

ಪತ್ರಿಕೆಯವರು ತರುಣರನ್ನು ಸಂದರ್ಶಿಸಿ "ನೀವು ಹೇಗೆ ವಿಷಯಗಳನ್ನು ಸಂಗ್ರಹಿಸಿದಿರಿ" ಎಂದು ದುಂಬಾಲು ಬಿದ್ದು ಬಲವಂತ ಮಾಡಿದಾಗ ಆಕೆ ಇರುವ ಸ್ಥಳ ಕಂಡುಹಿಡಿದು ಸಂದರ್ಶಿಸಿದುದಾಗಿ ಒಪ್ಪಿಕೊಂಡರೇ ಹೊರತು ಯಾವುದೇ ಕಾರಣಕ್ಕೂ ಆಕೆಯಿರುವ ಸ್ಥಳದ ಮಾಹಿತಿ ನೀಡಲು ನಿರಾಕರಿಸಿದರು. ಕೆಲವು ಶ್ರೀಮಂತ ಸಾರ್ವಜನಿಕರು ಹಣದ ಆಮಿಷವನ್ನು ಆ ತರುಣರಿಗೆ ಒಡ್ಡಿದರೂ ಅವರು ಮರುಳಾಗದೆ, "ನಾವು ಆ ದೇವತೆಗೆ ನೀಡಿದ ವಚನಕ್ಕೆ ಬದ್ಧರಾಗಿರುತ್ತೇವೆ ,ನೀವು ನಮ್ಮಿಂದ ಸ್ಥಳದ ಬಗ್ಗೆ ತಿಳಿದುಕೊಂಡರೂ ಪ್ರಯೋಜನವಾಗಲಾರದು, ಖಂಡಿತ ಆಕೆ ಸ್ಥಳ ಬದಲಾಯಿಸಿರುತ್ತಾಳೆ. ಸಮಾಜಕ್ಕೆ ಒಳ್ಳೆಯದು ಮಾಡುತ್ತಿರುವ ಆಕೆಯ ಬೆನ್ನಿಗೆ ಏಕೆ ಬೀಳುತ್ತೀರಿ? ಇವತ್ತು ಜನರಿಗೆ ಅಂತ ದಯಾಮಯ ಸ್ತ್ರೀ ಶಕ್ತಿಯ ಅವಶ್ಯಕತೆಯಿದೆ. ಬಿಟ್ಟುಬಿಡಿ ಅವರ ಪಾಡಿಗೆ ಅವರನ್ನು... ನೀಚರನ್ನು ಕಳ್ಳರನ್ನು ಕೊಲೆಗಡುಕರನ್ನು ಅತ್ಯಾಚಾರಿಗಳನ್ನು ಬಯಲಿಗೆ ತನ್ನಿ" ಎಂದಾಗ ಅಲ್ಲಿ ಗುಂಪುಗೂಡಿದ್ದ ಪತ್ರಿಕಾ ವರದಿಗಾರರಿಗೆ, ಪೋಲೀಸರಿಗೆ, ಜನರಿಗೆ 'ಸರಿ' ಎನಿಸಿತು.

ಅರೆ! ಅಲ್ಲಿ ಇದ್ದಕ್ಕಿದ್ದಂತೆ ಅದೇ ಸುಗಂಧದ ಅಲರು ತೀಡಿದಂತೆ ಭಾಸವಾಯಿತು. ಒಂದು ಸುಮಧುರ ಮಮತೆಯ ದನಿ ಕೇಳಿಸಿತು. "ಧನ್ಯವಾದಗಳು ಯುವ ಬಂಧುಗಳೇ!". "ಅದೇ ದೇವತೆಯ ದನಿಯಿದು" ಎಂದರು ಅವರಿಬ್ಬರೂ... ಎಲ್ಲರೂ ಅತ್ತಿತ್ತ ಓಡಾಡಿ ಹುಡುಕಲಾರಂಭಿಸಿದರು. ಆದರೆ ಆಕೆ ಯಾರಿಗೂ ಕಾಣಿಸಲಿಲ್ಲ.

"ಧೀಮಂತ ತಾಯಿ! ನೊಂದವರ ಆಶಾಕಿರಣ. ನಿನಗೆ ಒಳ್ಳೆಯದಾಗಲಿ" ಎಂದು ಹಾರೈಸುತ್ತ ಎಲ್ಲರೂ ಚದುರಿದರು.

***

ಲಘು ಬರಹ

ಹೇಳಿ, ಇವಳೇಕೆ ಕಳ್ಳಿ?

– ಶೀಲಾ ಅರಕಲಗೂಡು

ಬೆಳಗಿನ ಸಮಯ. ಸುಮಾರು ಹನ್ನೊಂದು ಗಂಟೆಯಾಗಿರಬಹುದು. ಯಾರೋ ಬಾಗಿಲು ಬಡಿದಂತಾಗಿ ಅಡುಗೆ ಮನೆಯಲ್ಲಿದ್ದ ಭವಾನಿ, 'ಯಾರು ಬಂದಿರಬಹುದು ಈಗ? ಗ್ಯಾಸ್ ಸಿಲಿಂಡರ್ ಕೊಡುವವನು ನಿನ್ನೆಯೇ ಕೊಟ್ಟು ಹೋಗಿದ್ದಾನೆ. ಪೋಸ್ಟ್‌ಮನ್ ಬರುವ ಸಮಯವಿನ್ನೂ ಆಗಿಲ್ಲ. ಅವನು ಬಂದರೂ ಬಾಗಿಲು ಬಡಿಯದೆ 'ಪೋಸ್ಟ್' ಎಂದು ಕೂಗುತ್ತಾ ಪತ್ರಗಳನ್ನು ಬಾಗಿಲಲ್ಲೇ ಹಾಕಿ ಹೋಗುತ್ತಾನೆ. ಮೇಲಿನ ಮನೆಗೆ ಬಾಡಿಗೆಗೆ ಈಗಾಗಲೇ ಹೊಸಬರು ಬಂದಿರೋದ್ರಿಂದ ಮನೆ ಕೇಳಿಕೊಂಡು ಯಾರೂ ಬಂದಿರೋದಿಲ್ಲ. ಅಂದ್ಮೇಲೆ, ಮತ್ಯಾರಿರಬಹುದು?' ಎಂದು ಅಡುಗೆ ಮನೆಯಿಂದ ಹೊರ ಬಾಗಿಲಿಗೆ ಬರುವಷ್ಟರಲ್ಲಿ ಹಲವಾರು ಆಲೋಚನೆಗಳು, ಊಹೆಗಳನ್ನು ಮನದಲ್ಲಿಯೇ ಮಾಡಿದಳು.

ಭವಾನಿ ಬಾಗಿಲು ತೆರೆಯುವ ಮುಂಚೆ ಹಾಗೇ ಕಿಟಕಿಯಲ್ಲಿ ಬಗ್ಗಿ ನೋಡಿ, ತನ್ನ ಹಳೆಯ ಗೆಳತಿ ಸೀತಾಳನ್ನು ಕಂಡು, 'ಏ ಸೀತಾ, ನೀನೇನೇ? ಬಾ ಬಾ' ಎನ್ನುತ್ತಾ ನಗೆ ಮೊಗದಿಂದ ಅವಳನ್ನು ಒಳ ಕರೆದಳು.

ಸೀತಾ, ಭವಾನಿಯರ ಗೆಳೆತನ ಅವರ ಹೈಸ್ಕೂಲ್ ಕಾಲದಿಂದಲೂ ಇತ್ತು. ಆಗ ಅವರಿದ್ದುದು ಚನ್ನಗಿರಿಯಂತಹ ಸಣ್ಣ ಊರಿನಲ್ಲಿ. ಇಬ್ಬರ ಮನೆಗಳೂ ಹತ್ತಿರ ಹತ್ತಿರ ಇದ್ದುದರಿಂದ ಸ್ಕೂಲಿಗೆ ಒಟ್ಟಿಗೇ ಹೋಗೋದು ಬರೋದು ಮಾಡ್ತಿದ್ದರು. ಸೀತಾ ಮೊದಲಿನಿಂದಲೂ ಒಂದು ರೀತಿಯ ಸಂಕೋಚ ಪ್ರವೃತ್ತಿಯವಳು. ಬೇರೆಯವರೊಂದಿಗೆ ಬೆರೆಯಲು ಹಿಂಜರಿಯುತ್ತಿದ್ದವಳು. ಮನೆ ಹತ್ತಿರವೇ ಇದ್ದು ತನ್ನ ತರಗತಿಯಲ್ಲೇ ಓದುತ್ತಿದ್ದುದರಿಂದ ಭವಾನಿಯೊಂದಿಗಿನ ಒಡನಾಟ ಅವಳಿಗೆ ಹಿತವಿತ್ತು.

ಹೈಸ್ಕೂಲ್ ಮುಗಿದ ನಂತರ ಸೀತಾ, ಭವಾನಿ ಇಬ್ಬರೂ ಪಿಯುಸಿ ಓದಲು ಒಂದೇ ಕಾಲೇಜಿಗೆ ಸೇರಿದ್ದರು. ಸೀತಾಳ ಮನೆಯವರು, ಭವಾನಿ ಜೊತೆಗಿರ್ತಾಳೆ ಎನ್ನುವ ಕಾರಣಕ್ಕೆ ಸೀತಾಳನ್ನೂ ಅದೇ ಕಾಲೇಜಿಗೆ ಸೇರಿಸಿದ್ದರು. ಆದರೆ, ಒಂದೆರಡು ತಿಂಗಳಾಗುವಷ್ಟರಲ್ಲೇ ಭವಾನಿಯ ತಂದೆಗೆ ಬೆಂಗಳೂರಿಗೆ ವರ್ಗಾವಣೆ ಆಗಿದ್ದರಿಂದ ಭವಾನಿ ಮನೆಯವರೊಂದಿಗೆ ಬೆಂಗಳೂರಿಗೆ ಹೋಗಬೇಕಾಯಿತು.

ಪಾಪ! ಸೀತಾ ಆಗ ಒಬ್ಬಂಟಿಯಾದಳು. ಭವಾನಿಯ ಜೊತೆಯಿಲ್ಲದೆ ಆಕೆ ಸ್ವಲ್ಪ ಮಂಕಾದಳು. ಕಾಲೇಜಿಗೆ ಹೋಗುತ್ತಿದ್ದ ಸೀತಾ ಆಕಡೆ ಈಕಡೆ ನೋಡದೆ ತಾನಾಯ್ತು ತನ್ನ ಕಾಲೇಜು ದಾರಿಯಾಯ್ತು ಅಂತ ಹೋಗುವ, ಹಿಂದಿರುಗುವ ರೂಢಿ ಮಾಡಿಕೊಂಡಳು. ಅಷ್ಟಕ್ಕೂ ಅವಳು ಅಂತಹ ಚುರುಕಿನ ಹುಡುಗಿಯೂ ಆಗಿರಲಿಲ್ಲ, ಬುದ್ಧಿ ಸ್ವಲ್ಪ ಮಂಡಿ ಕೆಳಗೆ ಅಂದರೆ ತಪ್ಪೇನಿಲ್ಲ. ಆದರೂ ಒಳ್ಳೆಯ ಹುಡುಗಿ. ಬಾಯಲ್ಲಿ ಬೆರಳಿಟ್ಟರೆ ಕಚ್ಚೋಕೆ ಬರೋಲ್ಲ ಅಂತಾರಲ್ಲ, ಅಂಥ ಹುಡುಗಿ ಅವಳು. ಹಾಗಂತ ಯಾರೂ ಇನ್ನೂವರೆಗೂ ಅವಳ ಬಾಯಲ್ಲಿ ಬೆಟ್ಟಿಟ್ಟು ನೋಡಿಲ್ಲ ಸಧ್ಯ!

ಅಂತೂ ಇಂತೂ ಡಿಗ್ರಿ ಮುಗಿಸಿದ ಸೀತಾಳ ಮದುವೆ ಹಳ್ಳಿಯ ಹುಡುಗನೊಂದಿಗೆ ಆಯಿತು. ಮದುವೆಯಾದ ನಂತರ ಸೀತಾ ಗಂಡನೊಂದಿಗೆ ಹಳ್ಳಿಗೆ ಹೋಗಿ ನೆಲೆಸಿದಳು, ಪಕ್ಕಾ ಹಳ್ಳಿ ಹುಡುಗಿಯೇ ಆಗಿ ಹೋದಳು. ಇಷ್ಟಾದರೂ, ಆಗೊಮ್ಮೆ ಈಗೊಮ್ಮೆ ಭವಾನಿಯೊಂದಿಗೆ ಫೋನಿನಲ್ಲಿ ಮಾತನಾಡುತ್ತಾ ಅವಳೊಂದಿಗೆ ಸಂಪರ್ಕವನ್ನೂ, ಗೆಳೆತನವನ್ನೂ ಇಟ್ಟುಕೊಂಡಿದ್ದಳು.

ಹೀಗೆ ಹಲವಾರು ವರ್ಷಗಳೇ ಉರುಳಿಹೋದವು. ಭವಾನಿ, ಸೀತಾ ಇಬ್ಬರೂ ಈಗ ಹತ್ತಿರ ಹತ್ತಿರ ಐವತ್ತರ ವಯಸ್ಸನ್ನು ಸಮೀಪಿಸಿದ್ದರು. ಸೀತಾಳ ಮಗಳು ಮದುವೆಯಾಗಿ ಗಂಡನ ಮನೆ ಸೇರಿದ್ದಳು. ಮಗ ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿದ್ದ. ಅವನು ಮನೆಯೊಂದನ್ನು ಮಾಡಿಕೊಂಡು ಜೀವನ ನಡೆಸುತ್ತಿದ್ದ. ಅವನಿಗೆ ಅಡುಗೆ ಮಾಡಿಕೊಂಡು ಕೆಲಸಕ್ಕೆ ಹೋಗೋದು ಬಹಳ ಕಷ್ಟ ಅನ್ನಿಸಿದ್ದರಿಂದ ಸೀತಾ ಆರು ತಿಂಗಳ ಕೆಳಗೆ ಬೆಂಗಳೂರಿಗೆ ಶಿಫ್ಟ್ ಆದಳು. ಬೆಂಗಳೂರಿಗೆ ಬಂದ ನಂತರ ಸೀತಾ ಆಗಾಗ್ಗೆ ಭವಾನಿಯೊಂದಿಗೆ ಭೇಟಿಯಾಗುತ್ತಿದ್ದಳು. ಹಾಗಾಗಿ ಇಂದು ಸೀತಾ ಭವಾನಿಯ ಮನೆಗೆ ಬಂದಾಗ ಭವಾನಿ ಅವಳನ್ನು ಸಂತೋಷದಿಂದ ಒಳ ಬರಮಾಡಿಕೊಂಡಳು.

ಒಳಬಂದ ಸೀತಾ ಸೋಫಾ ಮೇಲೆ ಕುಳಿತಳು. ಮುಖ ಪೆಚ್ಚಾಗಿತ್ತು. 'ಏನಾಯ್ತೆ ಸೀತಾ? ಯಾಕೆ ಪೆಚ್ಚಾಗಿದ್ದಿ?' ಎಂದು ಕೇಳುತ್ತಿದ್ದ ಹಾಗೆ, ಸೀತಾ ಕಣ್ಣಲ್ಲಿ ನೀರು ತುಂಬಿಕೊಂಡು 'ಭವಾನಿ, ನೀನೇ ಹೇಳೆ. ನಾನು ಕಳ್ಳಿ ತರಹ ಕಾಣಿಸ್ತೀನೇನೆ?' ಎಂದು ಕೇಳುತ್ತಾ ಬಿಕ್ಕಿದಳು.

ಆತಂಕಗೊಂಡ ಭವಾನಿ, 'ಏ ಸೀತಾ, ನೀನು... ಕಳ್ಳಿಯಾಗೋದೇ? ಏನು ಮಾತಾಡ್ತಿದ್ದೀಯ ನೀನು? ಏನಾಯ್ತು ಅನ್ನೋದನ್ನ ಬಿಡಿಸಿ ಹೇಳೇ' ಎನ್ನುತ್ತಾ ಅವಳ ಕೈಹಿಡಿದು ಮಮತೆಯಿಂದ ಅವಳ ತೋಳು ಸವರಿ ಕೇಳಿದಳು. ಸೀತಾ ವಿವರವಾಗಿ ತಿಳಿಸತೊಡಗಿದಳು.

'ನೋಡೇ ಭವಾನಿ. ನಾನೊಂಥರಾ ಹಳ್ಳಿ ಗುಗ್ಗು ಅಂತ ನಿಂಗೆ ಗೊತ್ತೇ ಗೊತ್ತು. ಮೊನ್ನೆ ದಿನ ನನ್ನ ಮಗ ಒಂದು ದೊಡ್ಡ ಹೋಟೆಲ್ಲಿಗೆ ಕರೆದುಕೊಂಡು ಹೋದ. ಅವನಿಗೆ ಅದೇನೋ ಅಕರಾಸ್ತೆ, ತನ್ನಮ್ಮನೊಂದಿಗೆ ದೊಡ್ಡ ಹೋಟೆಲ್ಲಿನಲ್ಲಿ ಊಟ ಮಾಡಬೇಕು ಅಂತ. ಅಲ್ಲಿ ಹೋದ್ವಾ, ಕುಳಿತ ನಂತರ ಟೇಬಲ್ ಮೇಲಿಟ್ಟಿದ್ದ ಪ್ಲೇಟುಗಳ ಪಕ್ಕ ಕಂದು ಬಣ್ಣದ ಒಂದು ಚಂದದ ಬಟ್ಟೆಯ ವಸ್ತ್ರ ಇಟ್ಟಿದ್ದರು. ಅದೇಕೆಂದು ಮಗನನ್ನು ಕೇಳ್ದೆ. ಅದಕ್ಕವನು ಕೈ ಒರೆಸಿಕೊಳ್ಳೋಕೆ ಅಥವಾ ತೊಡೆ ಮೇಲೆ ಹಾಕಿಕೊಳ್ಳೋಕೆ ಅಂದ. ನಾನು ಬೇರೆ ಕಡೆಗಳಲ್ಲಿ ಕಾಗದದ ಟಿಷ್ಯೂ ಇಡುವುದನ್ನು ಗಮನಿಸಿದ್ದೆ. ಕಾಗದದ ಟಿಷ್ಯೂಗಳಲ್ಲಿ ಕೈ ಒರೆಸಿ ನಂತರ ಕಸದ ಡಬ್ಬಿಯಲ್ಲಿ ಬಿಸಾಕುವುದನ್ನೂ ಗಮನಿಸಿದ್ದೆ. ಈ ಹೋಟೆಲ್ಲು ಬಲು ದೊಡ್ಡ ಹೋಟೆಲ್ಲಾದ್ದರಿಂದ ಪೇಪರ್ ಟಿಷ್ಯೂ ಬದಲಾಗಿ ಈ ಚಂದದ ವಸ್ತ್ರ ಇಟ್ಟಿದ್ದಾರೆಂದುಕೊಂಡೆ. ಇಲ್ಲೂ ಎಲ್ಲರೂ ಆ ವಸ್ತ್ರಗಳಲ್ಲಿ ಕೈ ಬಾಯಿ ಒರೆಸಿಕೊಂಡು ಕಸದ ಡಬ್ಬಿಯಲ್ಲಿ ಬಿಸಾಡುತ್ತಾರೆ ಅಂದ್ಕೊಂಡೆ. ಛೇ, ಪ್ರತಿದಿನ ಇಷ್ಟೊಂದು ವಸ್ತ್ರಗಳನ್ನು ಬಿಸಾಡುತ್ತಾರಲ್ಲಾ! ಇವರಿಗೆ ಮನಸ್ಸಾದರೂ ಹೇಗೆ ಬರುತ್ತದೆ? ಅದಕ್ಕೇ ಊಟಕ್ಕೆ ಇಷ್ಟೊಂದು ಚಾರ್ಜ್ ಮಾಡುತ್ತಾರೇನೋ!.... ಅಂತೆಲ್ಲಾ ಮನದಲ್ಲೇ ಯೋಚಿಸಿ, ನಾನಂತೂ ಈ ರೀತಿ ಡಂಭಾಚಾರ ಮಾಡ್ದೆ, ನ್ಯಾಷನಲ್ ವೇಸ್ಟ್ ತಡೆಗಟ್ಟಬೇಕು ಅಂದ್ಕೊಂಡು ಆ ಚಂದದ ವಸ್ತ್ರವನ್ನು ಕೈ ಚೀಲದಲ್ಲಿ ಹಾಕ್ಕೊಂಡು ಮನೆಗೆ ಬಂದೆ. ಅಲ್ನೋಡಿದರೆ ನನ್ನ ನಾದಿನಿ ಮನೆ ಹತ್ತಿರ ಬಂದು ಕಾಯ್ತಿದ್ದಳು. ಒಳಗೆ ಹೋದಮೇಲೆ ಕರವಸ್ತ್ರ ತೋರಿಸಿ ಅದನ್ನು ತಂದದ್ದೇಕೆಂದು ವಿವರಿಸಿ ಹೇಳಿದೆ. ಅದಕ್ಕವಳು, 'ಏನತ್ತಿಗೇ, ಕರವಸ್ತ್ರ ಕಳ್ಳತನ ಮಾಡಿಬಿಟ್ರಾ? ಛೇ ಛೇ, ನೀವೊಂಥರಾ ನೈತಿಕ ಕಳ್ಳಿ' ಅನ್ನುತ್ತಾ ನಕ್ಕುಬಿಟ್ಟಳು ಕಣೇ ಭವಾನಿ. ನೀನೇ ಹೇಳೇ. ನಾನು ಕಳ್ಳಿ ಏನೇ? ನಂಗೆ ಖಂಡಿತ ಗೊತ್ತಿರಲಿಲ್ಲ ಕಣೇ, ಅವನ್ನು ಅಲ್ಲಿ ಒಗೆದು ಮರು ಬಳಕೆ ಮಾಡುತ್ತಾರೆ ಅಂತ. ವೇಸ್ಟ್ ಆಗಬಾರದೆಂದು ಯೋಚಿಸಿ ನಾನದನ್ನು ಮನೆಗೆ ತಂದಿದ್ದು ಕಣೇ.'

ವಿವರಿಸಿದ ಸೀತಾ ತುಂಬಾ ಅಮಾಯಕಳಾಗಿ ಕಂಡಳು. ಭವಾನಿ ಉಕ್ಕಿಬಂದ ನಗೆಯನ್ನು ತಡೆಯಲಾಗದೆ ಗೊಳ್ ಎಂದು ನಗುತ್ತಾ ಅವಳನ್ನು ಪ್ರೀತಿಯಿಂದ ತಬ್ಬಿದಳು.

ನೀವೇ ಹೇಳಿ, ಸೀತಾ ನಿಜಕ್ಕೂ ಕಳ್ಳಿಯೇ? ***

ಇಂಗ್ಲೀಷ್ ಸಿಲೆಬಲ್ಲು ಹಾಗೂ ಕನ್ನಡ ಸ್ವರಗಳು

– ಜೀವಿ. ಹೆಗಡೆ

ಯಾವುದೇ ಭಾಷೆಯ ಶಬ್ದವಿರಲಿ ಅದು ಒಂದು ಅಥವಾ ಹೆಚ್ಚು ಅಕ್ಷರಗಳನ್ನು ಹೊಂದಿರುವದು ಎಲ್ಲರಿಗೂ ಗೊತ್ತು. ಅವುಗಳನ್ನು ಸ್ವರಗಳು (Vowel) ಹಾಗೂ ವ್ಯಂಜನಗಳು (Consonant) ಎಂದು ವಿಂಗಡಿಸುವದುಂಟು. ಆದರೆ ಇದನ್ನು ನಾನು ಇಂಗ್ಲೀಷ್ ಹಾಗೂ ಕನ್ನಡ ಭಾಷೆಗಳಿಗಷ್ಟೇ ಸೀಮಿತಗೊಳಿಸಿದ್ದೇನೆ ಇಲ್ಲಿ. (ಸಂಸ್ಕೃತ ಹಾಗೂ ಕನ್ನಡ ಭಾಷೆಗಳು ಈ ಮಟ್ಟಿಗೆ ಒಂದೇ ಗುಣಧರ್ಮದವುಗಳು)

ಕನ್ನಡದಲ್ಲಿ 'ಅ ದಿಂದ ಅಃ' ತನಕದ ವರ್ಣಗಳನ್ನು ಸ್ವರಗಳೆಂದೂ, ಕ ದಿಂದ ಳ ತನಕದ ವರ್ಣಗಳನ್ನು ವ್ಯಂಜನಗಳೆಂದೂ ಕರೆಯುತ್ತಾರೆ. (ಅಂ ಹಾಗೂ ಅಃ ಗಳನ್ನು ಪ್ರತ್ಯೇಕವಾಗಿ ಯೋಗವಾಹಗಳೆಂದು ಗುರುತಿಸುತ್ತಾರೆ. ಅಂ ಅನ್ನು ಅ+ಮ್ ಅಂತಲೂ, ಅಃ ವನ್ನು ಅ+ಹ್ ಅಂತಲೂ ಗುರುತಿಸಬಹುದು).

ಇನ್ನೂ ಸೂಕ್ಷ್ಮವಾಗಿ ವ್ಯಂಜನವನ್ನು ವಿಂಗಡಿಸುವಾಗ 'ಕ' ಕಾರದಿಂದ 'ಳ' ಕಾರ ಎನ್ನುವ ಬದಲಾಗಿ ವ್ಯಂಜನಗಳು 'ಕ್ ದಿಂದ ಳ್' ತನಕ ಎನ್ನುತ್ತಾರೆ. ಕ, ಕಾ, ಕಿ ಗಳು ಕ್+ಅ, ಕ್+ಆ, ಕ್+ಇ ಹೀಗೆ. ಆದುದರಿಂದಲೇ ಕ್ ಇದು ಶುದ್ಧ ವ್ಯಂಜನ. ಕ ಸ್ವರಾಂತ ವ್ಯಂಜನ.

ಈಗ ಕನ್ನಡದಲ್ಲಿ ಶುದ್ಧ ವ್ಯಂಜನಾಂತ ಶಬ್ದಗಳಿಲ್ಲ. ಹಳಗನ್ನಡದಲ್ಲಿ ಕೆಲವು ವ್ಯಂಜನಾಂತಗಳನ್ನು ಗಮನಿಸಬಹುದು. (ಅಡರ್ದೇಱಿ ಕೋಡಗಂಗಳ್). ಆದರೆ ಈಗ ಇದನ್ನು ಕೋಡಗಂಗಳು ಅಂತಲೇ ಬರೆಯುತ್ತಾರೆ. ಹೈಸ್ಕೂಲ್ ಎನ್ನುವ ಇಂಗ್ಲೀಷ್ ಶಬ್ದವನ್ನೂ ಹೈಸ್ಕೂಲು ಅಂತ ಬರೆಯುವದನ್ನು ಕಾಣುತ್ತೇವೆ.

ಇಂಗ್ಲೀಷಿನಲ್ಲಿ ಸಾಮಾನ್ಯವಾಗಿ ಸ್ವರಾಂತ (ಉಚ್ಚಾರಾಂಶ) ಶಬ್ದಗಳಿಲ್ಲ. ಎಲ್ಲಾ ಶಬ್ದಗಳು ಸಾಮಾನ್ಯವಾಗಿ ವ್ಯಂಜನಾಂತವೇ ಆಗಿರುತ್ತವೆ. (ಆದರೂ Go, He ಮೊದಲಾದವುಗಳು ಸ್ವರಾಂತ ಶಬ್ದಗಳು- open, ಉಳಿದವುಗಳು ವ್ಯಂಜನಾಂತ-closed). a, e, i, o, u ಇವು ಸ್ವರಗಳೆಂದು ಗುರುತಿಸಲ್ಪಟ್ಟರೂ ಉಚ್ಚರಿಸುವಾಗ ಎ, ಇ, ಐ, ಓ, ಯು ಅಂತ ಆಗುತ್ತವೆ. 'ಯು' ಇದು ಕನ್ನಡದಲ್ಲಿ ಸ್ವರೋಚ್ಚಾರವಲ್ಲ. (ಕೆಲವರು u ಅನ್ನು ಊ ಅಂತಲೂ ಗುರುತಿಸುತ್ತಾರೆ)

ಕನ್ನಡದಲ್ಲಿ ಸ್ವರಗಳು ಹೇಗಿವೆಯೋ ಹಾಗೆ ಉಚ್ಚರಿಸಲ್ಪಡುತ್ತವೆ. ಗ್+ಉ= ಗು, ಚ್+ಔ =ಚೌ, ಯ್+ಇ=ಯಿ ಹೀಗೆ. ಆದರೆ ಇಂಗ್ಲೀಷ್‌ನಲ್ಲಿ ಹಾಗಲ್ಲ. ಇ (e) ಬಂದಾಗ ಎ (ಪೆಟ್, ಗೆಟ್, ಬೆಸ್ಟ್), ಐ (i) ಬಂದಾಗ ಇ (ಪಿಗ್, ಕಿಂಗ್, ಸಿಸ್ಟರ್), (u) ಯು ಬಂದಾಗ ಉ ಅಥವಾ ಅ (ಪುಟ್, ಬರ್ಸ್ಟ್ ಅಥವಾ ಬಟ್), ಎ (a) ಬಂದಾಗ ಎ,ಐ,ಅ ಅಥವಾ ಆ (ಕೇರ್, ಕಾರ್) ಹೀಗೆ ಬೇರೆ ಬೇರೆ ರೀತಿಯಿಂದ ಸ್ವರಗಳ ಉಚ್ಚಾರವಾಗುವದುಂಟು.

ಎರಡಕ್ಕಿಂತ ಹೆಚ್ಚು ಸ್ವರಗಳೂ ಒಂದೇ ಕಡೆ ಸೇರಿ ಇಂಗ್ಲೀಷ್ ಶಬ್ದಗಳಾಗುತ್ತವೆ. ಅವುಗಳಿಗೆ ಸ್ವರಗಳ ಗುಂಪು (vowel team) ಎನ್ನುತ್ತಾರೆ. ಸೌಂಡ್ (sound), ಕ್ಲಿಯರ್ (clear) ಇತ್ಯಾದಿ.

e ಕೊನೆಯಲ್ಲಿರುವ ಶಬ್ದಗಳು ಸಹ ಇಂಗ್ಲೀಷಿನಲ್ಲಿ ಸ್ವರಾಂತವಾಗಿರುವದಿಲ್ಲ. ಉದಾ: ಸಿಂಪಲ್ **(simple)**, ಟೆಂಪಲ್ **(temple).**

ಇಂಗ್ಲೀಷ್‌ನಲ್ಲಿ ಸ್ವರಗಳನ್ನು ಸಿಲಬಲ್ **(syllable)** ರೀತಿಯಿಂದ ಲೆಕ್ಕ ಹಾಕುತ್ತಾರೆ. ಇವು ಕನ್ನಡ ಸ್ವರಗಳನ್ನು ಅವಲಂಬಿಸುತ್ತವೆ.

'Syllable is a part of a word that contains a single vowel sound and that is pronounced as a unit.' (ಸ್ವರಾಂತವಾದ (ಉಚ್ಚಾರಾಂಶ) ಘಟಕವಾಗಿರುವ ಒಂದು ಶಬ್ದದ ಭಾಗವನ್ನು ಸಿಲಬಲ್ ಎನ್ನುವರು)

ಇಂಗ್ಲೀಷ್ ಶಬ್ದವನ್ನು ಸ್ವರಾಂತವಾದ (ಉಚ್ಚಾರಾಂಶ) ಘಟಕಗಳಿಂದ ವಿಂಗಡಿಸುತ್ತಾರೆ. **Ca|r** (ಕಾ।ರ್) ಇಲ್ಲಿ ಕಾ ಎನ್ನುವದು ಒಂದು ಸಿಲಬಲ್. ಆದರೆ ರ್ ಸಿಲಬಲ್ ಅಲ್ಲ. ಯಾಕೆಂದರೆ ಕಾ ಎನ್ನುವಲ್ಲಿ ಕ್+ಆ ಆಕಾರಾಂತ. ಆದರೆ ರ್ ಸ್ವರಾಂತವಲ್ಲ.

Pu|ni|shmen|t (ಪ।ನಿ।ಶ್ಮೆಂ।ಟ್) ಇಲ್ಲಿ ಅ।ಇ।ಎ ಮೂರು ರೀತಿಯ ಸ್ವರಾಂತ ಘಟಕಗಳಿವೆ. ಆದುದರಿಂದ ಮೂರು ಸಿಲಬಲ್‌ಗಳು ಹಾಗೂ ಕೊನೆಯ ಟ್ ಸ್ವರಾಂತವಲ್ಲದೇ ಇದ್ದುದರಿಂದ ಸಿಲಬಲ್ ಅಲ್ಲ.

I|nsta|lmen|t (ಇ।ನ್ಸ್ಟಾ।ಲ್ಮೆಂ।ಟ್) ಇಲ್ಲಿ ಇ।ಆ।ಎ। ಮೂರು ರೀತಿಯ ಸ್ವರಾಂತ ಘಟಕಗಳಿವೆ. ಆದುದರಿಂದ ಮೂರು ಸಿಲಬಲ್‌ಗಳು ಹಾಗೂ ಕೊನೆಯ ಟ್ ಸ್ವರಾಂತವಲ್ಲದೇ ಇರುವುದರಿಂದ ಸಿಲಬಲ್ ಅಲ್ಲ.

Pri|nci|p|le (ಪ್ರಿ।ನ್ಸಿ।ಪ।ಲ್) ಇಲ್ಲಿ ಇ।ಇ।ಅ। ಮೂರು ರೀತಿಯ ಸ್ವರಾಂತ ಘಟಕಗಳಿವೆ. ಆದುದರಿಂದ ಮೂರು ಸಿಲಬಲ್‌ಗಳು ಹಾಗೂ ಕೊನೆಯ ಲ್ ಸ್ವರಾಂತವಲ್ಲದೇ ಇರುವದರಿಂದ ಸಿಲಬಲ್ ಅಲ್ಲ. (e ಎನ್ನುವದು ಸ್ವರವಾದರೂ ಉಚ್ಚಾರದಲ್ಲಿ ಕಾಣಿಸಿಕೊಳ್ಳುವದಿಲ್ಲ.)

Pri|nci|pa|l (ಪ್ರಿ।ನ್ಸಿ।ಪಾ।ಲ್) ಇಲ್ಲಿ ಇ।ಇ।ಆ। ಮೂರು ರೀತಿಯ ಸ್ವರಾಂತ ಘಟಕಗಳಿವೆ. ಆದುದರಿಂದ ಮೂರು ಸಿಲಬಲ್‌ಗಳು ಹಾಗೂ ಕೊನೆಯ ಲ್ ಸಿಲಬಲ್ ಅಲ್ಲ.

Sou|nd (ಸೌಂ।ಡ್) ಇಲ್ಲಿ ಇಂಗ್ಲೀಷಿನ ಎರಡು ಸ್ವರಗಳು **(vowel -o & u)** ಇದ್ದರೂ ಔ ಒಂದೇ ಸ್ವರಾಂತ ಘಟಕ. ಆದುದರಿಂದ ಒಂದು ಸಿಲಬಲ್ ಹಾಗೂ ಡ್ ಸಿಲಬಲ್ ಅಲ್ಲ.

Go (ಗೋ) **she** (ಶೀ) ಇವು ಸ್ವರಾಂತ ಘಟಕ. ವ್ಯಂಜನಾಂತ ಅಲ್ಲ. ಒಂದೇ ಸಿಲಬಲ್‌ಗಳು. **(Open syllable** ಗೆ ಉದಾಹರಣೆ)

ಇವುಗಳನ್ನು ಗಮನಿಸಿದಾಗ ಕನ್ನಡದ ಸ್ವರಗಳನ್ನು ಇಂಗ್ಲೀಷಿನ ಶಬ್ದಗಳಿಗೆ ಸಮೀಕರಿಸಿ ಸಿಲಬಲ್‌ಗಳನ್ನು ಗುರುತಿಸಬಹುದಲ್ಲವೇ?

***

ಮನೆ ಮಾರಾಟಕ್ಕಿದೆ

– ನಾಗರತ್ನ ಚಂದ್ರಶೇಖರ್

ಎಲ್ಲಿ? ಎಷ್ಟು? ಅಂತ ಎಲ್ಲರೂ ಕೇಳುವುದಿಲ್ಲ ಬಿಡಿ. ಏಕೆಂದರೆ ಈ ಸುದ್ದಿ ಹೊಸ ಹೋಟೆಲ್ ಪ್ರಾರಂಭವಾದಷ್ಟು ಬಿಸಿ ಬಿಸಿ ಆಗಿರಲಿಕ್ಕಿಲ್ಲ. ಯಾರಿಗೆ ಮನೆ ಬೇಕಾಗಿದೆ ಅವರು ಮಾತ್ರ ಈ ಸುದ್ದಿಯ ಹಿಂದೆ ಹೋಗುತ್ತಾರೆ. ಅಷ್ಟಕ್ಕೂ 'ಮನೆ ಬಾಡಿಗೆಗೆ ಇದೆ' ಎಂದು ಎಷ್ಟೋ ಮನೆಗಳ ಮುಂದೆ ಪುಟ್ಟ ಬೋರ್ಡ್ ಹಾಕಿರುವಂತೆ, 'ಮನೆ ಮಾರಾಟಕ್ಕಿದೆ' ಎಂದು ಬೋರ್ಡ್ ಹಾಕುವವರು ವಿರಳಾತಿವಿರಳ. ಅದಕ್ಕಾಗಿ ನಾವು ಎಸ್ಟೇಟ್ ಏಜೆನ್ಸಿಗಳ ಮರ್ಜಿ ಹಿಡಿಯಲೇಬೇಕು.

ಎರಡು ವರ್ಷಗಳಿಂದ ನಮ್ಮದೇ ಮನೆಯೊಂದನ್ನು ಮಾರಾಟಕ್ಕಿಟ್ಟು, ನಾವು ಪಡೆದ ಅನುಭವಗಳಲ್ಲಿ ಕೆಲವನ್ನು ಮಾತ್ರ ಈ ಲೇಖನದಲ್ಲಿ ಹೇಳಬಹುದು ಆರು ನಿಮಿಷಗಳ ಅವಧಿಯೊಳಗೆ.

ವಿದೇಶದಲ್ಲಿ ಮನೆ ಮಾರಾಟದ ಬಗ್ಗೆ ನನ್ನ ಪುಸ್ತಕ "ಮನೆಯೊಂದು ಮೂರು ಬಾಗಿಲು"ನಲ್ಲಿ ಹೇಳಿರುವೆ. ಆದರೆ ಇಲ್ಲಿನ ಚಿತ್ರಣ ಬೇರೆಯದೇ.

ಮನೆ ನೋಡಲು ಹೋದಾಗ ಮೊದಲು ಕೇಳುವ ಪ್ರಶ್ನೆ ಅದು ಯಾವ ದಿಕ್ಕಿಗಿದೆ? ಪೂರ್ವಕ್ಕೆ ಇದ್ದರೆ ಒಳ್ಳೆಯದು, ಉತ್ತರಕ್ಕೆ ಇದ್ದರೆ ಪರವಾಗಿಲ್ಲ, ದಕ್ಷಿಣ ಮತ್ತು ಪಶ್ಚಿಮ ಬೇಡವೇ ಬೇಡ.

ಅವರ ಮೊದಲ ಬೇಡಿಕೆ, ಪಾರ್ಕಿಂಗ್ ಜಾಗ ಇರಲೇಬೇಕು. ಬಸ್ಸು, ಲಾರಿ ಇರಲಿ ಕನಿಷ್ಠ ಕಾರು, ಸ್ಕೂಟರಿಗಾದರೂ ಜಾಗ ಇರಲೇಬೇಕು. ಇನ್ನೊಬ್ಬರಿಂದ ಅಕ್ಕಪಕ್ಕದಲ್ಲಿ ಯಾವ ಜಾತಿ ಮತದವರು ಇದ್ದಾರೆ ಎಂಬ ತಪಾಸಣೆ ಬೇರೆ. ಅವರು ಪ್ಯೂರ್ ಸಸ್ಯಾಹಾರಿ ಗಳಾಗಿದ್ದರೆ ತುಂಬಾ ಒಳ್ಳೆಯದಂತೆ. ಮನೆ ಮಾರುವ ಮಾಲೀಕರಿಗೂ ಅದೇ ಪ್ರಶ್ನೆ.

ಇನ್ನು ಚೌಕಾಸಿಗೆ ಬಂದರೆ ನಮ್ಮ ಬೆಲೆಗೆ ಡೀಲ್ ಕುದುರಿದರೆ ಖಂಡಿತ ನಾವು ಅದೃಷ್ಟವಂತರು. ಇನ್ನು ಬ್ರೋಕರ್‌ಗಳು ಇಬ್ಬರಿಗೂ ಬ್ಯಾಲೆನ್ಸ್ ಮಾಡುತ್ತಾ ಮಾಡುತ್ತಾ ಅವರ ಜೇಬು ದೊಡ್ಡದು ಮಾಡಿಕೊಂಡುಬಿಟ್ಟಿರುತ್ತಾರೆ. ಇತ್ತೀಚೆಗಂತೂ 'ನೋಬ್ರೋಕರ್.ಕಾಂ', 'ಮ್ಯಾಜಿಕ್ ಬ್ರಿಕ್ಸ್'ಅಂತ ಅದೆಷ್ಟು ಆನ್‌ಲೈನ್ ಕಂಪನಿಗಳು ಈ ವ್ಯಾಪಾರಕ್ಕೆ ಇಳಿದಿವೆ. ಅವರಿಗೆ ನಿಮ್ಮ ವಿವರ, ಚಿತ್ರ ಸಮೇತ ಮನೆಯ ವಿವರ ಕೊಟ್ಟರೆ ಅರ್ಧ ಕೆಲಸ ಕಮ್ಮಿಯಾಗುತ್ತೆ. ಮನೆ ಮಾರಾಟಕ್ಕೆಂದೇ ಒಂದು ಪುಟ್ಟ ಡೈರಿ ಇಟ್ಟುಕೊಂಡು ದಿನಾ ಬಂದು ಬೀಳುವ ಮೆಸೇಜುಗಳು, ಟೆಲಿಫೋನ್ ನಂಬರುಗಳು ಹಾಗೂ ಎನ್‌ಕ್ವೈರಿಗಳನ್ನು ಬರೆದುಕೊಳ್ಳಬಹುದು.

ಎರಡು ವರ್ಷಗಳಿಂದ ಮಂಗಳೂರಿನಲ್ಲಿರುವ ನಮ್ಮ ಪುಟ್ಟ ಖಾಲಿ ಮನೆ, ಮಳೆ, ಗಾಳಿ, ಬಿಸಿಲಿಗೆ ಮೈಯೊಡ್ಡಿ ಹೊಸ ಯಜಮಾನನಿಗಾಗಿ ಕಾಯುತ್ತಲೇ ಇದೆ. ಮಗಳಿಗೆ ಮದುವೆ ಮಾಡಲು ತಂದೆ-ತಾಯಿ ಕಷ್ಟಪಡುವಂತೆ ಮನೆ ಮಾರಾಟ ಮಾಡಲು ಅಷ್ಟೇ ಕಷ್ಟಪಡಬೇಕು. "ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು" ಅಂತ ಏನೋ ಗಾದೆ ಇದೆ ನಿಜ. ಆದರೆ ಸ್ವಲ್ಪ ಬದಲಾವಣೆ ಮಾಡಿ ಮನೆ ಮಾರಿ ನೋಡು ಎನ್ನುವಂತಾಗಿದೆ ನಮ್ಮ ಪರಿಸ್ಥಿತಿ. ಸುಂದರವಾಗಿದೆ, ಹೆಚ್ಚು ವಯಸ್ಸೇನು ಆಗಿಲ್ಲ, ಇರುವ ಜಾಗವು ಕಳಪೆಯಾಗಿಲ್ಲ. ಹೀಗಿದ್ದೂ ಯಾರೂ ವರಿಸಲು ಮುಂದೆ ಬಾರದ ಹೆಣ್ಣುಮಗಳಂತೆ ಕಾಣುತ್ತಿರುವ ಆ ನಮ್ಮ ಮನೆಯನ್ನು ಯಾರಿಗೆ ಧಾರೆಯೆರೆದು ಕೊಡುವುದು?

ಕನ್ಯಾಶುಲ್ಕ ಅಂತ ನಾವು ಹೆಚ್ಚೇನನ್ನೂ ನಿರೀಕ್ಷೆ ಮಾಡದಿದ್ದರೂ ಸಕಾಲದಲ್ಲಿ ಅದನ್ನು ಯೋಗ್ಯರೊಬ್ಬರ ಸುಪರ್ದಿಗೆ ಕೊಡಲು ಕಾಯುತ್ತಿದ್ದೇವೆ. ಅನಾಥ ಪ್ರಜ್ಞೆಯಿಂದ ಆ ಖಾಲಿ ಮನೆ ಪರಿತಪಿಸುತ್ತ ಇರಬಹುದೆನಿಸುತ್ತದೆ .ತನ್ನನ್ನು ನೋಡಲು ಬರುವವರಿಗಾಗಿ ತೆರೆದ ಬಾಗಿಲಿನಿಂದ ಆತುರ ಕಾತುರದಿಂದ ಸ್ವಾಗತಿಸಲು ಕಾಯುತ್ತಿರುವ ನಮ್ಮ ಮನೆಯ ಮಂಗಳೆಯನ್ನು ವರಿಸಲು ಯಾರು ಬರುತ್ತಾರೆ ಎಂಬ ಕುತೂಹಲ ನಮಗೂ ಇದೆ.

ಅಯ್ಯೋ ಇಲ್ಲಿಗೆ ಮುಗಿಯಲಿಲ್ಲ ಮನೆ ಮಾರಾಟದ ಪುರಾಣ. ಈಗ ಬೆಂಗಳೂರಿನ ಮನೆಯೊಂದಕ್ಕೆ ಹೋಗೋಣ ಬನ್ನಿ. ಇದು ಖಾಲಿ ಮನೆ ಅಲ್ಲ! ಇಲ್ಲಿ ಮಾಲೀಕರು ವಾಸಿಸುತ್ತಿದ್ದಾರೆ. ಜಗಜ್ಜಾಹೀರು ಮಾಡದೇ ಇದ್ದರೂ ಮನೆ ಮಾರಾಟಕ್ಕಿರುವ ವಿಷಯವಂತೂ ಗೋಪ್ಯವಾಗಿ ಇರಲಿಲ್ಲ. ನಾವು ಎದುರು ಮನೆಯಲ್ಲೇ ಇದ್ದುದರಿಂದ ನಮಗೆ ಒಂದಷ್ಟು ಮಾಹಿತಿ ಸಿಕ್ಕಿತು ಅನ್ನಿ. ಬ್ರೋಕರ್ ಬಾಯಿಗೆ ಬಿದ್ದ ಮೇಲೆ ಕೇಳಬೇಕೆ! ಕಾಂಜಿ, ಪಿಂಜಿ ಅವರನ್ನೆಲ್ಲ ಕರೆತರಲು ಪ್ರಾರಂಭಿಸಿಬಿಡುತ್ತಾರೆ. ಬೆಳಗ್ಗೆ, ಮಧ್ಯಾಹ್ನ, ಸಂಜೆ, ಕೊನೆಗೆ ರಾತ್ರಿ ಮಲಗಿದ್ದರೂ ಸರಿ ಬಾಗಿಲು ಬಡಿದು ಬರುವ ಅಪರಿಚಿತ ಜನರಿಗೆ ಮನೆಯ ಬಗ್ಗೆ ವಿವರಣೆ ಕೊಟ್ಟು ಕೊಟ್ಟು ಸುಸ್ತಾಗಿದ್ದರೂ, ಮನೆಯ ಇಂಚಿಂಚೂ ಮೈಕ್ರೋಸ್ಕೋಪಿನಿಂದ ಶಸ್ತ್ರಕ್ರಿಯೆ ಮಾಡುವಂತೆ ಪರಿಶೀಲನೆ ಬೇರೆ. ಕೆಲವೊಮ್ಮೆ ಗುರುತು ಪರಿಚಯದವರು ಇದ್ದರೆ ಕಾಫಿ, ಬಿಸ್ಕೇಟು ಸಮಾರಾಧನೆ. ಇನ್ನು ಹೆಂಗಸರಿದ್ದರೆ ಅರಿಶಿನ ಕುಂಕುಮ, ತಾಂಬೂಲ, ಒಂದು ಸಂಪ್ರದಾಯವಾಗಿ ಮನೆಗೆ ಬಂದ ಹೆಣ್ಣು ಮಕ್ಕಳಿಗೆ ಕೊಡಬೇಕು. ಮನೆ ನೋಡುವವರ ಸಂಖ್ಯೆ ದಿನವೂ ಇರುತ್ತಿದ್ದುದರಿಂದ ಸದಾಕಾಲ ಮನೆಯನ್ನು ಸ್ವಚ್ಛವಾಗಿ, ಸುಂದರವಾಗಿ, ಶುಚಿಯಾಗಿ ಇಟ್ಟುಕೊಂಡೇ ಇರಬೇಕಾಗಿರುವುದು ಬೇರೆ. ಕೆಲವೊಮ್ಮೆ ಬಂದವರು ಅತೀವ ಆಸಕ್ತಿಯನ್ನು ತೋರಿಸಿದರೆ ಇವರು ಖಂಡಿತ ಖರೀದಿಸಬಹುದು ಎಂಬ ಕನಸನ್ನು ಕಟ್ಟಿಕೊಂಡಾಗ ಅವರಿಂದ ಮುಂದೆ ಯಾವುದೇ ಹಂತದ ಪ್ರಯತ್ನ ಕಾಣದೆ ನಿರಾಸೆಯಾದದ್ದೂ ಇತ್ತಂತೆ. ಹುಡುಗಿ ಕಪ್ಪು-ಬಿಳುಪು ಅಂತ ಮದುವೆಗೆ ಕನ್ಯೆಯನ್ನು ನೋಡುವಾಗ ವರನ ಕಡೆಯವರು ವಿಶ್ಲೇಷಣೆ ಮಾಡುವುದು ಎಲ್ಲರಿಗೂ ತಿಳಿದ ಸತ್ಯ ಹಾಗೆಯೇ ಮನೆ ಮಾರುವವರಿಗೂ ಕೂಡ ಕಪ್ಪು-ಬಿಳುಪು ಪ್ರಶ್ನೆ ಬಂದೇಬರುತ್ತದೆ .ಕಪ್ಪು ಎಷ್ಟು? ಬಿಳುಪು ಎಷ್ಟು? ಎನ್ನುವ ಅರ್ಥ ಮನೆ ಮಾರುವವರಿಗೂ ಖರೀದಿಸುವವರಿಗೂ ಮಾತ್ರ ಗೊತ್ತಿರುವ ಮಾಹಿತಿ. ಕನ್ಯಾರ್ಥಿಯಾಗಿ ಹೀಗೆ ಹೆಣ್ಣು ಹೆತ್ತವರಿಗೆ ಆಟ ಆಡಿಸುವ ಉದಾಹರಣೆಗಳು ಸಾಕಷ್ಟಿವೆ ಅಕ್ಕಪಕ್ಕದವರ ಕಳ್ಳ ಕಣ್ಣುಗಳಿಗೆ ಹೀಗೆ ಆಗಾಗ ಬಂದು ಹೋಗುವವರನ್ನು ನೋಡಿ ಹೆಚ್ಚಾಗುತ್ತಿತ್ತು ಕುತೂಹಲ .ಆಸ್ತಿ ಖರೀದಿ ಯಾವುದೇ ಬಟ್ಟೆ ಕೊಂಡಷ್ಟು ಸುಲಭವಲ್ಲ. ಅಷ್ಟು ಸರಳವೂ ಅಲ್ಲ. ದುಬಾರಿ ವ್ಯವಹಾರ. ಮೈಯೆಲ್ಲಾ ಕಣ್ಣಾಗಿ ಎಚ್ಚರಿಕೆಯಿಂದ ವ್ಯವಹಾರ ಮಾಡಬೇಕು. ಒಮ್ಮೆ ಆಯ್ಕೆಮಾಡಿ ನಿಶ್ಚಿತಾರ್ಥವಾದ ಮೇಲೆ ಮದುವೆ ರದ್ದಾದ ಪ್ರಸಂಗ ಇರುವಂತೆ ಇಲ್ಲೂ ಕೂಡ ಅಪಾಯಗಳಿವೆ. ರಿಜಿಸ್ಟರ್ ಮದುವೆ ಎಷ್ಟೇ ಗ್ಯಾರೆಂಟಿ ಇತ್ತೀಚೆಗೆ ಅನ್ನುವಂತಾಗಿದೆ.

ಇಲ್ಲಿ ಸೆಂಟಿಮೆಂಟ್ ಕೂಡ ಮುಖ್ಯವಾಗುತ್ತದೆ .ಸಾಕಿ ಸಲಹಿ ಗಂಡನ ಮನೆಗೆ ಮಗಳನ್ನು ದೂರ ಕಳಿಸುವ ದುಃಖ ನೋವು ಎಷ್ಟೊಂದು ಇರುತ್ತದೋ ನಾವು ಕಟ್ಟಿ, ಅಷ್ಟೊಂದು ಅನೇಕ ವರ್ಷ ವಾಸವಿದ್ದ ಮನೆಯನ್ನು ಬಿಟ್ಟು ದೂರ ಹೋಗುವಾಗ ಅಷ್ಟೇ ಪ್ರಮಾಣದ ಸಂಕಟ ಇದ್ದೇ ಇರುತ್ತದೆ. ನಿರೀಕ್ಷಿತ ಬೆಲೆ, ವಾಸ್ತು, ಪ್ರದೇಶ, ಕಟ್ಟಡದ ವಯಸ್ಸು ಇತ್ಯಾದಿ ಎಲ್ಲಾ ಪರೀಕ್ಷೆಗಳಲ್ಲಿಯೂ ಪಾಸು ಮಾಡಿದ ಮೇಲೆ ಪ್ರಮಾಣ ಪತ್ರದೊಂದಿಗೆ ಮುಗಿಯುತ್ತದೆ ಡೀಲ್. "ಅಮ್ಮಾ ನಾ ಪಾಸಾದೆ. ಅಮೆರಿಕ ಪಾಲಾದೆ" ಹಾಡು ಆಗಾಗ ನೆನಪಿಗೆ ಬರುತ್ತದೆ.

***

ದಸರಾ ಸವಿ ನೆನಪು

– ರೇಣುಕಾ ದೇಸಾಯಿ

ನಮ್ಮದೊಂದು 'ಹರಿಶ್ಚಂದ್ರ ಚರಿತೆ ಓದು' ಎನ್ನುವ ವಾಟ್ಸಾಪ್ ಗುಂಪು ಇದೆ, ಹೆಸರೇ ಹೇಳುವಂತೆ ಒಂದಿಲ್ಲೊಂದು ಹಳಗನ್ನಡ ಗ್ರಂಥಗಳನ್ನು ಓದಿ ವ್ಯಾಖ್ಯಾನಿಸುವ ಕಾಯಕ ಅಲ್ಲಿ ಸದಾ ನಡೆದಿರುತ್ತದೆ. ಮಧ್ಯೆ ಮಧ್ಯೆ ವೇದಿಕೆಯ ಸದಸ್ಯರ ಲೇಖನ, ಕಥೆ, ಕವನ ಬೇರೆಲ್ಲಡೆ ಪ್ರಕಟಗೊಂಡರೆ ಅದರ ಬಗೆಗೆ ಅವರವರೇ ವೇದಿಕೆಯಲ್ಲಿ ಅಂಟಿಸುತ್ತಾರೆ ಇತರರು ಓದಿ ಪ್ರತಿಕ್ರಿಯಿಸುತ್ತಾರೆ. ಅಂತೆಯೇ ನವರಾತ್ರಿಯ ಸಪ್ತಮಿ ದಿನ ನಾಡಹಬ್ಬ ದಸರಾ ಪ್ರಯುಕ್ತ ಶಾಂತಾ ನಾಗಮಂಗಲ ಅವರ ಮಗಳು ಅಮೃತವರ್ಷಿಣಿಯವರ ಸಂಗೀತ ಕಾರ್ಯಕ್ರಮ ಮೈಸೂರಿನ ಗಾನಭಾರತಿ ಸಭಾಂಗಣದಲ್ಲಿದೆ, ವೇದಿಕೆಯ ಮೈಸೂರಿನ ಸದಸ್ಯರು ಕಾರ್ಯಕ್ರಮಕ್ಕೆ ಬನ್ನಿ ಎಂದು ಆಹ್ವಾನಿಸಿದ್ದರು. ಈ ಆಹ್ವಾನ ನನ್ನನ್ನು ನನ್ನ ಮೈಸೂರಿನ ನಾಲ್ಕುವರೆ ವರ್ಷದ ಇರುವಿಕೆಯ ಸುಮಧುರ ನೆನಪುಗಳ ಲೋಕಕ್ಕೆ ಕರೆದೊಯ್ಯಿತು.

ಪ್ರತಿ ಮೂರು ವರ್ಷಕ್ಕೊಂದು ವರ್ಗಾವಣೆ ಇರುವದೆ ಬ್ಯಾಂಕಿನಲ್ಲಿ, ಆ ಕಾರಣಕ್ಕಾಗಿ 2014ರಿಂದ 2018ರವರೆಗೆ ನಾನು ಮೈಸೂರಿನಲ್ಲಿದ್ದೆ, ದುರಾದೃಷ್ಟವೆಂಬಂತೆ ಸುಸ್ತಿ ಸಾಲ ವಸೂಲಿ ಕೇಂದ್ರಕ್ಕೆ ನನ್ನ ವರ್ಗಾವಣೆ, ಕೆಲಸವೇನು ಅಷ್ಟು ಸುಲಭದ್ದಲ್ಲ, ಪ್ರತಿ ದಿನ ಕಷ್ಟಪಟ್ಟರೂ ಇಡೀ ತಿಂಗಳಿಗೆ ಒಂದು ಪೈಸೆ ವಸೂಲಿಯೂ ಇರುತ್ತಿರಲಿಲ್ಲ, ಆಗೆಲ್ಲ ನಾವು ಪಟ್ಟ ಶ್ರಮವನ್ನು ನಮ್ಮ ಪ್ರೋಗ್ರೆಸ್ ರಿಪೋರ್ಟ್‌ನಲ್ಲಿ ಏನು ತೋರಿಸಬೇಕು? ಕಷ್ಟ ಪಟ್ಟಿದ್ದೇವೆ, ಕೆಲಸ ಮಾಡಿದ್ದೇವೆ ಎನ್ನುವದಕ್ಕೆ ಆಧಾರವೇ ಇಲ್ಲದೆ **poor performance** ಹಣೆಪಟ್ಟಿ.

ಈ ನಿರಾಶೆಯ ನಡುವೆಯೂ ಮೈಸೂರಿನಲ್ಲಿ ಮೂರು ಮೂರು ದಸರಾಹಬ್ಬದ ವೀಕ್ಷಣೆ ಮುದಕೊಟ್ಟ ಸವಿನೆನಪು ಎಂದಿಗೂ ನನ್ನ ಜೀವನದಾರಿಯಲ್ಲಿ ಶಾಶ್ವತ. ಅದಕ್ಕೆ ನಾನು ಬ್ಯಾಂಕಿಗೆ ಋಣಿ. ನನ್ನ ಅದೃಷ್ಟವೆಂಬಂತೆ ನನ್ನ ಕಛೇರಿ ಮೈಸೂರಿನ ಹೆಸರಾಂತ ಬಡಾವಣೆ ಸರಸ್ವತಿಪುರದಲ್ಲಿ, ಹೀಗಾಗಿ ನನ್ನ ವಾಸ್ತವ್ಯ ಅಲ್ಲೇ, ಒಂದು ಕೋಣೆಯ ಪುಟ್ಟ ಹೊಸದಾದ ಮಹಡಿಮನೆ, ಅನೇಕ ವರ್ಷಗಳ ನಂತರ ಸಂಸಾರದ ಸಂಕೋಲೆಯಿಂದ ಬಿಡುಗಡೆ ಪಡೆದ ಏಕಾಂತ ಜೀವನ, ಪ್ರತಿ ವಾರಾಂತ್ಯ ಬೆಂಗಳೂರಿನಿಂದ ಕಾರಿನೊಂದಿಗೆ ಇಡೀ ಸಂಸಾರದ ಆಗಮನ. ಮೈಸೂರಿನ ಸುತ್ತಮುತ್ತ ತಿರುಗಾಟ, ರಾಜಮಹಾರಾಜರು ಇದ್ದ ನಾಡು, ಕಾವೇರಿ ಹರಿಯುತ್ತಿರುವ ಬೀಡು, ಪ್ರಕೃತಿಮಾತೆ ಒಲಿದ ಕಾಡುಮೇಡು. ಇದರೊಟ್ಟಿಗೆ ದಸರಾ ಹಬ್ಬ.

ದಸರೆ ಅಂದ್ರೆ ಮೈಸೂರು ಸಂಭ್ರಮದಿಂದ ತೇಲುತ್ತದೆ, ನವರಾತ್ರಿಯ ದಿನಗಳಲ್ಲಿ ನಾಡಿನ, ಹೊರನಾಡಿನ ಹೆಸರಾಂತ ಕಲಾವಿದರಿಂದ ಉತ್ಕೃಷ್ಟ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ. ಹೆಚ್ಚು ಸಾಂಸ್ಕೃತಿಕ ವೇದಿಕೆಗಳು ಸರಸ್ವತಿಪುರದ ಸುತ್ತಮುತ್ತ, ಹಾಗೆನೋಡಿದರೆ ಮೈಸೂರು ಇಂದಿಗೂ ಶಾಂತನಗರ, ಎಲ್ಲಿಂದೆಲ್ಲಿಗೂ ಆರಾಮವಾಗಿ ಹೋಗಿಬರುವ ಸಾಧ್ಯತೆ. ಹೀಗಾಗಿ ಎಲ್ಲಾ ವೇದಿಕೆಯ ಕಾರ್ಯಕ್ರಮಗಳನ್ನೂ ಆನಂದಿಸಿರುವೆ, ಈ ವರ್ಷ ತಪ್ಪಿದ್ದು ಮುಂದಿನ ವರ್ಷ. ಮುಖ್ಯ ಅರಮನೆಯ ಅಂಗಳದಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳು, ಜಗನ್ಮೋಹಿನಿ ಅರಮನೆಯಲ್ಲಿ ನಡೆಯುವ ವೃತ್ತಿ ರಂಗಭೂಮಿ ಕಲಾವಿದರು ಪ್ರದರ್ಶಿಸುವ ನಾಟಕಗಳು, ದಸರೆಗೋಸ್ಕರ ಆಹ್ವಾನಿತರಾಗಿ ಬಂದು ಪ್ರದರ್ಶಿಸುವ ಕಂಪನಿ ನಾಟಕಗಳು ಈ ದಿನಗಳಲ್ಲಿ ಬೇರೆಡೆ ನಿಮಗೆ ಸಿಗಲಿಕ್ಕಿಲ್ಲ, ಪಟ್ಟಣ ಪ್ರದೇಶದಲ್ಲೂ ಕಂಪನಿ ನಾಟಕ ಆಡುವವರೂ ಇಲ್ಲ, ನೋಡುವವರೂ ಇಲ್ಲ. ಕಲಾಮಂದಿರ, ಭೂಮಿಗೀತ, ಶ್ರೀರಂಗ ಮತ್ತು ವನರಂಗದಲ್ಲಿ ನಡೆಯುವ ಹವ್ಯಾಸಿ ನಾಟಕಕಾರರ ನಾಟಕಗಳು ಹಾಗೂ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳು ಮನಸೂರೆಗೊಳ್ಳುತ್ತವೆ. 2015ರ ದಸರೆಯಲ್ಲಿ ಶ್ರೀರಂಗ ವೇದಿಕೆಯಲ್ಲಿ ಡಾ. ಆರತಿ ಅನ್ನುವವರ

ಬೊಂಬೆ ಪ್ರದರ್ಶನವಿತ್ತು, ಅದೊಂದು ಅದ್ಭುತ ವಿಶಿಷ್ಟ ಸಂಗ್ರಹ, ಆ ಬೊಂಬೆಯ ಸಂಗ್ರಹ ನೋಡಿಯೇ ಅನುಭವಿಸ ಬೇಕು, ಅಷ್ಟು ವೈವಿಧ್ಯ ಪ್ರಾಚೀನ ಕಾಲದ ಬೊಂಬೆ, ರಾಜರ ಕಾಲದ ಬೊಂಬೆ, ಇಡೀ ನಾಟಕ ಮಂದಿರದ ತುಂಬಾ ಬೊಂಬೆಗಳ ಜೋಡಣೆ. ರಾಜರ ಕಾಲದ ದಸರೆ ವೈಭವ, ಅನೇಕ ವರ್ಷಗಳಿಂದ ಮಾರ್ಪಾಟು ಕಂಡ ಜನಜೀವನ, ಮದುವೆ, ಉಪನಯನ, ಪೂಜೆ, ನಾಮಕರಣ, ಜುಟ್ಟು ಜಾವಳಗಳ ಬಗೆಗೆ ಬೊಂಬೆಯ ಜೋಡಣೆ ಮುಖಾಂತರ ಕಾವ್ಯೇತಿಹಾಸ ತೋರಿಸಿದ್ದು ಬೆರಗುಗೊಳಿಸಿತ್ತು. ಇಂತಹದೇ ಸಂಗ್ರಹ ನಜರ್‌ಬಾದ್‌ನಲ್ಲಿರುವ ಬೊಂಬೆ ಮನೆಯಲ್ಲೂ ನೋಡಿದೆ. ಇಷ್ಟಲ್ಲದೆ ಸರಸ್ವತಿಪುರದ ಸಂಪ್ರದಾಯಸ್ಥರ ಮನೆಯ ಗೊಂಬೆ ಪೂಜೆಗೆ ಅರಿಷಿಣ ಕುಂಕುಮಕ್ಕೆ ಹೋದರೆ ವಿಶೇಷ ಗೊಂಬೆ, ಸರಸ್ವತಿ ಪೂಜೆಗೆ ಇಟ್ಟ ರಾಜರ ಕಾಲದ ತಾಳೆಗರಿ ಗ್ರಂಥಗಳು. ಅಲ್ಲಿರುವ ಪ್ರತಿ ಹಳೆಯ ಮನೆಯೂ ಒಂದಿಲ್ಲೊಂದು ರಾಜಮನೆತನದ ಕುರುಹು ಆಗಿರುವ ವಸ್ತುಗಳನ್ನು ಹೊಂದಿರುವದು ನೋಡಿ ಅವರ ಬಗೆಗೆ ಹೆಮ್ಮೆ ಅನ್ನಿಸುತ್ತಿತ್ತು. ಜಯನಗರದ ಗಾನಭಾರತಿ ವೇದಿಕೆಯಲ್ಲಿ ನಾಡಿನಾದ್ಯಂತ ಇರುವ ಆಯ್ದ ಕಲಾವಿದರ ಸಂಗೀತ, ನೃತ್ಯ ಕಾರ್ಯಕ್ರಮಗಳನ್ನು ಮೂರು ವರುಷ ವೀಕ್ಷಿಸಿ ಆನಂದಿಸಿದ್ದೇನೆ. ರಾಮಸ್ವಾಮಿ ವೃತ್ತದ ಹತ್ತಿರದಲ್ಲಿರುವ ಮಹಾರಾಜ ಕಾಲೇಜ್ ಮೈದಾನದಲ್ಲಿ, ವಿಶ್ವವಿಧ್ಯಾಲಯದ ಆವರಣದಲ್ಲಿ ಯುವ ದಸರಾದ ನೂರೆಂಟು ಕಾರ್ಯಕ್ರಮಗಳು, ಬೃಹತ್ ದಸರಾ ವಸ್ತುಪ್ರದರ್ಶನ ಹೀಗೆ ದಸರಾದ ಹತ್ತು ದಿನವೂ ಸುತ್ತಿದ್ದೇನೆ, ಆನಂದಿಸಿದ್ದೇನೆ ನಲಿದಾಡಿದ್ದೇನೆ.

2016ರಲ್ಲಿ ನಮ್ಮ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಜಯ ದಶಮಿಯಂದು ಆನೆಗಳ ಅಲಂಕಾರಿಕ ಜಂಬೂಸವಾರಿಗೆ ವಸ್ತು, ಭೂಷಣಗಳಿಗಾಗಿ ಹಣ ಸಹಾಯ ಮಾಡಿತ್ತು ಹೀಗಾಗಿ ನಮಗೆ VVIP ಪಾಸ್ ಸಿಕ್ಕಿತ್ತು, ಅರಮನೆಯ ಒಳಗಿರುವ ಸಭಾಂಗಣದಲ್ಲಿ ಕುಳಿತು ಅತೀ ಹತ್ತಿರದಿಂದ ಜಂಬೂಸವಾರಿ ಹೊರಡುವ ಮೊದಲಿನ ಪೂಜಾವಿಧಿ ವೀಕ್ಷಿಸಿದ್ದೆ, ನಂತರ ಪೂರ್ತಿ ಮೆರವಣಿಗೆ ಹೊರಡುವದನ್ನು ನೋಡಿದೆ. ರಾಜರ ಕಾಲದ ದಸರಾ ಜಂಬೂ ಸವಾರಿಯ ವೈಭವ ವರ್ಷದಿಂದ ವರ್ಷಕ್ಕೆ ಕಳೆಗುಂದುತ್ತಿದೆ ಎಂದು ಮನಸ್ಸಿನ ಮೂಲೆಯಲ್ಲಿ ಬೇಸರ ಕಾಡುತ್ತಿತ್ತು. ನಾವೇನು ರಾಜರ ಕಾಲದ ದಸರಾ ವೈಭವವ ಕಂಡವರಲ್ಲ, ಆದರೆ ಅರಮನೆಯ ಒಳಾಂಗಣದ ಗೋಡೆಯ ಮೇಲಿನ ವರ್ಣಚಿತ್ರ, ಜಗನ್ಮೋಹಿನಿ ಅರಮನೆಯಲ್ಲಿರುವ ವರ್ಣಚಿತ್ರಗಳು ಹಾಗೂ ಮೈಸೂರಿನ ಮನೆ ಮನೆಯಲ್ಲಿ ಕಾಣಸಿಗುವ ಜಂಬೂಸವಾರಿಯ ಕಲಾಕೃತಿಗಳು, ಬೊಂಬೆಗಳು ಹೇಳುವ ಕಥೆ ನಮಗೆ ಈ ಭಾವ ತರುತ್ತದೆ.

ನಂತರದ್ದು ಬನ್ನಿಮಂಟಪದಲ್ಲಿ ನಡೆಯುವ ಪೂಜೆ, ವಿಧಿವಿಧಾನಗಳು, ಈಗ ಆ ವಿಶಾಲವಾದ ಮೈದಾನದಲ್ಲಿ ಟಾರ್ಚ್ ಲೈಟ್ ಪರೇಡ್, ಮೋಟರ್‌ಬೈಕ್ ಸಾಹಸ, ಪಂಜಿನ ಕವಾಯತು, ಲೇಸರ್ ಲೈಟ್ ಶೋ VVIP Galary ಯಿಂದ ನೋಡಿದ್ದೆನೋ ನಿಜ ಆದರೆ ಮನೆಗೆ ಬಂದು ಗೂಗಲ್‌ನಲ್ಲಿ ತಡಕಾಡಿದೆ, ಆಗ ಒಂದಿಷ್ಟು ಮಾಹಿತಿ ನನಗೆ ದೊರೆತಿದ್ದು, ವಿಜಯನಗರ ಸಾಮ್ರಾಜ್ಯದ ಅರಸರುಗಳು ಈ ನವರಾತ್ರಿ ಉತ್ಸವ ಪ್ರಾರಂಭಿಸಿದರು. ನಂತರ ಒಡೆಯರ ಮನೆತನದ ರಾಜಾ ಒಡೆಯರ ಶ್ರೀರಂಗಪಟ್ಟಣದಲ್ಲಿ ಪ್ರಾರಂಭಿಸಿ 16ರಿಂದ 18ನೇ ಶತಮಾನಾದವರೆಗೂ ಆಚರಿಸಿದರು. 1805ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಈ ಉತ್ಸವವನ್ನು ಮೈಸೂರಿಗೆ ಸ್ಥಳಾಂತರಿಸಿದರು, 1970ರವರೆಗೆ ರಾಜರೇ ನಡೆಸುತ್ತಿದ್ದ ದಸರೆ ನಂತರ ಕರ್ನಾಟಕ ಸರಕಾರ ವಹಿಸಿಕೊಂಡಿತು.

ರಾಜರೇ ಆಚರಿಸುತ್ತಿದ್ದ ದಸರೆಯ ಮೆರವಣಿಗೆಯಲ್ಲಿ ಅಂಬಾರಿಯಲ್ಲಿ ಕುಳಿತ ಆಯುಧಾರೂಢರಾದ ರಾಜರು, ರಾಜರ ಕಾಲುದಳ, ಕುದುರೆ, ಆನೆ ಹೀಗೆ ಮೂರು ದಳಗಳು, ಅವರಲ್ಲಿರುವ ಆಯುಧ, ಮದ್ದುಗುಂಡು, ಅವುಗಳನ್ನು ಹೊತ್ತೊಯ್ಯುವ ಬಂಡಿಗಳು, ಆಸ್ಥಾನದ ವಾದ್ಯದೊಂದಿಗೆ ಬನ್ನಿಮಂಟಪಕ್ಕೆ ಮೆರವಣಿಗೆ ಹೋಗುವದಿತ್ತು, ಬಹಳ ಹಿಂದಿನ ವರ್ಷಗಳಲ್ಲಿ ಹೀಗೆ ಹೋದ ಮೆರವಣಿಗೆ ಆ ವಿಶಾಲವಾದ ಮೈದಾನದಲ್ಲಿ ರಾಜಾ ಬೇಟೆಯಾಡಿ ಇದಕ್ಕೆಂದೇ

ಮೊದಲೇ ಆಯೋಜನೆ ಮಾಡಲಾಗುತ್ತಿತ್ತು, ನಂತರ ಶಮೀ ವೃಕ್ಷದ ಕೆಳಗೆ ವಿಜಯದ ಪೂಜೆಗೈದು ಪಂಜಿನ ಬೆಳಕಿನಲ್ಲಿ ಮೆರವಣಿಗೆ ವಾಪಾಸು ಅರಮನೆಗೆ ಸೇರುತ್ತಿತ್ತು ಎನ್ನುವ ವಿಷಯ ತಿಳಿದು ಮನಸ್ಸು ಆ ವೈಭವದ ಕನಸು ಕಂಡಿತು. ಒಡೆಯರು ಇದ್ದುದರಿಂದ ನಮ್ಮ ನಾಡು ನುಡಿ ಜಗತ್ ಪ್ರಸಿದ್ಧವಾಯ್ತು ಎಂದು ಹೆಮ್ಮೆಯಾಯಿತು.

ನಮಗೆ ಗೊತ್ತಿರುವಂತೆ ಜನಸಾಮಾನ್ಯರಲ್ಲೂ ನವರಾತ್ರಿ ಬಹಳ ವಿಶಿಷ್ಟವಾಗಿ ಆಚರಿಸಲ್ಪಡುತಿತ್ತು. ನಮ್ಮ ಉತ್ತರ ಕರ್ನಾಟಕದಲ್ಲಿ ಆ ಒಂಬತ್ತು ದಿನ ದೇವರ ಮುಂದೆ ನಂದಾದೀಪ ಉರಿಸುವದು ಒಂದು ವೃತ, ಮಡಿಯುಟ್ಟು ಆ ದೀಪಕ್ಕೆ ಎಣ್ಣೆ ಹಾಕಬೇಕು, ಉಪವಾಸ ಇರಬೇಕು, ದೀಪ ಹಗಲು ರಾತ್ರಿ ನಂದದಂತೆ ನೋಡಿಕೊಳ್ಳಬೇಕು, ಹೆಣ್ಣು ಮಕ್ಕಳು ಗುಂಪುಗುಂಪಾಗಿ ಮನೆಮನೆಗೆ ಹೋಗಿ ಹಬ್ಬದ ಹಾಡು ಹೇಳುವದು, ಲಲಿತಾ ಸಹಸ್ರನಾಮ ಪಠಣ ಇರುತ್ತದೆ. ಚಿಕ್ಕವರಿಂದ ಹದಿವಯಸ್ಸಿನ ಹೆಣ್ಣುಮಕ್ಕಳು ಲಂಗದಾವಣಿಯಂತ ದೇಶೀಯ ಉಡುಗೆ ಉಟ್ಟು, ವಿಶೇಷವಾಗಿ ಶೃಂಗರಿಸಿಕೊಂಡು ಸಣ್ಣ ಸಣ್ಣ ತಾಮ್ರ ಹಿತ್ತಾಳಿಯ ಗಿಂಡಿಯಲ್ಲಿ ನೀರು ತುಂಬಿ ಅದಕ್ಕೆ ಚೆಂಡು ಹೂವಿನ ಅಲಂಕಾರ ಮಾಡಿ ಊರ ಮುಖ್ಯ ರಸ್ತೆಯಲ್ಲಿ ಕೃಷ್ಣನ ಹಾಡು ಹೇಳುತ್ತಾ ಮೆರವಣಿಗೆ ಹೋಗಿ, ನಂತರ ಊರ ಕೆರೆಯ ದಡದಲ್ಲಿ ಸ್ವಲ್ಪ ಬಯಲು ಪ್ರದೇಶ ಆರಿಸಿಕೊಂಡು ಅಲ್ಲೆಪಿಲ್ಲಿ ಆಡುವದು, ಅಂದ್ರೆ ಗಿಂಡಿಯನ್ನು ಮೇಲಕ್ಕೆ ತೂರಿ ಹಿಡಿಯುವದು ನಂತರ ಕೈ ಕೈ ಹಿಡಿದು ವೃತ್ತಾಕಾರವವಾಗಿ ತಿರುಗಿ ಗೋಪಿಕೆಯರಂತೆ ಕೃಷ್ಣನ ಹಾಡು ಹೇಳುತ್ತಾ ಆರಾಧಿಸುವದು. ಗಂಡುಮಕ್ಕಳು ಹೋರಿಗಳನ್ನು, ದನಗಳನ್ನು ಓಡಿಸುವ ಪಂದ್ಯದಲ್ಲಿ ಭಾಗವಹಿಸುವದು, ಓಡುವ ಹೋರಿಗಳನ್ನು ಹಿಡಿದು ನಿಲ್ಲಿಸಿ ಅವುಗಳ ಕೊಂಬಿಗೆ ಕಟ್ಟಿದ ವಸ್ತುವನ್ನು ಹರಿದು ತಮ್ಮದಾಗಿಸಿಕೊಂಡು ಶೌರ್ಯ ತೋರಿಸುವದು, ಒಮ್ಮೊಮ್ಮೆ ಅದರ ಕೊಂಬಿಗೆ ಬಂಗಾರದ ಚೈನು ಕಟ್ಟುವದೂ ಉಂಟು, ಆದರೆ ಆ ಹೋರಿ ಮಾತ್ರ ಬಹಳ ಸಿಟ್ಟಿನದಾಗಿರುತ್ತದೆ, ಚುರುಕಾಗಿರುತ್ತದೆ ಅದನ್ನು ಹಿಡಿಯುವದು ಒಂದು ದೊಡ್ಡ ಅಪಾಯ ಮತ್ತು ಸಾಹಸವೇ ಸರಿ. ಇಡೀ ಹಳ್ಳಿಯ ಜನ ಒಟ್ಟಿಗೆ ಸೇರಿ ಆಸಕ್ತ ಹಿರಿಕಿರಿಯರು ಗುಂಪುಮಾಡಿ ಹಣ ಕಟ್ಟಿ ಪಗಡೆ ಆಡುವದು. ವಿಜಯ ದಶಮಿಯಂದು ಸಾಯಂಕಾಲ ಬನ್ನಿ ಮುಡಿಯುವದು ಎಂದು ಊರ ಜನರೆಲ್ಲಾ, ಊರಲ್ಲಿರುವ ದೇವರುಗಳನ್ನು ಪಲ್ಲಕ್ಕಿಯಲ್ಲಿ ಕರೆತಂದು ಒಂದು ಕಡೆಗೆ ಬನ್ನಿ ವೃಕ್ಷ ಇರುವ ಕಡೆಗೆ ಸೇರಿಸಿ ಅಲ್ಲಿ ಬಾಳೆಕಂದನ್ನು ಸಾಂಕೇತಿಕವಾಗಿ ಇಟ್ಟು ಪೂಜಿಸಿ, ಛೇದನ ಮಾಡಿ ಪೂಜೆಗೈದು ವಿಜಯದ ಉತ್ಸವ ಆಚರಿಸಿ ಅಲ್ಲಿರುವ ಶಮೀ ವೃಕ್ಷದಿಂದ ಪತ್ರಿ ಕಿತ್ತು ತರುವುದು ಗಂಡುಮಕ್ಕಳು, ಅವರ ಮನೆಯೊಳಗೆ ಬರಬೇಕಾದರೆ ಮನೆಯ ಹೆಣ್ಣುಮಕ್ಕಳು ಎಲ್ಲರಿಗೂ ಆರತಿ ಎತ್ತಿ, ಒಳಗೆ ಕರೆತರುತ್ತಾರೆ, ದೇವರ ಮುಂದೆ ಶಮೀ ಪತ್ರಿ ಇಟ್ಟು ಪೂಜಿಸಿ ನಂತರ ಒಬ್ಬರಿಗೊಬ್ಬರು ಬನ್ನಿ ಕೊಟ್ಟು “ಬನ್ನಿ ತೆಗೆದುಕೊಂಡು ಬಂಗಾರದಂತೆ ಬಾಳೋಣ” ಎನ್ನುವ ಮಾತನ್ನು ಹೇಳುವದು ಎಲ್ಲಾ ಕಡೆ ಕಂಡುಬರುತಿತ್ತು. ‘ಕಂಡುಬರುತ್ತಿತ್ತು’ ಎನ್ನುವ ಪದ ಯಾಕೆ ಎನ್ನುವ ಪ್ರಶ್ನೆ ನಿಮ್ಮದಾದರೆ ಉತ್ತರವಿಷ್ಟೆ ಇದೆಲ್ಲಾ ಸಾಮೂಹಿಕ ಉತ್ಸವಗಳು ಈಗ ಎಲ್ಲ ಕಡೆ ನಶಿಸಿಹೋಗಿವೆ, ಹಳ್ಳಿಯಲ್ಲೂ ಕೂಡಾ!!.

ಮೊನ್ನೆ ಶಾಂತಾ ನಾಗಮಂಗಲ ಅವರು ಬರೆದ ‘ಬೊಂಬೆ ಬಾಗಿನ’ ಎನ್ನುವ ಲೇಖನದಲ್ಲಿ ಚಿಕ್ಕಚಿಕ್ಕ ಹೆಣ್ಣುಮಕ್ಕಳು ಒಟ್ಟಾಗಿ ಮನೆಮನೆಗಳಿಗೆ ಹೋಗಿ ಆ ಬಾಗಿನ ಸ್ವೀಕರಿಸುವ ಸಡಗರದ ಸುಂದರವಾಗಿ ಬರೆದಿರುವರು, ಹಾಗೇನೇ ಜಿ.ವಿ. ಅರುಣ ಅವರು ವಿಜಯ ಕರ್ನಾಟಕ ಪತ್ರಿಕೆಗೆ ಬರೆದಿರುವ ಲೇಖನದಲ್ಲಿ ದಸರೆಯಲ್ಲಿ ಗಂಡುಮಕ್ಕಳು ಗುಂಪು ಗುಂಪಾಗಿ ಅಂಗಡಿ ಮುಗ್ಗಟ್ಟುಗಳಿಗೆ ಹೋಗಿ ಮಾನವಮಿ ಹಾಡು ಹೇಳುವದು, ಅವರನ್ನು ಹರಸುವದು ಓ!! ಅದೆಷ್ಟು ದಸರೆಯ ವೈಭವ ಜನಸಾಮಾನ್ಯರಲ್ಲೂ!!

ಉತ್ಸವಗಳು ಅನಾದಿಕಾಲದಿಂದಲೂ ಹಿಂದೂ ಧರ್ಮದಲ್ಲಿ ವಿಫುಲವಾಗಿ ಕಾಣಸಿಗುತ್ತವೆ, ನಮ್ಮ ಸಂಪತ್ತು ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ ಮತ್ತು ಸಮಾಜದ ಜನಜೀವನವನ್ನು ಒಂದುಗೂಡಿಸುತ್ತದೆ. ***

ಹೆಸರಿನಲ್ಲಿ ಏನಿದೆ?

– ಪೋರ

ರಘುವಂಶದ ಮೊದಲ ಶ್ಲೋಕ, ವಾಗರ್ಥಾವಿವಾ ಸಂಪೃಕ್ತೌ ವಾಗರ್ಥಃ ಪ್ರತಿಪತ್ತಯೇ. ಈ ಸಾಲಿನ ಅರ್ಥ– "ವಾಕ್ ಅಂದರೆ ಶಬ್ಧ ಮತ್ತು ಅರ್ಥ ಅಂದರೆ ಅರ್ಥಕ್ಕಿರುವ ಭಾವಗಳು ಬೇರ್ಪಡಿಸಲಾಗದ ಹಾಗೆ ಬೆರೆತಿರುತ್ತವೆ" ಎಂಬುದು. ಇಂದು ನಾವು ಕಾಳಿದಾಸನ ಈ ಹೇಳಿಕೆಯನ್ನು ತಪ್ಪುಮಾಡಲು ಹೊರಟಂತಿದೆ. ನನಗೇಕೆ ಈ ಶಂಕೆ ಬಂದಿತು ಎಂದರೆ, ಹೇಳುತ್ತೇನೆ ಕೇಳಿ–

ಕಳೆದ ವರ್ಷ ನಮ್ಮ ಕಂಪನಿಯ ಮಾನವ ಸಂಪನ್ಮೂಲ ಗುಂಪಿನ ಮ್ಯಾನೇಜರ್ ಹುದ್ದೆಗೆ ಹೊಸ ಹೆಣ್ಣುಮಗಳು ಬಂದಳು. ಚಿಕ್ಕ ಹುಡುಗಿ. MBA ಮಾಡಿದವಳು ಬಹಳ ಉತ್ಸಾಹಿ. ಕಂಪನಿಯಲ್ಲಿ ಬದಲಾವಣೆಗಳನ್ನು ತರಬೇಕೆಂಬ ಅದಮ್ಯ ಅಸೆ ಆಕೆಗೆ.

ನಮ್ಮಲ್ಲಿ ಐದು ಸಭಾ ಕೊಠಡಿಗಳಿದ್ದವು. ಒಂದೊಂದೂ ಒಂದೊಂದು ಮೂಲೆಯಲ್ಲಿ ಇದ್ದವು. ಕಂಪನಿ ಆಲದ ಮರದಂತೆ ಬೆಳೆದಂತೆ ಅವು ಸಹ ಕೊಂಬೆರಂಬೆಗಳ ಮೇಲೆ ಜಾಗ ಪಡೆದಿದ್ದವು. ಗುರುತಿಸಲು ಬೇರೆ ಬೇರೆ ಹೆಸರುಗಳು.

ಈಕೆ ಅವುಗಳೆಲ್ಲಕ್ಕೂ ಹೊಸ ಹೆಸರು ಕೊಟ್ಟು ಬಾಗಿಲ ಮೇಲೆ ಬೋರ್ಡು ಹಚ್ಚಿದ್ದಳು. ಅವು ಹೀಗಿದ್ದವು.

ಸೆರೆನಿಟಿ, ಕ್ಯಾಲಿಬ್ರಿ, ಕೆಂಪ್ಟಾನ್, ಏರಿಯಾನ, ಹೀಗೆ ಗಣಕಯಂತ್ರದಲ್ಲಿ ಇರುವ ಅಕ್ಷರ ಪ್ರಕಾರಗಳ, ಅಂದರೆ ಫಾಂಟುಗಳ ಹೆಸರುಗಳು!

ಹೊಸ ಹೆಸರುಗಳು ರಾರಾಜಿಸುತ್ತಿರುವುದು ಕಂಡು ನಾನು, 'ಏಕೆ ಹೀಗೆ' ಎಂದು ಕೇಳಿದೆ.

'ಈಗಿರುವ ಹೆಸರುಗಳೆಲ್ಲ ಹಳೆಯವು. ಅವಕ್ಕೆ ಅರ್ಥವೇ ಇರಲಿಲ್ಲ. ರೆಡ್ಡಿ ಕಾನ್ಫರೆನ್ಸ್ ರೂಮ್, ಪ್ರೊಡಕ್ಷನ್ ಕಾನ್ಫರೆನ್ಸ್ ರೂಮ್, ಬೋರ್ಡ್ ರೂಮ್, ಬೋಯಿಂಗ್ ಕಾನ್ಫೆರೆನ್ಸ್ ರೂಮ್, ಯೂನಿಯನ್ ರೂಮ್... ಇಂದಿನ ಪೀಳಿಗೆಗೆ ರಿಲೇಟ್ ಆಗುವ ಹೆಸರಿಟ್ಟೆ' ಎಂದಳು.

ರೆಡ್ಡಿ ಈ ಕಂಪನಿಯ ಮೊದಲ ಡೈರೆಕ್ಟರ್. ಕಂಪನಿ ಕಟ್ಟಿದವರು. ಬೋರ್ಡ್ ರೂಮು ಬಹಳ ವರ್ಷ ಬಳಸುತ್ತಿದ್ದ ರೂಮು. ಯೂನಿಯನ್ ಕಾನ್ಫರೆನ್ಸ್ ರೂಮಿನಲ್ಲಿ ಮೊದಲ ಬಾರಿಗೆ ಕಾರ್ಮಿಕರ ವೇತನ ಒಪ್ಪಂದ ಸಹಿ ಆಗಿತ್ತು. ಹೀಗೆ ಪ್ರತಿಯೊಂದರ ಹಿಂದೆ ಒಂದು ಘಟನೆ, ಕತೆ ಇತ್ತು. ಈ ಹುಡುಗಿಗೆ ಅವೆಲ್ಲ ತಿಳಿಯದು. ತಿಳಿದುಕೊಳ್ಳುವ ವ್ಯವಧಾನ ಸಹ ಇರಲಿಲ್ಲ.

"ಸರಿ ಬಿಡು, ಹಳೆಯ ನೆನಪುಗಳನ್ನೆಲ್ಲ ಒಮ್ಮೆಗೇ ಅಳಿಸಿಹಾಕಿಬಿಟ್ಟೆ ತಾಯಿ." ಎಂದು ಹೇಳಿ ಸುಮ್ಮನಾದೆ.

ಹಳೆಯದನ್ನೆಲ್ಲ ಅಳಿಸಿಹಾಕಿ ಅನುಭವಗಳನ್ನು, ಕತೆಗಳನ್ನು ನೋವು ನಲಿವುಗಳನ್ನು ತೊಡೆದುಬಿಡುವುದು ಸರಿಯಲ್ಲ, ಅಲ್ಲವೆ?

ಇದರ ನಂತರ ನೌಕರರ ಹೆಸರು, ಫೋಟೋ ಇದ್ದ ಗುರುತಿನ ಚೀಟಿಯ ಬದಲು ಮ್ಯಾಗ್ನೆಟಿಕ್ ಸ್ಮಾರ್ಟ್ ಕಾರ್ಡು ಬಂದಿದೆ. ಇದು ಹೆಸರು ಇರದ ಕಾರ್ಡು. ನಮ್ಮಲ್ಲಿ ನೌಕರರನ್ನು ಎಂಪ್ಲಾಂಯ್‌ಮೆಂಟ್ ನಂಬರ್‌ನಿಂದ ಗುರುತಿಸಲಾಗುತ್ತದೆ. ಇ ಎನ್ 1372 ಮುಂತಾಗಿ. ಅವರ ಅಪ್ಪ ಅಮ್ಮ ಪ್ರೀತಿಯಿಂದ ಇಟ್ಟ ಹೆಸರು ಅಲ್ಲಿಗೆ ನಾಮಾವಶೇಷವಾಯಿತು ಅಲ್ಲವೇ?

ಅವರು ರೋಬೋಗಳಾದರು ಎಂಬುದು ನನ್ನ ನೋವು. ಅವರ ಹಿನ್ನೆಲೆಗಳಿಗೆ ಸಂಬಂಧವೇ ಇಲ್ಲದ ನಿರ್ಲಿಪ್ತ ಹೆಸರುಗಳು.

ಈ ಘಟನೆ ನನ್ನನ್ನು ಇಂದಿನ ಹೊಸ ಪೀಳಿಗೆಯ ಯೋಚನಾ ರೀತಿಯ ಬಗ್ಗೆ, ಅವರ ಮನಸ್ಥಿತಿಯ ಬಗ್ಗೆ ಆಲೋಚಿಸುವಂತೆ ಮಾಡಿತು. ಹೀಗೆ ಹೆಸರುಗಳನ್ನು ಬದಲಾಯಿಸುತ್ತ ಹೋದರೆ, ಬರುಬರುತ್ತಾ ಮನುಷ್ಯನ ಸಾಧನೆ ಬಾಧನೆಗಳು ಗೌಣವಾಗುತ್ತ ಹೋಗಿ ಅವನು ಕೇವಲ ಒಂದು ಸಂಖ್ಯೆ– ಸಂಕೇತವಾಗಿ ಬಿಡುವನೇನೋ ಎಂಬ ಭಯ ನನ್ನ ಕಾಡಿತು.

ಇದು ಯಶಸ್ಸಿನ ಬೆಟ್ಟ ಏರುವ ವೇಳೆ ನಾವು ದಾಟುವ ಪ್ರತಿ ಘಟ್ಟಗಳನ್ನು ಸಂಭ್ರಮಿಸಲಾಗದ ಮನಸ್ಸಿನ ದಿವಾಳಿತನವೇ?

ಪ್ರತಿಪದ ಬಳಸುವಾಗಲೂ, ಹೆಸರಿಡುವಾಗಲೂ, ಆ ವಸ್ತುವಿನ ಹಿನ್ನೆಲೆ, ಚಿತ್ರ, ಸೊಬಗು, ವೈಶಿಷ್ಟ್ಯ, ವಾಸನೆ ಮನಸ್ಸಿಗೆ ತಟ್ಟಬೇಕು. ಅದು ಬರಿ ಪದವಾಗಿ ಉಳಿಯಬಾರದು, ಅಲ್ಲವೇ?

ನೀವುಗಳು ಇಂದಿನ ಕಾರುಗಳ ಹೆಸರುಗಳನ್ನೂ ಗಮನಿಸಿದ್ದೀರೆಂದು ನಂಬುತ್ತೇನೆ. ಸ್ಕಾರ್ಪಿಯೋ, ಡಸ್ಟರ್, ಸ್ಯಾಂಟ್ರೋ, ವರ್ಣಾ, ಕ್ರೆಟಾ, ಓಕ್ಟಾವಿಯಾ, ಒಗ್ನಿಸ್, ಸೆಲೆರೊ, ಸ್ಕೊಡ, ಬ್ರೆಸ್ಸೋ, ಆಲ್ಟೊ, ಎಕ್ಸ ಎಲ್ 6 .. ಹೀಗೆ ಹಲವಾರು ಹೆಸರುಗಳು. ನನಗೆ ಆ ಹೆಸರುಗಳ ಅರ್ಥ ತಿಳಿಯದು. ಅವುಗಳನ್ನು ಉಚ್ಚರಿಸಲು ಸರಿಯಾಗಿ ಬಾರದು. ಆ ಕಾರುಗಳ ವೈಶಿಷ್ಟ್ಯಕ್ಕೂ ಅವುಗಳ ಹೆಸರುಗಳಿಗೂ ತತ್ಸಂಬಂಧ ತಿಳಿಯದು. ಅವು ಇಲ್ಲಿನ ನೆಲೆಯಲ್ಲಿ ಹೇಗೆ ಅನ್ವರ್ಥ ನಾಮಗಳಾಗುತ್ತವೆ ಎಂಬುದು ನನಗೆ ಗೊತ್ತಿಲ್ಲ. ಅವುಗಳು ಬೇರೊಂದು ದೇಶದಲ್ಲಿ ಪ್ರಸ್ತುತವಿರಬಹುದು. ಈ ನೆಲದಲ್ಲಿ ಅಲ್ಲ ಎನಿಸಿದೆ ನನಗೆ.

ಭಾರತದಲ್ಲಿ ತಯಾರಾಗುವ ಕಾರುಗಳಿಗೂ, ಸ್ಕೂಟರುಗಳಿಗೂ ಸಹ ಇದೇ ಕಷ್ಟ ಬಂದಿದೆ. ಅದೇ ನೋಡಿ, ಮಲೇಷ್ಯಾ ದೇಶದಲ್ಲಿನ ಕಾರುಗಳ ಹೆಸರುಗಳನ್ನು– ಸಾಗ, ವೀರ, ಕ್ಷತ್ರಿಯ, ಈಸ್ವರಾ, ಪ್ರಧಾನ್, ಕಂಚಿಲ್, .. ಇವು ಅಲ್ಲಿನ ಮಲಯ ಭಾಷೆಯ ಪದಗಳು. ಅವರು ಹೆಮ್ಮೆ ಯಿಂದ ಕರೆದುಕೊಳ್ಳುತ್ತಾರೆ.

ಇಂಡೋನೇಷಿಯಾದ ವಿಮಾನಯಾನ ಸಂಸ್ಥೆಯ ಹೆಸರು ಗರುಡ. ಆದರೆ ನಮ್ಮಲ್ಲಿ ಇರುವ ಹೆಸರುಗಳು ನೋಡಿ– ಇಂಡಿಗೋ, ಗೋಏರ್, ದಮಾನಿಯ, ಸ್ಪೈಸ್, ಸಹರಾ, ಕಿಂಗ್‌ಫಿಷರ್, ..ಇದು ನಾವು ಹೆಚ್ಚು ಇನ್‌ಕ್ಲೂಸಿವ್ ಅಂದರೆ ಇತರರನ್ನು ಒಳಗೊಳ್ಳುವ ಮನಸ್ಥಿತಿಯವರು ಎನ್ನುವುದನ್ನು ತೋರಿಸುತ್ತದೆಯೇ? ನಾವು ಹೆಚ್ಚು ಸೃಜನ ಶೀಲರಾಗುತ್ತಿದ್ದೇವೆ ಎಂದು ಕಾಣುತ್ತದೆಯೇ? ಇಲ್ಲಾ ನಮಗೆ ನಿರಭಿಮಾನದ ಕಾಯಿಲೆ ಕಾಡಿದೆಯೇ? ಗೊತ್ತಿಲ್ಲ.

ಕಾನ್ಪುರದ ಐ ಐ ಟಿ ಹಾಸ್ಟೆಲ್ಲುಗಳಿಗೆ ಬ್ಲಾಕ್–1 ಬ್ಲಾಕ್–2 ..ಮುಂತಾಗಿ ಕರೆಯುತ್ತಾರೆ. ಜೈಲಿನಲ್ಲೂ ಸಹ ಸೆಲ್–1 ಸೆಲ್–2 ಎಂದು ಕರೆಯುತ್ತಾರೆಂದು ಕೇಳಿದ್ದೇನೆ. ವ್ಯತ್ಯಾಸ ನನಗೆ ಕಾಣಲಿಲ್ಲ!

ಹಾಗೆಯೇ ಬೆಂಗಳೂರಿನಲ್ಲಿ ಕಾಣಬರುವ ಶಾಲೆಗಳ ಹೆಸರುಗಳನ್ನೂ ಸ್ವಲ್ಪ ನೆನಪಿಸಿಕೊಳ್ಳಿ.. ಗುಡ್ ಶೆಫರ್ಡ್ ಇಂಗ್ಲಿಷ್ ಸ್ಕೂಲು, ಸೆಂಟ್ ಆನ್, ಲಾರ್ಡ್ ಜೇಮ್ಸ್ ಆಂಗ್ಲ ಶಾಲೆ, ಕಾರ್ಮೆಲ್ ಇಂಗ್ಲಿಷ್ ಶಾಲೆ, ಹೀಗೆ .. ಹೆಸರುಗಳು. ತಿಮ್ಮಪ್ಪ ಇಂಗ್ಲಿಷ್ ಶಾಲೆ, ರಂಗಮ್ಮ ಇಂಗ್ಲೀಷ್ ಶಾಲೆ ನಾನು ಎಲ್ಲೂ ಕೇಳಿಲ್ಲ. ತಿಮ್ಮಪ್ಪನಿಗೆ, ರಂಗಮ್ಮನಿಗೆ ಇಂಗ್ಲಿಷ್ ತಿಳಿದಿರಲು ಸಾಧ್ಯವಿಲ್ಲ ಎನ್ನುವ ಧೋರಣೆಯೆ? ಸೇಂಟ್ ಸೇರಿಸಿದ ಕೂಡಲೇ ಇಂಗ್ಲೀಷ್ ಶುದ್ಧವಿರುತ್ತದೆಯೇ?

ವೈನ್ ಸ್ಟೋರ್ಸುಗಳ ವಿಚಾರ ಬೇರೆ. ಇಲ್ಲಿ ಧಾರಾಳವಾಗಿ ದೇವರ ಹೆಸರುಗಳು ಕಂಗೊಳಿಸುತ್ತವೆ. ಲಕ್ಷ್ಮೀ ವೈನ್ಸ್, ವೆಂಕಟೇಶ್ವರ ವೈನ್ಸ್, ತಿರುಮಲ ವೈನ್ಸ್ , ಇತ್ಯಾದಿ. ಎಲ್ಲಿಂದ ಎಲ್ಲಿಗೆ ಸಂಬಂಧ?

ಗಾಂಧಿ ಬಜಾರ್ ಬಳಿ ಒಂದು ಗಗನಚುಂಬಿ ಕಟ್ಟಡ ಎದ್ದಿದೆ. ನೀವೆಲ್ಲರೂ ನೋಡಿರಬಹುದು. ಈ ಬಹಳ ಸುಂದರ ಕಟ್ಟಡದ ಹೆಸರು ಮಾರ್ಕ್ವಿಸ್. ಇದು ನನ್ನ ಅರ್ಥಗ್ರಹಿಕೆಯ ಮಿತಿಗೆ ಮೀರಿದ್ದು.

ನಮ್ಮೆಲ್ಲರ ಪಾಸ್‌ಪೋರ್ಟ್ ಸುಂದರ ಪುಟ್ಟ ಪುಸ್ತಕ. ಅದನ್ನು ಅಭಿಮಾನದಿಂದ ನೋಡುತ್ತೇವೆ. ಅದರ ಮೇಲೆ ಭಾರತದ ಅಶೋಕ ಚಿಹ್ನೆ ಇದೆ. ಅದನ್ನು ಮೆಲ್ಲನೆ ಕೈ ಸವರಿದರೆ ನಾನು ಭಾರತೀಯ ಎನ್ನುವುದಕ್ಕೆ ಪುಷ್ಟಿ ಸಿಗುತ್ತದೆ. ರೋಮಾಂಚನವಾಗುತ್ತದೆ.

ಈಗ ಇಂತಹ ಪಾಸ್‌ಪೋರ್ಟ್ ಕೂಡ ಒಂದು ಚಿಪ್ಪಿನಲ್ಲಿ ಹುದುಗಿಸಿ ಪ್ರಜೆಗಳಿಗೆ ಮುಂದೆ ಕೊಡಲಾಗುವುದಂತೆ. ಒಂದು ಸಿಮ್‌ನಂತಹ ಚಿಕ್ಕ ಸಿಬಿರಿನಲ್ಲಿ ನಮ್ಮೆಲ್ಲರ ಗೋತ್ರ, ಪ್ರವರ ತುಂಬಿಸಿ, ಹುಟ್ಟಿದ ಊರು ಕೇರಿ ಜೊತೆಗೆ ಸುತ್ತಿದ ಊರು ಕೇರಿ ಎಲ್ಲ ಬರೆಸಿ ಕೊಡಲಾಗುವುದು. ಅದನ್ನೇ ಬೇಕೆಂದವರ ಮುಂದೆ ಸ್ಕ್ಯಾನ್ ಮಾಡಿಸಿ ಸಂಕಲ್ಪ ಹೇಳಿ ಮಮ ಎಂದು ಹೇಳಿ ಮುಂದುವರೆಯಬಹುದು. ಕೆಲಸ ಸುಲಭವಾಗುವುದು. ಆದರೆ ಏನನ್ನೋ ಕಳೆದು ಕೊಂಡಂತಾಗುತ್ತಿಲ್ಲವೇ?

ಇತ್ತೀಚಿಗೆ ಹುಟ್ಟಿದ ನನ್ನ ಮೊಮ್ಮಗಳಿಗೆ ಹೆಸರು ಹುಡುಕುವ ತರಾತುರಿಯಲ್ಲಿದ್ದೆ. ಈ ಕೆಲಸಕ್ಕೆ ತೊಡಗಿದಾಗ ನನಗೆ ಸಲಹಾ ರೂಪದಲ್ಲಿ ಬಂದ ಕೆಲವು ಹೆಸರುಗಳು ಇವು– ಇಶಾನಿ, ತನ್ವಿ, ಅವಿರಾ, ಇಶಿಕಾ, ಋಜುಲ, ಡಿಶಿಕಾ, ಇವಾ, ಹಿಯಾ, ಆಪ್ತಿ, ಕಿಯಾರಾ, ಓಮಿಕಾ, ಮುಂತಾದವು, ಕೆಲವೊಮ್ಮೆ ಈ ಹೆಸರು ಹುಡುಗನದ್ದೇ ಇಲ್ಲಾ ಹುಡುಗಿಯದೇ ಎಂದು ತಿಳಿಯದಷ್ಟು ಗೊಂದಲ. ಸಂಸ್ಕೃತದ ಹೆಸರಿಡುವ ಖಯಾಲಿ ಇತ್ತೀಚಿಗೆ ಹೆಚ್ಚಿದೆ. ಅದು ಸ್ಟೈಲಿಶ್ ಆಗಿದ್ದು, ಉಚ್ಚರಿಸಲು ವಿಚಿತ್ರವಾಗಿ ಕಂಡರೆ ಸಾಕು. ಅರ್ಥದ ಗೊಡವೆ ಬೇಕಿಲ್ಲ.

ವಂಶದ ಹೆಸರು ಸೂಚಿಸಲೇಬೇಕೆಂದೇನೂ ಇಲ್ಲ. ಇಟ್ಟ ಹೆಸರು ಶಬ್ಧಕೋಶದಲ್ಲಿ ಇದ್ದರೆ ಸಾಕು.

ನನಗೆ ಅನಿಸಿದ್ದು ಇಷ್ಟೇ – ಹೀಗೆ ಹೆಸರಿಡುವವರು ಆ ಹೆಸರು ವಿದೇಶಿಯರಿಗೆ ಉಚ್ಚರಿಸಲು ಸುಲಭವಾಗಲೆಂದು ಮಾಡಿದ ನಿರ್ಧಾರವಿರಬಹುದೇ ಎಂಬ ಗುಮಾನಿ.

ಒಂದು ರೀತಿಯಲ್ಲಿ ನಾವು ವಿಶ್ವಮಾನವರಾಗಲು ಸಜ್ಜಾಗುತ್ತಿದ್ದೇವೆಯೆ?

ಮಕ್ಕಳ ಹೆಸರಿನಿಂದ ಜಾತಿ ಗುರುತಿಸಲು ಆಗಬಾರದು ಎಂಬುದೇನೊ ಒಳ್ಳೆಯ ಚಿಂತನೆಯೇ. ಆದರೆ ಅದು ಭಯದ ವಾತವರಣದಿಂದ ಸೃಷ್ಟಿಯಾಗಿದ್ದರೆ ದುರದೃಷ್ಟಕರ. ಇಲ್ಲಾ ನಾವೆಲ್ಲಾ ಜಾಗತೀಕರಣದ ಹುಮ್ಮಸ್ಸಿನಲ್ಲಿದ್ದೇವೆಯೆ? ಜಾತ್ಯಾತೀತರಾಗಲು ಬಯಸುತ್ತಿದ್ದೇವೆಯೆ? ಇಲ್ಲಾ ಇದು ವಸಾಹತುಶಾಹಿ ಮನಸ್ಥಿತಿಯೆ? ಏಕೆ ಈ ಪರಿಸ್ಥಿತಿ ಉದ್ಭವವಾಗಿದೆ? ನಮಗೆ ಈ ಮಣ್ಣಿನ ವಾಸನೆಯ ಹೆಸರುಗಳೇ ದೊರೆಯವೆ? ಶಿವನೇ ಬಲ್ಲ!

ಕವಿ ಕಾಳಿದಾಸನೇ ಮತ್ತೆ ಬಂದು ಸ್ವಲ್ಪ ತಿಳಿಹೇಳಬೇಕು.

***

ಮರಳಿ ಕಾಡಿಗೆ

– ಮಹಾಬಲ

ಊರಬಾಗಿಲಲೇ ಸ್ವಾಗತ, ಆರತಿ ಮಾಲಾರ್ಪಣೆ
ಮುಂದೆ ನಮ್ಮ ಬಿಡದಿಯತ್ತ ಅದ್ದೂರಿ ಮೆರವಣಿಗೆ
ಬಂಡಿಗಟ್ಟಲೆ ಸರಬರಾಜು ಬಗೆ ಬಗೆ ಭೋಜನ
ಆಹಾ ಎಷ್ಟು ಆಹ್ಲಾದಕರ ನಮಗೆ ಈ ನಿತ್ಯಸ್ನಾನ

ನಡುವೆ ಅಕ್ಕರೆಯಲಿ ಮೈದಡವುವ ಅಧಿಕಾರಿ ಜನ
ಬಲು ವೈಭವ ವಿಶೇಷ ನಮಗೆ ಈ ಹಲವು ದಿನ
ನಿತ್ಯ ಮೆರವಣಿಗೆ ರಸ್ತೆಯಲಿ ನಡೆವ ತಾಲೀಮು
ಜನರ ಕರತಾಡನ, ಹಿಗ್ಗು ಅವರಿಗೊಂದು ಸಲಾಮು

ಮೆರವಣಿಗೆ ದಿನ ಗಂಡಭೇರುಂಡ, ಹೂವು,ಶಂಖ, ಚಕ್ರ
ಮೈತುಂಬ ಎಷ್ಟೊಂದು ಬಗೆ ಬಣ್ಣಬಣ್ಣದ ಚಿತ್ತಾರ?
ಕೊರಳ ತುಂಬ ಮಣಿಸರಗಳ ವಿಶಿಷ್ಟ ಅಲಂಕಾರ
ಬೆನ್ನ ಮೇಲೆ ಹೊಳೆಹೊಳೆವ ಕಿಂಕಾಪಿನ ವಿಸ್ತಾರ

ಎಲ್ಲ ಮುಗಿಯಿತು: ಮರಳ ಸೇರಲೇಬೇಕು ಆ ಕಾಡು
ದುಡಿತದಲಿ ನಮಗಾಗದಿರಲಿ ದ್ರೋಣನ ಪಾಡು

***

ಆನಂದ ನಗರಿಯ ಆನಂದದ ದಿನಗಳು-೩

ಕನ್ನಡ ಸಂಘದಲ್ಲಿ ಕನ್ನಡದಲ್ಲಿ ಮುದ್ರಿತ ಸುದ್ದಿಪತ್ರ ಆರಂಭಿಸಿದ್ದು

– ಶ್ರೀಧರ ಬಾಣಾವರ

ಆ ದಿನಗಳಲ್ಲಿ ಅಂದರೆ 1900ರ ಶತಮಾನದ ಕೊನೆಯ ವರ್ಷಗಳಲ್ಲಿ ಕಲ್ಕತ್ತದಲ್ಲಿ ಸಾವಿರಾರು ಕನ್ನಡ ಕುಟುಂಬಗಳು ನಗರದಾದ್ಯಂತ ವಾಸಿಸುತ್ತಿದ್ದರೂ ದಕ್ಷಿಣ ಕಲ್ಕತ್ತದಲ್ಲಿ ಹಲವಾರು ವರ್ಷಗಳಿಂದ ಚಾಲ್ತಿಯಲ್ಲಿದ್ದ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದ ಕನ್ನಡಿಗರ ಸಂಖ್ಯೆ ತೀರಾ ಇಳಿಮುಖವಾಗಿತ್ತು. ಕಲ್ಕತ್ತದಲ್ಲಿದ್ದ ಕನ್ನಡಿಗರ ಕುಟುಂಬಗಳ ವರ್ಗೀಕರಣದ ಕಡೆ ನೋಡಿದರೆ ಮೊದಲನೆಯದಾಗಿ ಅಲ್ಲಿಗೆ ಹಿಂದೆಯೇ ವಲಸೆ ಬಂದು ವ್ಯಾಪಾರ, ಉದ್ಯಮ, ಉದ್ಯೋಗಗಳಲ್ಲಿ ತೊಡಗಿಕೊಂಡು ಶಾಶ್ವತವಾಗಿ ನೆಲೆಸಿದ್ದ ಕುಟುಂಬಗಳು, ಎರಡನೆಯದಾಗಿ ಬ್ಯಾಂಕ್, ಸೇನೆ, ಕೇಂದ್ರ ಸರ್ಕಾರಿ ಸೇವೆ, ಕೆಲವು ಖಾಸಗಿ ಉದ್ಯಮಗಳಲ್ಲಿನ ಸೇವೆ ಅವಲಂಬಿಸಿದ ಎರಡು ಮೂರು ವರ್ಷಗಳ ವಾಸಕ್ಕೆ ಬಂದ ಕುಟುಂಬಗಳು. ಎರಡೂ ವರ್ಗಗಳೂ ಹೆಚ್ಚಾಗಿ ನಗರದ ದಕ್ಷಿಣ ಭಾಗದಲ್ಲೇ ವಾಸಿಸುತ್ತಿದ್ದವು. ಮೊದಲ ವರ್ಗ ಸಂಘದ ಶಾಶ್ವತ ಸದಸ್ಯತ್ವ ಹೊಂದಿದ್ದರೆ ಎರಡನೆಯ ವರ್ಗ ವಾರ್ಷಿಕ ಸದಸ್ಯತ್ವ ಹೊಂದಿರುತ್ತಿದ್ದವು. ಮೂಲತಃ ಮೈಸೂರ್ ಅಸೋಸಿಯೇಷನ್ ಟ್ರಸ್ಟ್ ಸ್ಥಾಪಿತವಾಗಿದ್ದು, ಅದು ತನ್ನದೇ ಆದ ಮೈಸೂರ್ ಹಾಲ್ ಕಟ್ಟಡವನ್ನು ಹೊಂದಿತ್ತು. ಮೈಸೂರ್ ಹಾಲ್ ಒಂದು ಸುಸಜ್ಜಿತವಾದ, ಮದುವೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾದ ಸ್ಥಳವಾಗಿದ್ದು ಅದರಿಂದ ಸಾಕಷ್ಟು ವರಮಾನ ಸಹ ಟ್ರಸ್ಟ್‌ಗೆ ಬರುತ್ತಿತ್ತು.

ಟ್ರಸ್ಟ್‌ನ ಸಾಂಸ್ಕೃತಿಕ ಅಂಗವಾಗಿ ಕರ್ನಾಟಕ ಅಸೋಸಿಯೇಷನ್ ಕಾರ್ಯನಿರ್ವಹಿಸುತ್ತಿತ್ತು. ಅದಕ್ಕೆ ಅದರದೇ ಆದ ಸದಸ್ಯತ್ವ ಹಾಗೂ ಆಡಳಿತ ಮಂಡಳಿ ಸಹ ಇತ್ತು. ಸುಸಜ್ಜಿತವಾದ ಗ್ರಂಥಾಲಯ ಸಹ ಇದ್ದು ಪ್ರತಿ ಬುಧವಾರ ಸಂಜೆ ಸದಸ್ಯರು ಅಲ್ಲಿಂದ ಪುಸ್ತಕಗಳನ್ನು ಎರವಲು ಪಡೆಯಬಹುದಾಗಿತ್ತು. ತಿಂಗಳಲ್ಲಿ ಸಣ್ಣ ಮಟ್ಟದ ಒಂದೆರಡು ಕಾರ್ಯಕ್ರಮಗಳನ್ನು, ವಾರ್ಷಿಕ ಹಬ್ಬಗಳನ್ನು ಆಚರಿಸುವ ಪದ್ಧತಿ ಇತ್ತು. ಭಾಗವಹಿಸುವ ಸದಸ್ಯರ ಸಂಖ್ಯೆ ಇಳಿಮುಖವಾಗಿ ಸಾಗುತ್ತಿತ್ತು. ಕೆಲವು ಆಸಕ್ತರು ಇದರ ಬಗ್ಗೆ ಚರ್ಚಿಸಿದಾಗ ತಿಳಿದು ಬಂದ ಅಂಶವೆಂದರೆ ಕಾರ್ಯಕ್ರಮಗಳ ದಿನಾಂಕ, ಸಮಯದ ಬಗ್ಗೆ ಸದಸ್ಯರಿಗೆ ಸಂವಹನದಲ್ಲಿ ಕೊರತೆ ಕಂಡುಬಂದಿತು. ಆಗ ಇದ್ದ ಪದ್ಧತಿಯಂತೆ ಎರಡು ಮೂರು ತಿಂಗಳಿಗೊಮ್ಮೆ ಸಂಘದ ವತಿಯಿಂದ ಕಾರ್ಯಕ್ರಮಗಳ ಬಗ್ಗೆ ಇಂಗ್ಲಿಷ್ ನಲ್ಲಿ ತಯಾರಿಸಿದ ಸೈಕ್ಲೋಸ್ಟೈಲ್ಡ್ ಪತ್ರವೊಂದನ್ನು ಸದಸ್ಯರಿಗೆ ರವಾನಿಸಲಾಗುತ್ತಿತ್ತು. ಇದು ಸದಸ್ಯರ ಗಮನವನ್ನು ಎರಡು ಮೂರು ತಿಂಗಳಕಾಲ ಹಿಡಿದಿಡುವಲ್ಲಿ ಸೋಲುತ್ತಿತ್ತು. ಇಂದು ಲಭ್ಯವಿರುವ ಸಾಮಾಜಿಕ ಜಾಲತಾಣಗಳ ಊಹೆಯೂ ಇರದ ಕಾಲ. ಅಲ್ಲೊಬ್ಬ ಇಲ್ಲೊಬ್ಬರ ಮನೆಯಲ್ಲಿ ಮಾತ್ರಾ ಸ್ಥಿರ ದೂರವಾಣಿ ಲಭ್ಯವಿತ್ತು. ಕನ್ನಡದಲ್ಲಿ ಗೃಹಪತ್ರಿಕೆಯ ರೀತಿಯಲ್ಲಿ ಮಾಸಿಕ ಸುದ್ದಿ ಪತ್ರ ತರಲು ಯೋಚಿಸಲಾಯಿತು.

ಕನ್ನಡ ಮುದ್ರಣ ಮಾಡಬಲ್ಲ ಪ್ರೆಸ್‌ಗಳು ಕಲ್ಕತ್ತದಲ್ಲಿ ಇರಲು ಸಾಧ್ಯವೇ? ಇದು ಆಗಲಾರದ ಮಾತು ಎಂದು ಕೆಲವು ಸದಸ್ಯರು ಕೈಚೆಲ್ಲಿದರು. ಅಲ್ಲಿಯೇ ಹಾಜರಿದ್ದ ಕಲ್ಕತ್ತದ ನ್ಯಾಷನಲ್ ಲೈಬ್ರರಿಯ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಕುಮಾರಪ್ಪನವರು ಭರವಸೆಯ ಕಿರಣವೊಂದನ್ನು ಹರಿಯಬಿಟ್ಟರು. ಅವರ ಮಾಹಿತಿಯಂತೆ ನಗರದ ಯಾವುದೋ ಒಂದು ಮುದ್ರಣಾಲಯದಲ್ಲಿ ಕನ್ನಡ ಡಿಟಿಪಿ ಗೊತ್ತಿರುವ ವ್ಯಕ್ತಿಯೊಬ್ಬನಿರುವುದಾಗಿ ತಿಳಿದುಬಂತು. ಆಗಿನ ದಿನಗಳಲ್ಲಿ ಬಹಳಷ್ಟು ದೊಡ್ಡ ಉದ್ಯಮಗಳು ಕಲ್ಕತ್ತೆಯಲ್ಲಿ ಮುಖ್ಯ ಕಛೇರಿಯನ್ನು ಹೊಂದಿದ್ದು ದೇಶದ ಎಲ್ಲಾ ಭಾಷೆಯಲ್ಲಿ ಕನ್ನಡವೂ ಸೇರಿದಂತೆ ಪತ್ರಿಕಾ ಜಾಹೀರಾತುಗಳು ಅಲ್ಲಿಯೇ ರೂಪುಗೊಳ್ಳುತಿದ್ದವು. ಹೀಗಾಗಿ ನನಗೆ ಕನ್ನಡದಲ್ಲಿ

ಸಂಘದ ಸುದ್ದಿ ಪತ್ರವೊಂದನ್ನು ತರಬಹುದಾದ ಸಾಧ್ಯತೆ ಕಂಡುಬಂತು. ಆ ವ್ಯಕ್ತಿಯು ಕೆಲಸ ಮಾಡುವ ಸ್ಥಳವನ್ನು ಪತ್ತೆ ಹಚ್ಚಿ ಕಾರ್ಯಪ್ರವೃತ್ತನಾದೆ. ನನ್ನ ಮನೆಯಿಂದ ಆಫೀಸಿಗೆ ಹೋಗುವ ದಾರಿಯಲ್ಲಿ ಆ ವ್ಯಕ್ತಿಯು ಕೆಲಸ ಮಾಡುವ ಮುದ್ರಣಾಲಯ ಇದ್ದದ್ದು ನನಗೆ ಅನುಕೂಲವಾಗಿ ಸುದ್ದಿಪತ್ರದ ಸಂಪೂರ್ಣವಾದ ಜವಾಬ್ದಾರಿಯನ್ನು ವಹಿಸಿಕೊಂಡೆ. ಟ್ರಸ್ಟ್‌ನ ಹಿರಿಯರೊಡನೆ ಈ ಬಗ್ಗೆ ಚರ್ಚಿಸಿ ಒಪ್ಪಿಗೆ ಪಡೆದೆ. ಸಲಹೆಯನ್ನು ಸಂತೋಷದಿಂದ ಸ್ವಾಗತಿಸಿದ ಅವರು ಅದರ ಖರ್ಚುಗಳನ್ನು ಟ್ರಸ್ಟ್‌ನ ವತಿಯಿಂದ ಭರಿಸಲು ಒಪ್ಪಿಗೆ ನೀಡಿದರು.

ಇನ್ನು ಉಳಿದದ್ದು ಅದರ ತಯಾರಿ. ಅದಕ್ಕೆ 'ಕರ್ನಾಟಕ ವಾಣಿ' ಎಂದು ಹೆಸರಿಸಲಾಯಿತು. ತಿಂಗಳಿಗೊಂದು ಸಂಚಿಕೆಯಂತೆ ನಾಲ್ಕು ಪುಟಗಳ ಚಿಕ್ಕ ವಿನ್ಯಾಸವನ್ನು ಆಯ್ದುಕೊಳ್ಳಲಾಯಿತು. ಪುಟ ತುಂಬಿಸುವ ಕೆಲಸ ನನ್ನದಾಯಿತು. ಆಯಾ ತಿಂಗಳಿನ ಪ್ರಾಮುಖ್ಯತೆ, ಕರ್ನಾಟಕದಲ್ಲಿನ ಆಗುಹೋಗುಗಳು ಮುಂತಾದ ವಿಷಯ ಗಳನ್ನೊಳಗೊಂಡ ಸಣ್ಣದೊಂದು ಸಂಪಾದಕೀಯ, ಕಳೆದ ತಿಂಗಳಲ್ಲಿ ಸಂಘದಲ್ಲಿ ನಡೆದ ಚಟುವಟಿಕೆಗಳ ಸಿಂಹಾವಲೋಕನ, ಬರುವ ತಿಂಗಳಲ್ಲಿ ಆಯೋಜಿಸಿರುವ ಕಾರ್ಯಕ್ರಮಗಳ ವೇಳಾಪಟ್ಟಿ, ಇವು ವಾಣಿಯ ಪ್ರಮುಖ ಅಂಶಗಳು ಎಂದು ನಿರ್ಧರಿಸಲಾಯಿತು. ಹಿರಿಯ ಸದಸ್ಯ ಅಯಂಗಾರ್ ನಗೆಹನಿಗಳು, ಜೊತೆಗೆ ಆರೋಗ್ಯದ ಟಿಪ್ಸ್‌ಗಳನ್ನು ತಪ್ಪದೇ ಕೊಡುತ್ತಿದ್ದರು. ಭಜಗೋವಿಂದಮ್‌ನ ಒಂದು ಚರಣ ಹಾಗೂ ಅದರ ಸರಳಗನ್ನಡದ ಅರ್ಥವನ್ನು ನಾನು ತಿಂಗಳಿಗೊಂದರಂತೆ ಕೊಡಲು ಯೋಚಿಸಿದೆ. ಅಡುಗೆಯ ರೆಸಿಪಿಗಳು ಬರತೊಡಗಿದವು. ಮಹಿಳೆಯರ ಗುಂಪಿನಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ ಕೆಲವು ಸ್ವಾರಸ್ಯಕರ ಘಟನೆಗಳು ಕೇಳಿಬರುತ್ತಿದ್ದವು. ಅದರ ನಿರೂಪಕರನ್ನು ಪುಸಲಾಯಿಸಿ ಅವನ್ನು ಬರಹ ರೂಪಕ್ಕಿಳಿಸಿಕೊಡುವಂತೆ ಕೇಳಿಕೊಂಡೆ. ಕೆಲವರು ಮೊದಲಿಗೆ ಹಿಂಜರಿದರೂ ನಂತರ ಛಳಿಬಿಟ್ಟು ಬರೆಯತೊಡಗಿದರು. ಅಂತಹ ಬರಹಗಳು ಅವರ ಹೆಸರಿನ ಸಹಿತ ಮುದ್ರಿತ ವಾದಾಗ ಅವರ ಆನಂದ, ಹೆಮ್ಮೆ ಹೇಳತೀರದಾಗಿತ್ತು. ಇದು ಇನ್ನುಳಿದವರನ್ನೂ ಉತ್ತೇಜಿಸಿತು.

ನನ್ನ ಜವಾಬ್ದಾರಿ ಹೆಚ್ಚಾಗಿತ್ತು. ತಿಂಗಳಲ್ಲಿ ಐದನೇ ತಾರೀಕಿನ ಒಳಗೆ ಪತ್ರಿಕೆ ಸದಸ್ಯರ ಮನೆಗೆ ಅಂಚೆಯ ಮೂಲಕ ತಲುಪುವುದು ಮುಖ್ಯವಾಗಿತ್ತು. ಹಾಗಿದ್ದಲ್ಲಿ ಮಾತ್ರಾ ಆ ತಿಂಗಳಲ್ಲಿ ಜರುಗುವ ಕಾರ್ಯಕ್ರಮಗಳ ಮಾಹಿತಿ ಅವರಿಗೆ ದೊರೆತು ಸದಸ್ಯರ ಹಾಜರಿ ಹೆಚ್ಚಲು ಸಾಧ್ಯವಾಗುತ್ತಿತ್ತು. ಹೀಗಾಗಿ ತಿಂಗಳು ಆರಂಭವಾಗುವ ಮೊದಲೇ ವಿಷಯಗಳನ್ನು ಕ್ರೋಢೀಕರಿಸಿಕೊಂಡು ಸುಮಾರಾದ ಪುಟ ವಿನ್ಯಾಸ ತಯಾರಿಸಿಕೊಂಡು ಮುದ್ರಣಾಲಯಕ್ಕೆ ಕೊಡಬೇಕಾಗಿತ್ತು. ನನಗಾಗಲೇ ಕನ್ನಡ ಬಳಸುವ ಡಾಸ್ ಆಧಾರಿತ ವರ್ಡ್‌ಸ್ಟಾರ್ ಉಪಯೋಗಿಸುವುದು ಗೊತ್ತಿದ್ದರೂ ಅದಕ್ಕೆ ಪೂರಕ ಸೌಲಭ್ಯಗಳ ಕೊರತೆಯಿಂದಾಗಿ ಎಲ್ಲಾ ಕೈ ಬರಹದಲ್ಲೇ ಮಾಡಬೇಕಾಗಿತ್ತು.

ಬೆಳಗ್ಗೆ ಕಛೇರಿಗೆ ಹೋಗುವ ಮಾರ್ಗದಲ್ಲಿ ಕೈ ಬರಹದ ಕರಡನ್ನು ಅಲ್ಲಿಗೆ ತಲುಪಿಸಿದರೆ ಸಂಜೆ ಹಿಂತಿರುಗುವ ವೇಳೆಗೆ ಮುದ್ರಣದ ಕರಡು ತಯಾರಾಗಿರುತ್ತಿತ್ತು. ಅಲ್ಲಿಯೇ ತಿದ್ದುಪಡಿಗಳಿದ್ದರೆ ಸೂಚಿಸಿ ಮುದ್ರಣಕ್ಕೆ ಒಪ್ಪಿಗೆ ನೀಡುತ್ತಿದ್ದೆ. ಮಾರನೆಯ ದಿನ ಸಂಜೆ ಕಛೇರಿಯಿಂದ ಹಿಂತಿರುಗುವ ವೇಳೆ ಖುಷಿಯಿಂದ ಮುದ್ರಿತ ಪ್ರತಿಗಳ ಬಂಡಲ್ ಹೊತ್ತು ಮನೆಗೆ ತರುತ್ತಿದ್ದೆ. ಸದಸ್ಯರ ವಿಳಾಸದ ರಿಜಿಸ್ಟರ್ ಮನೆಯಲ್ಲೇ ಇಟ್ಟುಕೊಂಡಿದ್ದೆ. ಎಲ್ಲ ಸದಸ್ಯರ ವಿಳಾಸ ಕೈಲಿ ಬರೆದು ಅಂಚೆಚೀಟಿ ಹಚ್ಚಿ ಮಾರನೆಯ ದಿನ ಅಂದರೆ ಒಂದನೆಯ ತಾರೀಖು ನನ್ನ ಕಛೇರಿಗೆ ಹತ್ತಿರವಿದ್ದ ಜಿ ಪಿ ಓ ನಲ್ಲಿ ಪೋಸ್ಟ್ ಮಾಡುತ್ತಿದ್ದೆ. ಎರಡುಮೂರು ದಿನಗಳಲ್ಲಿ ಅದು ಹೆಚ್ಚಿನ ಸದಸ್ಯರ ಮನೆ ತಲುಪುತ್ತಿತ್ತು. ಮೂರ್ನಾಲ್ಕು ದಿನ ನನಗೆ ಶ್ರಮವಾದರೂ ಹಲವಾರು ಕಾರಣಗಳಿಗೆ ಮನಸ್ಸಿಗೆ ತೃಪ್ತಿ ಎನಿಸುತ್ತಿತ್ತು. ಕ್ರಮೇಣ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರ ಸಂಖ್ಯೆಯಲ್ಲಿ ಸ್ವಲ್ಪಮಟ್ಟದ ಏರಿಕೆ ಕಂಡಿತು. ಎಂದೂ ಬರೆಯದಿದ್ದವರು ತಮ್ಮ ಬರಹ ಮುದ್ರಣ

ರೂಪದಲ್ಲಿ ಕಂಡು ಖುಷಿಪಡುವ ಅದರಲ್ಲೂ ಗೃಹಿಣಿಯರ ಉತ್ಸಾಹ ಕಂಡು ನನಗೆ ಏನೋ ಸಾಧಿಸಿದ ಸಾರ್ಥಕಥೆಯ ಭಾವ ಉಂಟಾಗುತ್ತಿತ್ತು. ಆ ಊರಿನಲ್ಲಿ ಆ ದಿನಗಳಲ್ಲಿ ಸಾಧ್ಯವಿಲ್ಲವೇನೋ ಅನಿಸಿದ್ದನ್ನು ಸಾಧಿಸಿದೆನೆಂದು ಗೆಳೆಯರು ಬೆನ್ನು ತಟ್ಟಿದರು.

ಈ ದಿನ ಲಭ್ಯವಿರುವ ತಾಂತ್ರಿಕತೆ ದೊರೆಯದಿದ್ದ ಆ ದಿನಗಳಲ್ಲಿ ಇಂತಹದೊಂದನ್ನು ಇತರರ ಸಹಕಾರದೊಂದಿಗೆ ಸಾಧಿಸಿದ್ದು ನೆನೆದಾಗ ಇಂದಿಗೂ ಖುಷಿಕೊಡುತ್ತದೆ

***

ಗಜಲ್

– ಮಹಾಬಲ

ಇನ್ನೆಷ್ಟು ದಿನ ಬರೆಯುವಿರಿ ಹೂವುಗಳ ಕುರಿತು?
ಬರೆಯಬಾರದೆ ಬೇರು, ಮಣ್ಣು ಕಾಂಡಗಳ ಕುರಿತು.

ಇನ್ನೆಷ್ಟು ದಿನ ಚಿತ್ರಿಸುವಿರಿ ಪ್ರಕೃತಿಯ ಸೊಬಗು?
ಬರೆಯಬೇಕಿದೆ ಮನುಜನ ವಿಕೃತಿಗಳ ಕುರಿತು.

ಇನ್ನೆಷ್ಟು ಕಾಲ ಕವನಿಸುವಿರಿ ಪ್ರೀತಿ, ಪ್ರೇಮಗಳ ವಿಚಾರ
ಬರೆಯಬೇಕಿದೆ ಅದರಾಚೆಯ ಬವಣೆಗಳ ಕುರಿತು

ಇನ್ನೆಷ್ಟು ದಿನ ವಿವರಿಸುವಿರಿ ಅಸಮಾನತೆಯ ಅಟಾಟೋಪ
ಮಾತು ಸಾಕು, ಕೃತಿ ಬರಲಿ ಅಂಥ ವಿಚಾರಗಳ ಕುರಿತು

ಇನ್ನೆಷ್ಟು ಚಿಂತಿಸುವಿರಿ ಅಧ್ಯಾತ್ಮ, ಶರಣಾಗತಿ, ಸ್ತುತಿ
ಇನ್ನಾದರೂ ಬರೆಯಿರಿ ಅನ್ಯ ವಸ್ತುಗಳ ಕುರಿತು

(ಕವನದ ಮೊದಲ ಸಾಲು ಇತ್ತೀಚಿಗೆ ದಸರಾ ಕವಿಗೋಷ್ಠಿಯಲ್ಲಿ
ಹಿರಿಯ ಕವಿಗಳ ಭಾಷಣದ ಪ್ರೇರಣೆಯಿಂದ)

***

ಸೀತಾರಾಮಯ್ಯ ಮೇಷ್ಟ್ರ ಕನ್ನಡ ಪಾಠ

– ಕೆ.ಎನ್. ಭಗವಾನ್

ನಾನು ವ್ಯಾಸಂಗ ಮಾಡಿದ ಅಕ್ಕಿರಾಂಪುರ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಸೀತಾರಾಮಯ್ಯ ಎಂಬ ಕನ್ನಡ ಪಂಡಿತರಿದ್ದರು. ಅತ್ಯಂತ ಸಂಪ್ರದಾಯಸ್ಥರು. ಪಾಠ ಮಾಡುವಷ್ಟೆ ಶಿಸ್ತು ಅವರ ದೈನಂದಿಕ ಉಡುಪಿನಲ್ಲೂ ಸಹ. ಸಾಧಾರಣ ಎತ್ತರ, ಹಾಲುಗೆನೆ ಮೈಬಣ್ಣದವರಾಗಿದ್ದ ಅವರು ಶುಭ್ರ ಬಿಳಿಯ ಷರ್ಟು, ಕಚ್ಚೆ ಹಾಕಿ ಉಟ್ಟ ಬಿಳಿಯ ಮಲ್ ಪಂಚೆ, ಷರಟಿನ ಮೇಲೆ ಕಡುನೀಲಿಯ ಕೋಟು, ತಲೆಗೆ ಟೋಪಿ ಇದು ಅವರ ನಿತ್ಯ ದಿರಿಸು. ಹಣೆಗೆ ಭೂಷಣ ಎನಿಸುವಂತೆ ದುಂಡನೆಯ ಸಾದು ಬೊಟ್ಟು. ತಮ್ಮ ತರಗತಿಯ ವಿದ್ಯಾರ್ಥಿಗಳ ದಿರಿಸು ಹೇಗಾದರೂ ಇರಲಿ, ಹಣೆಯಲ್ಲಿ ವಿಭೂತಿಯೋ, ಗಂಧವೋ, ನಾಮವೋ, ಸಾದು ಬೊಟ್ಟೋ ಇರಬೇಕೆಂಬ ಕಟ್ಟಾಣತಿ! ದಸ್ತಗೀರ್ ಸಾಬ್ ಎಂಬ ಏಕೈಕ ಮುಸಲ್ಮಾನ ವಿದ್ಯಾರ್ಥಿಗೆ ಹಣೆ ಲಾಂಛನದಿಂದ ವಿನಾಯ್ತಿ. ನಿತ್ಯ ಐದು ಕಿ.ಮೀ. ದಾರಿ ಸವೆಸುತ್ತಿದ್ದ– ಅಪ್ಪಿ ತಪ್ಪಿ ಬರೀ ಹಣೆಯಲ್ಲಿರುತ್ತಿದ್ದ ನನ್ನಂಥವರು ಹಾದಿಬದಿಯ ಬೇಲಿ ಹಣ್ಣನ್ನು ಹೊಸಗಿ ಅದರ ಕಪ್ಪನೆಯ ಪಿಷ್ಟವನ್ನು ಹಣೆಗಿಟ್ಟುಕೊಳ್ಳೋದನ್ನ ಅಭ್ಯಾಸ ಮಾಡಿಕೊಂಡಿದ್ದಿವಿ.

ಪದ್ಯವನ್ನು ಯಾರೂ ವಾಚಿಸಬಾರದು, ಹಾಡಬೇಕು ಅಂತ ಪಂಡಿತರು ನಮಗೆಲ್ಲ ತಾಕೀತು ಮಾಡುತ್ತಿದ್ದರು. ಅವರಾದರೋ ಗಮಕದಂತೆ ಹಾಡಿ ಪದಗಳ ಅರ್ಥ, ತಾತ್ಪರ್ಯ ಹೇಳುತ್ತಿದ್ದರು. ಅಂದಿನ ಪದ್ಯಗಳೂ ಸಹ ಪ್ರಾಸ, ಲಯಗಳೊಂದಿಗೆ ಹಾಡಿಕೊಂಡು ಕಂಠಪಾಠ ಮಾಡುವಂಥವೇ ಆಗಿದ್ದವು ಅನ್ನಿ. ಪಂಡಿತರ ಬರವಣಿಗೆಯಂತೂ ಅನುಕರಣೀಯ. ಬಲಗೈ ಹೆಬ್ಬೆರಳು, ತೋರು ಬೆರಳುಗಳ ಮಧ್ಯೆ ಸೀಮೆಸುಣ್ಣ ಹಿಡಿದು ಕಪ್ಪು ಹಲಗೆಯ ಮೇಲೆ ಬರೆದ ಕನ್ನಡ ಅಕ್ಷರಗಳೆಂದರೆ ಸುಂದರ ಮಣಿಮಾಲೆಯೇ. ಆಗ ಭಾಷೆಯ ಪ್ರಶ್ನೆ ಪತ್ರಿಕೆಯಲ್ಲಿ ತಪ್ಪಿಲ್ಲದೆ ಮತ್ತು ದುಂಡಾದ ಬರೆವಣಿಗೆಗೆ 5 ಅಂಕಗಳು ಮೀಸಲಿರುತ್ತಿತ್ತು. ನನ್ನ ಕೈಬರಹ ಇಡೀ ಶಾಲೆಗೇ ದುಂಡಾಗಿದ್ದರೂ, ಸೀತಾರಾಮಯ್ಯನವರಿಂದ ನಾಲ್ಕಕ್ಕಿಂತ ಹೆಚ್ಚು ಅಂಕ ಗಳಿಸಲಾಗಲೇ ಇಲ್ಲ!

ತರಗತಿಯ ಮುಂದಿನ ಬೆಂಚು ಹುಡುಗಿಯರಿಗೆ ಮೀಸಲು.ಅವರ ಹಿಂದೆ ಓದು ಬರಹದಲ್ಲಿ ಜಾಣರು ಎನಿಸಿಕೊಂಡಿದ್ದ ನನ್ನಂಥವರು. ಹೆಚ್ಚು ಎತ್ತರವಿದ್ದವರಿಗೆ ಕೊನೆಯ ಬೆಂಚು! ಆ ಸಾಲಿಗೆ ಸೇರುತ್ತಿದ್ದ ಒಬ್ಬ ಹುಡುಗ ದಸ್ತಗೀರ್. ಸ್ವಲ್ಪ ಕೀಟಲೆ ಹುಡುಗನಾದರೂ ಅವನ ಬಗ್ಗೆ ಯಾವ ಮೇಷ್ಟರೂ ಅಷ್ಟಾಗಿ ದಂಡಿಸುತಿರಲಿಲ್ಲ. ಕಾರಣ ದಸ್ತಗೀರನ ಅಪ್ಪ ಮಸ್ತಾನ್ ಸಾಬ್ ಪೋಲೀಸ್ ದಫೇದಾರ್ ಆಗಿದ್ದುದು.

ಅದೊಂದು ಮಧ್ಯಾಹ್ನ ಪಂಡಿತರು ವಿ.ಸೀ. ಅವರ 'ಕಾದಿರುವಳು ಶಬರಿ' ಪದ್ಯದ ಪಾಠಮಾಡುತ್ತಿದ್ದರು. ಬೇರೆ ಊರಿನ ಶಾಲೆಯಿಂದ ಟಿಸಿ ತಂದು ಸೇರಿಕೊಂಡಿದ್ದ ಶಿವಾನಂದ ಎಂಬ ಹುಡುಗ ನನ್ನ ನಿಯತಾಸನವನ್ನು ಆಕ್ರಮಿಸಿದ್ದ.ಕಾರಣ ನಾನು ಅಂದು ತಡವಾಗಿ ತರಗತಿಗೆ ಹೋಗಿದ್ದು! ಗತ್ಯಂತರವಿಲ್ಲದೆ ನಾನು ಆ ದಿನ ಕೊನೆಯ ಬೆಂಚಿನಲ್ಲಿ ದಸ್ತಗೀರ್ ಸಾಬನ ಪಕ್ಕವೇ ಕೂಡಬೇಕಾಯಿತು. ಅವನು ನಿತ್ಯವೂ ಏನಾದರೊಂದು ಕುರುಕು ತಿಂಡಿಯನ್ನು ಜೇಬಿನಲ್ಲಿ ಹಾಕಿ ತಂದು ತರಗತಿಯಲ್ಲೇ ಸದ್ದಿಲ್ಲದೆ ಮೆಲ್ಲುತ್ತಿದ್ದ. ಆದಿನ ಕೊಬರಿ, ಬೆಲ್ಲದ ಚೂರುಗಳು. ನನಗೂ ಒಂದಿಷ್ಟು ಕೊಟ್ಟ. ಪಂಡಿತರು ಎಂದಿನ ಗಮಕ ಶೈಲಿಯಲ್ಲಿ 'ಕಾದಿರುವಳು ಶಬರಿ ರಾಮ ಬರುವನೆಂದು..:' ಹಾಡಲು ಪ್ರಾರಂಭಿಸಿದರೆ, ಅದಕ್ಕೆ ಸಂವಾದಿಯೆಂತೆ ದಸ್ತಗೀರ್ 'ಕಾದಿರುವುದು ಕೊಬರಿ ಮಾಮ ಬರುವನೆಂದು.' ಎಂದು ಗುನುಗತೊಡಗಿದ. ಹೀಗೆ ಎರಡು ಮೂರು ಬಾರಿ ಮಾಡಿದ್ದನ್ನು ಅಕ್ಕಪಕ್ಕದ ಹುಡುಗರು ಕೇಳಿಸಿಕೊಂಡರೂ, ಪಂಡಿತರ ಗಮನಕ್ಕೆ ತರುವ

ಧೈರ್ಯಮಾಡಲಿಲ್ಲ. 'ಕೊಬರಿ'ಯ ದನಿ ಆಗೊಮ್ಮೆ ಹದ ತಪ್ಪಿ ಮೇಲೇರಿದಾಗ, ಕೇಳಿಸಿಕೊಂಡ ಮೇಷ್ಟರು ತಲೆಯೆತ್ತಿ ನೋಡುತ್ತ 'ಯಾರವನು ಕತ್ತೆ ಭಡವಾ?' ಎಂದು ರೇಗಿದರು. ತಿನಿಸು ತುಂಬಿದ್ದ ನನ್ನ ಬಾಯಿ ಮುಚ್ಚಿತ್ತು. ಇತರರು ಬಿಟ್ಟಾರೆಯೇ? ಮೆಲ್ಲಗೆ 'ದಸ್ತಗೀರ್' ಎಂದರು. ಪಂಡಿತರ ಸಿಟ್ಟು ನಖಶಿಖಾಂತ ಏರಿತು. ಕುರ್ಚಿಯಿಂದ ಮೇಲೆದ್ದು ನಿಂತು 'ಏಯ್ ಕತ್ತೆ ಭಡವಾ, ನಡೆಯೋ ಕ್ಲಾಸಿನಿಂದಾಚೆ' ಎಂದಬ್ಬರಿಸಿದರು. ಆ ಧಡಿಯ ಕಿಂಚಿತ್ತೂ ಬೇಸರಪಡದೆ ಖುಷಿಯಿಂದಲೇ ಹೊರನಡೆದ.

ಶಾಲೆಯ ಹೊರ ಮೈದಾನದಲ್ಲಿ ಅಲ್ಲಲ್ಲಿ ಸೊಂಪಾಗಿ ಹುಲ್ಲು ಬೆಳೆದಿತ್ತು. ಅಲ್ಲಿ ಎರಡು ಕತ್ತೆಗಳು ಮೇಯಲು ಬಂದಿದ್ದವು. ದಸ್ತಗೀರ್ ಅವುಗಳ ಪೈಕಿ ಒಂದರ ಬೆನ್ನು ಮೇಲೆ ಹತ್ತಿ ಕುಳಿತು ಸವಾರಿ ಮಾಡುತ್ತಿದ್ದುದನ್ನು ಕೆಲವು ಹುಡುಗರು ನೋಡಿ ನಕ್ಕರು. ಪಂಡಿತರೂ ಒಮ್ಮೆ ನೋಡಿ 'ಹೀಗೆ ಕತ್ತೆ ಕಾಯೋಕೆ ಲಾಯಕ್ಕು. ಆ ಧಡಿಯನಿಗೆ ಓದು ಬರಹ ಯಾಕೆ? ಅಪ್ಪ ಹೇಗೂ ದಫೇದಾರ. ಮಗನಿಗೊಂದು ಕನಿಷ್ಟಬಿಲ್ಲೆಯ ಕೆಲಸ ಕೊಡ್ಸೋದು ಕಷ್ಟವಾ?' ಎಂದು ಗೊಣಗುತ್ತಲೇ ಅಂದಿನ ಪಾಠ ಮುಗಿಸಿದರು.

ನನ್ನ ಹಿರಿಯಣ್ಣ ಸಹ ಶಾಲಾ ಮಾಸ್ಟರ್ ಆಗಿದ್ದವನೇ. ಆತ ಕೂಡಾ ಕೋಪ ಬಂದಾಗ ಕತ್ತೆ ಭಡವಾ ಎಂದು ಬಯ್ಯುತ್ತಿದ್ದುದುಂಟು. ಆದರೆ ಕತ್ತೆ ಭಡವಾ ಪ್ರಮಾಣೀಕರಣಗೊಂಡಿದ್ದು ಮಾತ್ರ ಆ ನಮ್ಮ ಕನ್ನಡ ಪಂಡಿತರಿಂದಲೇ ಎಂದು ನನ್ನ ನಂಬಿಕೆ!

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ,
ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 206 – ಸಂಚಿಕೆಯ ಬಿಡುಗಡೆಯ ದಿನಾಂಕ: 12 ನವೆಂಬರ್ 2022 – ಶನಿವಾರ

ಕೆಲವು ಭೇಟಿಗಳು ಪೂರ್ವ ನಿಯೋಜಿತವಿರುತ್ತವೆ

– ರಾಧಿಕಾ ಗುಜ್ಜರ್

ನಾಲ್ಕು ಗಂಟೆಗೆ ತಲುಪುತ್ತೇನೆ ಎಂದು ಹೇಳಿದ್ದೆ. ವಾಟ್ಸಾಪ್‌ನಲ್ಲಿ ವಿಳಾಸ ಬಂದಿತ್ತು.

ಇನ್ನೇನು ??!!

ಗೂಗಲ್ ಮ್ಯಾಪ್ ಹಾಕಿದ್ದೇ ಆಟೋ ಹಿಡಿದು ಹೊರಟೆ. ಸರಿಯಾಗಿ 18 ನಿಮಿಷಗಳಲ್ಲಿ ಮನೆಯ ಎದುರು ಇದ್ದೆ. ಮನೆ ಯಾವುದೆಂದು ತಿಳಿಯದ ಕಾರಣ ಅಲ್ಲೇ ನಿಂತಿದ್ದ ಮಹಿಳೆಯೊಬ್ಬರಿಗೆ, ನಾನು ಹುಡುಕುತ್ತಿರುವ ಮನೆಯವರ ಹೆಸರು ಹೇಳಿದೆ. ಹಾಗೇ, ನಾನು ತಲುಪಲಿರುವ ಮನೆಯವರಿಗೂ ಆಗಲೇ ಕರೆ ಮಾಡಿದ್ದೆ. ಇವರು ತೋರಿಸುವುದಕ್ಕೂ ಅವರು ಬರುವುದಕ್ಕೂ ಒಂದೇ ಆಯಿತು.

ನನಗಿಂತ ಎತ್ತರದ ಗೇಟ್. ಕಾಂಪೌಂಡ್ ಒಳಗೆ ತೆಂಗಿನ ಮರ ಹಾಗೂ ಚಂದದ ಆರೆಂಟು ಗಿಡಗಳು. ವಿಶಾಲ ಅಂಗಳ. ಆ ವಾರವೆಲ್ಲಾ ಬಡಿಸಲ್ಪಟ್ಟ ಮಳೆಯ ಮೆನುವಿನಿಂದಾಗಿ ತೊಯ್ದು ತೊಪ್ಪೆಯಾಗಿತ್ತು ಹೊರಾವರಣ. ಮನೆಯೊಡತಿ ನಗುತ್ತಾ ಬರಮಾಡಿಕೊಂಡು, ಮೊದಲ ಮಹಡಿಯಲ್ಲಿ ತಾವು ವಾಸವಿದ್ದೇವೆಂದು ಹೇಳುತ್ತಾ, ಮೆಟ್ಟಿಲು ಹತ್ತುತ್ತಾ, ಕುಶಲ ಕೇಳುತ್ತಾ, ಒಳಹೊರಟರು.

ಒಳಗಡಿಯಿಟ್ಟೆ ಅಷ್ಟೇ...

ಹಾಲ್‌ನ ಒಂದು ಇಡಿಯ ಭಾಗ ಪಾರಿತೋಷಕಗಳು, ಸನ್ಮಾನ ಲೇಖಗಳು, ಸನ್ಮಾನದ ನಿಮಿತ್ತ ನೀಡಿದ ವಿಗ್ರಹಗಳು–ಫಲಕಗಳು, ಬಿರುದು ಫಲಕಗಳು, ಬಹುಮಾನಗಳು... ಮತ್ತೊಂದು... ಮಗದೊಂದು... ಮತ್ತೆಲ್ಲಾ.... ಸುಮಾರು 40–50 ಇದ್ದವೇನೋ. ಮೆಡಲ್‌ಗಳನ್ನು ಟೇಪು ಸಮೇತ ಕಟ್ಟಿ ಮತ್ತು ಇನ್ನೂ ಕೆಲವನ್ನು ಡಬ್ಬಕ್ಕೆ ಹಾಕಿ ಸಜ್ಜಾದ ಮೇಲಿಟ್ಟಿದ್ದೇನೆ ಎಂದರು. ಝುಗ್ಗನೆ ಒಂದು ಧವಳ ಬೆಳಕಿನ ಕಿಡಿ ಮೈಯೊಳಗೆ ಹೊಕ್ಕಂತೆ ಆಯ್ತು.

ಇಡಿಯ ಮನೆಯ ಬಣ್ಣ ಹೊಡೆಸುವ ಕೆಲಸ ನಡೆಯುತ್ತಿತ್ತು. ಕೆಳಗಿನ ಮನೆಯ ಕೆಲಸ ಪೂರ್ಣ ಮುಗಿದಿತ್ತು. ನಾಳೆ ನಾಡಿದ್ದರಲ್ಲಿ, ಮಳೆಯ ಅಬ್ಬರ ನೋಡಿಕೊಂಡು ನಮ್ಮ ಮನೆಯ ಕೆಲಸ ಶುರು ಮಾಡುತ್ತಾರೆ ಎಂದರು. ಒಂದು ಕಾರ್ಯನಿಮಿತ್ತ ನನ್ನ ಭೇಟಿಯಿದ್ದ ಕಾರಣ, ಅದನ್ನು ನಾನು ಮೊದಲು ಪೂರೈಸಿಕೊಳ್ಳಬೇಕಿತ್ತು. ಅದನ್ನು ನಾವಿಬ್ಬರೂ ಸೇರಿ ಅತ್ಯಂತ ಅಚ್ಚುಕಟ್ಟಾಗಿ ಮುಗಿಸಿಕೊಂಡೆವು ಕೂಡಾ.

ನನ್ನಿಷ್ಟದ ಹಬೆ ಕಡುಬು ಕಾದಿತ್ತು. ಹುರಳಿ ಚಟ್ನಿಪುಡಿ ಹಾಗೂ ತುಪ್ಪದೊಂದಿಗೆ ಸವಿದೆ. ಮನೆಯೊಡತಿ, ನನ್ನಕ್ಕನ ಜೇನು ಪ್ರೀತಿ ಬೇರೆ. ಅದೆಷ್ಟೋ ಹರಟಿದೆವು. ಮೊಟ್ಟೆಗೆ ಕಾವು ಕೊಟ್ಟು, ಮರಿ ಹಕ್ಕಿ ಹೊರಬಂದು, ಹಕ್ಕಿ ಹಾರಿಹೋಗಿತ್ತೋ ಏನೋ.. ಅಷ್ಟು. ನಾನಂತೂ ನಮ್ಮ ತಾಯಿಯೊಂದಿಗೂ ಹೇಳಿಕೊಳ್ಳದ, ನನ್ನ ಹಾಳು ಬಾವಿಯ ಮುಚ್ಚಳ ತೆರೆದು ಕುಳಿತಿದ್ದೆ, ಅದೂ ಅತ್ಯಂತ ಸಹಜವಾಗಿ. ಅತ್ಯಂತ ಬಿಚ್ಚು ಮನಸ್ಸಿನಿಂದ, ನಿರ್ಭಿಡೆಯಾಗಿ, ನಿರಾಳವಾಗಿ, ಇದ್ದಿದ್ದು ಇದ್ದಂತೆ ಬದುಕಿನ ಪಯಣವನ್ನು ಹೇಳಿಕೊಂಡಿದ್ದೆ. ನನ್ನ ಮನದ ದುಗುಡ ಕಳೆದಿದ್ದಕ್ಕೋ ಏನೋ, ಹೊರಗೆ ನಿರಾಳವಾಗಿ ಮಳೆ ಶುರುವಾಗಿತ್ತು. ಮಧ್ಯದಲ್ಲಿ ನನ್ನ ಡೈರಿಯ ಟಿಪ್ಪಣಿಗಳೂ ಸಹಾ ದಾಖಲಾದವು. ಇವಿಷ್ಟು ನನ್ನ ಮತ್ತು ಆಕೆಯ ಭೇಟಿಯ ಬಾಹ್ಯ ಚಿತ್ರ.

ಹೌದು, ನೀವೆಲ್ಲ ಯೋಚಿಸುತ್ತಿರುವುದು ಸರಿಯಿದೆ. ಒಂದು ಒಳನೋಟವನ್ನು ಖಂಡಿತ ನೀಡುತ್ತೇನೆ.

ನನ್ನದು ಅತ್ಯಂತ ಅಕರಾಳವಿಕರಾಳ ಬದುಕಿನ ಪಯಣ. ಸರಿ, ಬದುಕು ಒಂದು ದಡಕ್ಕೆ ಹತ್ತಿತು ಎನ್ನುವಷ್ಟರಲ್ಲಿ ಮತ್ತೆ ಆಘಾತ. ಅಕ್ಷರಶಃ ಅಲ್ಲಲ್ಲಿ ಉದುರಿದ್ದ ಗೇಟ್‌ನ ಬಣ್ಣದ ಚಕ್ಕೆಗಳು, ಗೇಟ್, ಕಿಟಕಿ, ಹೊರ ಗ್ರಿಲ್ಸ್‌ಗಳ ತುಕ್ಕು ಹಿಡಿದ ನೋಟ, ಗೋಡೆಯ ಕೊನೆಯಲ್ಲಿ ಸಾಮಾನು ಸಾಗಿಸುವಾಗ ಅಥವಾ ಭಾರದ ವಸ್ತುಗಳು ತಾಗಿ ಉದುರಿದ ಸಿಮೆಂಟ್ ಹಾಗೂ ರೂಫ್ ಬಿಟ್ಟು ಬಣ್ಣ ಕಳೆದ ಮನೆಯಂತೆ. ಕಟ್ಟಡವಿದ್ದೂ, ಭದ್ರವಿದ್ದೂ ಹಾಳು ಬಿದ್ದಂತೆ.

ಇಂತಹ ಮನೆಗೆ ಓರೆಗಾರನಂತೆ ಬಂದವರೇ ನನ್ನಕ್ಕ. ಗೇಟಿನಿಂದ ಹಿಡಿದು ದೇವರ ಕೋಣೆಯವರೆಗೂ ಈಗ ಎಲ್ಲವೂ ಸ್ವಚ್ಛ, ಓರಣ ಹಾಗೂ ಚಂದವಾಗಿದೆ. ನನಗೇ ಗೊತ್ತಿಲ್ಲದ ನನ್ನ ಮನೆಯೀಗ ಅದ್ಭುತವಾಗಿದೆ. ನನ್ನನ್ನು ನನಗೆ ಪರಿಚಯಿಸಿ, ಸಾಹಿತ್ಯ ಪಯಣದೆಡೆಗೆ ತಿರುಗಿಸಿದರು. ಈ ದಾರಿಯಲ್ಲಿ ಹೊರಟ ನನಗೆ ನನ್ನ ಮಕ್ಕಳ ಪರಿಚಯವೂ ಹೊಸ ರೀತಿಯಲ್ಲಿ ದಕ್ಕಿತು. ಮಕ್ಕಳು ಸ್ನೇಹಿತೆಯರಾಗಿ ನನ್ನನ್ನಪ್ಪಿದರು. ನಾನು ನನ್ನ ಮಕ್ಕಳನ್ನು ಅರಿಯುವ ಹೊಸ ಆಯಾಮ ತೆರೆದುಕೊಂಡಿತು. ಬಹುಶಃ ಅಮ್ಮಳನ್ನು ಕೊರಗಿ ಹಳೆಯ ಮನೆಯಂತೆ ಕುಸಿಯುತ್ತಾಳೆ ಎಂಬ ಅವರ ಭಯ ದೂರವಾಯಿತು.

ಬದುಕು ಕಿತ್ತುಕೊಂಡಷ್ಟೇ ಕೊಡುತ್ತದೆ ಸಹಾ. ತೆರೆದುಕೊಳ್ಳಲು ನಾವು ಸಿದ್ಧರಿರಬೇಕು. ಬದುಕು ನಮ್ಮ ಮನವೆಂಬ ಮನೆಗೆ ಬಣ್ಣಗಳನ್ನು ಮಾತ್ರವಲ್ಲ ಅತ್ಯುತ್ತಮ ಸ್ನೇಹದ ವಲಯವೆಂಬ ಪದಕ ಪಾರಿತೋಷಕಗಳನ್ನೂ ಅಲಂಕರಿಸುತ್ತದೆ. ಸಕಾರಾತ್ಮಕ ಯೋಚನೆಗಳು ನಮ್ಮದಾಗಬೇಕಷ್ಟೇ. ಅದನ್ನು ಕಲಿಸುವ ಒಬ್ಬ ಅಕ್ಕನೂ ಸಿಗಬೇಕು, ಅಷ್ಟೇ.

ಅಕ್ಕಾ, ಎಂಥ ಅಗಾಧ, ಅದ್ಭುತ ಸಾಹಿತ್ಯ ಪ್ರತಿಭೆ ತಮ್ಮದು ಎಂದೆ. ಏನೋ ಒಂದು ಶಕ್ತಿ ನನ್ನನ್ನು ನಡೆಸಿಕೊಂಡು ಹೋಗುತ್ತಿದೆ. ನನ್ನ ಕೈಯಿಂದ ಇಷ್ಟೆಲ್ಲಾ ಕನ್ನಡ ಸಾಹಿತ್ಯ ಸೇವೆ ನೆರವೇರುತ್ತದೆ ಎಂದು ಅಂದುಕೊಂಡೇ ಇರಲಿಲ್ಲ ಎಂದರು. ನನಗೂ ಸಹಾ, ಇವರು ಹೀಗೆಲ್ಲ ಮಾರ್ಗದರ್ಶಕರಾಗುತ್ತಾರೆ ಎಂದು ಎಲ್ಲಿ ತಿಳಿದಿತ್ತು. ಅವರು ಸಾಹಿತ್ಯದ ಸೇವೆಯ ಬಗ್ಗೆ ನುಡಿದದ್ದು ನನಗೆ ನನ್ನದೇ ಆದ ಬೇರೆ ಅರ್ಥವನ್ನು ತೆರೆದಿಟ್ಟಿತ್ತು.

ಸಿಕ್ಕರು.. ಅಷ್ಟೇ... ತಮ್ಮ ನೀಲಾಂಜನದಿಂದ ನನ್ನ ಹಣತೆಗೂ ಒಂದು ಜ್ಯೋತಿ ಅಂಟಿಸಿದರು.

ಒಂದು ಕೊನೆಯ ಸಾಲು ಉಳಿಯಿತು. ಅದನ್ನೂ ಹೇಳಿ ಬಿಡುತ್ತೇನೆ. ಈಗ ನನ್ನ ಚಂದದ ಕನ್ನಡ ಮನದ ಮನೆಗೆ ಒಳ್ಳೊಳ್ಳೆಯ ಸಾಹಿತ್ಯ ಮಹಾರಾಜ, ಮಹಾರಾಣಿ, ಅತಿರಥ, ಮಹಾರಥ, ಹೆಡ್ಮಾಷ್ಟರು, ದಾರ್ಶನಿಕರ ಕೊಡುಗೆಗಳು ಬಂದು ಸೇರುತ್ತಿವೆ. ನಿಜಕ್ಕೂ ಶ್ರೀಮಂತೆ ನಾನೀಗ.

ಕೆಲವು ಭೇಟಿಗಳು ಪೂರ್ವ ನಿಯೋಜಿತವಿರುತ್ತವೆ.

***

ಚರಿತಾರ್ಥ

– ಭ ರಾ ವಿಜಯಕುಮಾರ್

ಧರ್ಮ ವಿಗ್ರಹವಾಗೆ ಹೆಸರಾಯ್ತು ರಾಮ
ಭರತ ಭೂಮಿಯ ಅಸ್ಮಿತೆಯಾಯ್ತು ನಾಮ
ಮನಮನದಯೋಧ್ಯೆಯಲಿ ಮಂದಿರವು ಹುಟ್ಟಲಿ
ಘನ ಜೀವನದ ಸತ್ವ ಮುಗಿಲನ್ನು ಮುಟ್ಟಲಿ ॥

'ಅಲ್ಲಿಂದ' ಬಂದಿಲ್ಲಿಗೆ ನಮ್ಮ ಹಾಗೆ ಬಾಳಿದ
ಎಲ್ಲ ಪಾಡಿನೆಲ್ಲೆ ಸಹಿಸಿ ಗಾಢ ಭಾವವುಳಿಸಿದ
ವಹಿಸಿದೆಲ್ಲ ಪಾತ್ರಗಳಲಿ ತೋರಿದಂಥ ಬದ್ಧತೆ
ಸಹಿಸುತೆಲ್ಲ ಸಂದಿಗ್ಧವ ಆದರ್ಶಕೆ ಸಿದ್ಧತೆ!
॥ಮನಮನದ॥

ಯುಗಧರ್ಮ ಬದಲಾಗಿ ಹೊಸ ನೀರು ಬಂದರೂ
ಮನುಜ ಭಾವವು ಒಂದೆ ಅಂದಿಗೂ ಇಂದಿಗೂ
ಅಸ್ತ್ರಗಳು ಹೊಸದಾಯ್ತು ಸಾವದೇ ಅಲ್ಲವೇ?
ಸಂಸ್ಕೃತಿಯು ಬದುಕಿನಾ ನೀತಿಯೊಳಗಿಲ್ಲವೇ?
॥ಮನಮನದ॥

ಅಲ್ಲಿಯವ ಇಲ್ಲಿಯವ ಎಲ್ಲಿಯವನಾಗಲಿ
ಸೊಲ್ಲಿನಲಿ ಸೊಗವಿರಲು ಬಲ್ಲಿದನೆ ಅಲ್ಲವೇ?
ಕೊಟ್ಟ ಮಾತದು ಕೃತಿಯು ನಿಷ್ಠೆಯಲಿ ದೃಢವ್ರತಿಯು
ಒಟ್ಟು ಬದುಕಿನ ಚಿತ್ರ ಆದರ್ಶ ಗತಿಯು
॥ಮನಮನದ॥

ದೃಢ ಮನವು ದೃಢ ದೇಹಿ ದೃಢ ಚಿತ್ತ ರಾಮ
ಮುನ್ನಡೆಸಲೆಮ್ಮ ಚಿಂತನೆಗಳಲಿ ನೇಮ
ದಿವ್ಯ ಚರಿತೆಯ ಸಾರ ಬೇರಿನೊಳಗಿಳಿಯಲಿ
ಭವ್ಯವಾಗಲಿ ಭುವಿಯು ಪುರುಷಾರ್ಥ ಸವಿಯಲಿ
॥ಮನಮನದ॥

***

ಸಣ್ಣ ಕತೆ

ಸುಬ್ಬೂ ಮತ್ತು ವೆಂಕಿ

– ಉಷಾರಾಣಿ

'ಬಾರೋ ಸುಬ್ಬು ಬಾ. ನಿನಗೋಸ್ಕರಾನೇ ಕಾಯ್ತಾ ಇದ್ದೇ'.

'ಸುಮತಿ, ಎರಡು ಕಪ್ಪು ಕಾಫಿ ತಾ. . ಸುಬ್ಬೂ ಬಂದಿದಾನೆ.'

'ನಿಮಗೆಲ್ಲೋ ಭ್ರಾಂತು. ನಿಮ್ಮ ಸ್ನೇಹಿತರು ಅಮೆರಿಕಾಗೆ ಹೋಗಿ ಈವತ್ತಿಗೆ ಒಂದು ತಿಂಗಳಾಯಿತು '

'ಹೌದಲ್ವಾ, ಯಾಕೋ ಸುಬ್ಬು ತುಂಬಾನೇ ನೆನಪಾಗ್ತಾ ಇದಾನೆ. ಅಲ್ಲಿ ಈಗವನಿಗೆ ಬೆಳಗ್ಗೆ ಅಲ್ವಾ ..'

'ಇಲ್ಲಿಂದ ಹೋದಾಗ ತಲುಪಿದೆ ಅಂತ ಫೋನು ಮಾಡಿದವರು ಇದುವರೆಗೂ ಪತ್ತೇ ಇಲ್ಲ. ನೀವು ಸುಮ್ನೆ ಕನವರಿಸುತ್ತೀರಿ. ಈಗ ಅವರಿಗೆ ಜಂಭ ಬಂದಿದೆ'

'ಪಾಪ, ಮಗನ ಮನೆ. ಬಹಳ ದಾಕ್ಷಿಣ್ಯದ ಮನುಷ್ಯ. ಅಲ್ಲಿ ವ್ಯವಸ್ಥೆ ಹೇಗೋ ಏನೋ? ಅದೂ ಅಲ್ಲದೆ ಅವನಿಗೆ ಈ ವಾಟ್ಸಾಪ್ ಕಾಲ್ ಮಾಡಕ್ಕೆ ಬರೋದೂ ಇಲ್ಲ.'ಸುಮತಿಯ ಒಂದು ವ್ಯಂಗ್ಯದ ನಗೆ ಅವನ ಮನಸ್ಸಿಗೆ ಬಹಳ ಬೇಸರ ಉಂಟುಮಾಡುತ್ತಿತ್ತು. ಅವರ ಬಗ್ಗೆ ಏನೇ ಮಾತನಾಡಿದರೂ ಗಂಡ ಒಪ್ಪುವುದಿಲ್ಲ ಎಂದು ಅವಳಿಗೆ ಚೆನ್ನಾಗಿ ಅರ್ಥವಾಗಿತ್ತು.

ಸುಬ್ಬು ಅದು ಹೇಗೆ ಪರಿಚಯ ಆದನೋ ಗೊತ್ತಿಲ್ಲ ಯಾವುದೋ ಸಮಾರಂಭದಲ್ಲಿ ಮೊದಲ ಭೇಟಿ. ಬಾದರಾಯಣ ಸಂಬಂಧ ಹೇಳ ವಾವೆಯಲ್ಲಿ ನಾವಿಬ್ಬರೂ ದಾಯಾದಿಗಳಪ್ಪಾ ಎಂದಿದ್ದ. ಆ ಸಂಬಂಧ ಅವನಿಗೇ ಅರ್ಥವಾಗಬೇಕು. ಬಾಲ್ಯ ಸ್ನೇಹಿತ ಅಲ್ಲದಿದ್ದರೂ ಅದು ಹೇಗೋ ಏಕವಚನದಲ್ಲಿ ಮಾತನಾಡುವುದು ಇಬ್ಬರಿಗೂ ಆಪ್ಯಾಯಮಾನ ವಾಗಿತ್ತು. ವೆಂಕಟೇಶನಿಗೆ ತಿಳಿಯುತ್ತಿದ್ದುದು ಒಂದೇ. ಸುಬ್ಬುವಿನ ನಿಷ್ಕಲ್ಮಶ ಪ್ರೀತಿ. ಮುಚ್ಚುಮರೆಯಿಲ್ಲದ ಸ್ವಭಾವ. ಕಾಫಿ ಎಂದರೆ ಪಂಚಪ್ರಾಣ ಬೆಳಗ್ಗೆ ಪ್ರತಿದಿನವೂ ಹಾಜರ್.

'ನಿಮ್ಮನೆ ಕಾಫಿ ಬೀಳದೇ ಹೋದರೆ ನಂಗೆ ದಿನ ಪ್ರಾರಂಭಾನೇ ಆಗೋಲ್ಲಾಪ್ಪಾ' ಅಂತಿದ್ದ. ಅವನ ಕಾಫಿಯ ಮೇಲಿನ ಅತಿಯಾದ ಪ್ರೀತಿ ಸುಮತಿಯ ಬಾಯಿಗೆ ಯಾವಾಗಲೂ ಆಹಾರವಾಗುತ್ತಿದ್ದುದಂತೂ ನಿಜ. ಬೆಳಗ್ಗೆ ಎದ್ದು ವಾಕಿಂಗ್ ಮುಗಿಸಿ ದಾರಿಯಲ್ಲಿ ಅವರಿವರ ಮನೆಯಲ್ಲಿ ಹೂಗಳನ್ನು ಕೊಯ್ದುಕೊಂಡು 'ವೆಂಕಿ ಇಗೋ ಪೂಜೆಗೆ ಹೂವು' ಎಂದು ದೇವರ ಮನೆಯಲ್ಲಿಟ್ಟು ಬರುತ್ತಿದ್ದ. ಸುಮತಿ ಉರಿದು ಬೀಳುತ್ತಿದ್ದಳು. ಈ ಕದ್ದ ಹೂವು ತಂದು ದೊಡ್ಡದಾಗಿ ಏನೋ ಮಹದುಪಕಾರ ಮಾಡಿದೆ ಎಂದುಕೊಳ್ಳುತ್ತಾರೆ ನಿಮ್ಮ ಸ್ನೇಹಿತರು. ಯಾರಿಗೆ ಬೇಕು? ದೇವರೇನು ಕೇಳಿದಾನೆಯೇ ನನಗೆ ಹೂ ಪೂಜೆ ಮಾಡು ಅಂತಾ.'

ವೆಂಕಿಗೆ ಇದು ತಮಾಷೆಯಾಗಿ ಕಾಣುತ್ತಿತ್ತು. 'ಅಲ್ವೋ ಸುಬ್ಬು, ನೀನು ಹೂ ಕುಯ್ಯೋವಾಗ ಯಾರಾದ್ರೂ ನಿನ್ನ ಕೈ ಹಿಡಿದುಬಿಟ್ರೆ ಏನೋ ಮಾಡ್ತೀಯಾ? ನಾಯಿಗಳು ಅಟ್ಟಿಸಿಕೊಂಡು ಬಂದ್ರೆ? '

'ಛೀ ಹಾಗೆಲ್ಲಾ ಏನೂ ಆಗೋಲ್ವೋ. ಏನಂತೆ ದೇವರಿಗೆ ಎರಡು ಹೂವು ಕೊಯ್ದುಕೊಳ್ತಾ ಇದೀನಿ, ನಿಮಗೂ ಪುಣ್ಯ ಬರುತ್ತೆ ಅಂತಾ ಹೇಳ್ತೀನಿ. ಅಷ್ಟಕ್ಕೂ ಕತ್ತಲೇಲಿ ನಾನು ಕಾಣೋದೇ ಇಲ್ಲಾ. ಐದು ಅಡಿ ಎರಡಿಂಚು ನಾನೇನು ನಿನ್ನ ತರಹ ಬೆಳ್ಳಗೆ ಹೊಳೀತಾ ಇದೀನಾ?' ಸೊಟ್ಟಗೆ ನಗುತ್ತಿದ್ದ. ಕಾಫಿ ಕೈಗೆ ಬಂದ ತಕ್ಷಣ ಸ್ವರ್ಗ ಅವನಿಗೆ. ಸೊರ್ ಸೊರ್ ಅಂತ ಕುಡಿದು ಆಸ್ವಾದಿಸುತ್ತಿದ್ದ. ಶಬ್ದ ಮಾಡದಂತೆ ಕುಡಿಯುವ ಕಲೆಯನ್ನು ಅವನಿಗೆ ಕಲಿಸಿದ್ದರೂ ಅದೇನೂ ಪ್ರಯೋಜನವಾಗಿರಲಿಲ್ಲ. ವೆಂಕಿ ಕಾಫಿ ಕುಡಿದು ಬ್ಯಾಂಕಿಗೆ ಹೊರಡಲು ತಯಾರಾಗಲು ಹೋದರೆ ಇವನು ನಿಧಾನವಾಗಿ ದಿನಪತ್ರಿಕೆ ಓದಿಕೊಂಡು ಹೊರಡುತ್ತಿದ್ದ. ಸುಮತಿಗೆ ಇವನೆಂದರೆ ಅಸಡ್ಡೆ. ಗಂಡನಿಗಾಗಿ ಅವನನ್ನು ಸಹಿಸಿಕೊಂಡಿದ್ದಳು. ಸುಬ್ಬೂಗೆ ತಿಂಡಿ ತಿನ್ನುವುದು ಅಷ್ಟಕಷ್ಟೆ. ಇನ್ನೊಂದು ಲೋಟಾ ಕಾಫಿ ಕೊಟ್ಟರೆ ಆನಂದವಾಗಿ ಹೀರಿಕೊಂಡು ಮನೆ ಕಡೆ ಗಾಡಿ ಬಿಡುತ್ತಿದ್ದ. ಒಮ್ಮೊಮ್ಮೆ 'ದಾರೀಲಿ ಬರೋವಾಗ ನೋಡ್ದೆ ತರಕಾರಿ ತುಂಬಾ ಫ್ರೆಶ್ ಆಗಿತ್ತಪ್ಪ ಅದಕ್ಕೆ ತಂದೆ ಕಣೋ ವೆಂಕಿ' ಎಂದು ಒಂದು ಹೀರೇಕಾಯೋ, ಸೀಮೆಬದನೆಯೊ ಹಿಡಿದುಕೊಂಡು ಬರುತ್ತಿದ್ದ. 'ಇದು ಯಾರ ಮೂಗಿಗೆ ಸಾಕಾಗುತ್ತದೆ' ಎಂದು ಸುಮತಿ ಮೂಗೆಳೆಯುತ್ತಿದ್ದಳು. ನಮ್ಮ ಮನೆಯ ಕಾಫೀಪುಡಿ ಎಲ್ಲಾ ಇವರ ಹೊಟ್ಟೆಗೆ ಸುರಿದು ಸುರಿದೂ ಮೂರು ದಿನವೂ ಬರೂಲ್ಲ. ಎಂದು ಬೇಸರಿಸುತ್ತಿದ್ದಳು.

ಸುಬ್ಬು ವೆಂಕಿಯೊಂದಿಗೆ ರಾಜಕೀಯ, ಹವಾ ವರ್ತಮಾನ, ಕೃಷಿ, ಮಾರಾಟ, ಬ್ಯಾಂಕು, ಕ್ರೀಡೆ, ಸಿನಿಮಾ ಹೀಗೆ ಎಲ್ಲಾ ವಿದ್ಯಮಾನಗಳನ್ನೂ ಮಾತನಾಡುತ್ತಿದ್ದ. ತನ್ನ ಸಂಸಾರದ ಬಗ್ಗೆಯಾಗಲೀ ವೆಂಕಿಯ ಸಂಸಾರದ ಬಗ್ಗೆಯಾಗಲೀ ಒಂದು ಮಾತೂ ಆಡುತ್ತಿರಲಿಲ್ಲ. ಅದು ಅವನ ಜಾಯಮಾನ. ಸುಮತಿ ಒಮ್ಮೊಮ್ಮೆ ಅವನಿಗೆ ಕೇಳಿಸುವಂತೆಯೇ ಅವನ ವಿರುದ್ಧವಾಗಿ ಗೊಣಗುತ್ತಿದ್ದಳು. 'ಸುಮ್ನೆ ದೊಡ್ಡದಾಗಿ ಹೇಳ್ತೀರಾ ಈ ಊರಿನ ಜಿಲ್ಲಾಧಿಕಾರಿಗಳು, ಕೋಟ್ಯಾಧಿಪತಿ ವಾಸನ್ ಶ್ರೀವತ್ಸ ಅವರು ನಿಮ್ಮ ಸಹಪಾಠಿಗಳು ಅಂತ. ಅಂತಹವರ ಜೊತೆ ಸಂಪರ್ಕ ಇಟ್ಟುಕೊಂಡರೆ ಸರಿ. ನೀವೆಲ್ಲ ಕೇಳ್ತೀರಿ. ನಿಮಗೆ ಇಂತಹ ಕೆಲಸಕ್ಕೆ ಬಾರದವರೇಬೇಕು.

'ಸುಮತಿ, ಬಡವಾ ನೀನು ಮಡಗ್ದಂಗಿರು ಅಂತಾ ಹೇಳಿಲ್ವಾ? ದೊಡ್ಡವರ ಸಹವಾಸದಿಂದ ದೂರಾ ಇರಬೇಕು. ದೇವರಂತಹ ಮನುಷ್ಯ ನಮ್ಮ ಸುಬ್ಬು. ಅದಕ್ಕಿಂತ ಯಾವುದೇ ಹಾನಿ ಇಲ್ಲ'

ಸುಮತಿಗೆ ಸಿಟ್ಟೇ ಬರುತ್ತಿತ್ತು. 'ಮೊದಲು ಒಂದು ಸರಿಯಾದ ಕೆಲ್ಸ ಗೊತ್ತು ಮಾಡಿಕೊಳ್ಳಲಿ. ಒಂದು ಕಾಗೇನೂ ಇರಲ್ಲ. ಇವರೇ ಹೊರಗೆ ಬರ್ತಾರೋ ಅಥವಾ ಅವರೇ ಇವರನ್ನು ಓಡಿಸುತ್ತಾರೋ ಯಾರಿಗೆ ಗೊತ್ತು.'

ಆದರೆ ಸುಬ್ಬೂ ಮಾತ್ರ ಒಂದೇ ಒಂದು ದಿನವೂ ಬೇಸರ ಪಟ್ಟುಕೊಳ್ಳುವುದಾಗಲಿ, ಸುಮತಿಯನ್ನು ನಿಂಧಿಸುವುದಾಗಲಿ ಮಾಡಲಿಲ್ಲ. ಅವಳಿಗೆ ಇವನ ಮೇಲೆ ಅತಿಯಾಗಿ ಜಿಗುಪ್ಸೆ ಬಂದಾಗ ಕಾಫಿ ಲೋಟವನ್ನು ಕೈಗೂ ಕೊಡುತ್ತಿರಲಿಲ್ಲ. ಮೇಜಿನ ಮೇಲೆ ಕುಕ್ಕುತ್ತಿದ್ದಳು.

'ಅಮ್ಮಾವ್ರಿಗೆ ಕೆಲಸ ಜಾಸ್ತೀ ಅಂತಾ ಕಾಣುತ್ತೇ' ಎಂದು ಭಯ ಭಕ್ತಿಯಿಂದ ಕಾಫಿ ಲೋಟಾ ಕೈಗೆತ್ತಿಕೊಳ್ಳುತ್ತಿದ್ದ.

'ಸುಬ್ಬೂ, ನಾಳೆ ಕಾಫಿ ಬೇಕೋ ಬೇಡ್ವೋ. ಹುಷಾರು, ಅವಳಿಗೆ ಕೇಳಿಸಿದ್ರೆ ಅಷ್ಟೇ ನಿನ್ನ ಜೊತೆ ನಂಗೂ ಕಾಫಿ ಕಟ್'.

'ಛೇ ಛೇ, ಎಲ್ಲಾದ್ರೂ ಉಂಟಾ? ಅಮ್ಮಾವ್ರು ಪಾಪ ಇದುವರೆಗೂ ನನ್ನ ಪಾಲಿನ ಕಾಫಿ ತಪ್ಪಿಸಿಲ್ಲ. ಪಾಪ ಕೆಲ್ಸಾ ಜಾಸ್ತಿ ಇರಬೇಕು.' ಎನ್ನುತ್ತಿದ್ದ.

ಪುಣ್ಯಾತ್ಮ ಸುಬ್ಬು ಒಂದು ಕೆಲಸದಲ್ಲೂ ಗಟ್ಟಿಯಾಗಿ ನಿಂತವನಲ್ಲ. ನಾಲ್ಕು ದಿನ ಇಲ್ಲಿ ನಾಲ್ಕು ದಿನ ಅಲ್ಲಿ. ಇವನಿಗೆ ಪಿತ್ರಾರ್ಜಿತ ಅಂತಾ ಒಂದು ಮನೆ ಬಂದಿತ್ತು. ಅದನ್ನು ಭಾಗಮಾಡಿ ಅರ್ಧ ಬಾಡಿಗೆಗೆ ಕೊಟ್ಟಿದ್ದ. ಅದೊಂದೇ ತಿಂಗಳ ನಿಶ್ಚಿತ ವರಮಾನ. ಒಬ್ಬನೇ ಮಗ. ಅವನು ಏನು ಓದುತ್ತಿದ್ದಾನೆ ಎನ್ನುವ ಕಲ್ಪನೆಯೂ ಇವನಿಗಿಲ್ಲ. ಇವನೇ ಒಂದಿಷ್ಟು ಬೇಯಿಸಿ ಹಾಕುತ್ತಿದ್ದ.

ಒಂದು ದಿನ ಇದ್ದಕ್ಕಿದ್ದಂತೆ ಕಾಫಿಗೆ ಬರಲೇ ಇಲ್ಲ. ಮಾರನೆಯ ದಿನ ಬಂದ.

'ಏನೋ ಸುಬ್ಬು ನೆನ್ನೆ ನಿನಗೋಸ್ಕರ ಕಾದೂ ಕಾದೂ ಸಾಕಾಯ್ತು. ಕಾಫಿ ಕುಡಿದ ಹಾಗೇ ಆಗ್ಲಿಲ್ಲಾಪ್ಪ '

'ಓ ಸಾರಿ ವೆಂಕಿ. ನನ್ನ ಹತ್ರ ಈ ಮೊಬೈಲು ಇಲ್ಲಾಪ್ಪಾ. ನಿನಗೆ ತಿಳಿಸೋಣಾಂದ್ರೆ. ನನ್ನ ಮಗ ವಿದೇಶಕ್ಕೆ ಹೋದ ಕಣೋ. ಬಲವಂತ ಮಾಡಿ ಏರ್‌ಪೋರ್ಟ್‌ಗೆ ಕರೆದುಕೊಂಡು ಹೋದ. ನಾನು ಬರೀ ಟಾಟಾ ಮಾಡಕ್ಕೆ ಸಾವಿರ ಖರ್ಚು ಮಾಡಿದೆ ಕಣೋ. ಬಸ್ನಲ್ಲಿ ಹೋಗ್ತೀನಿ ಅಂದ್ರೆ ಬಲವಂತ ಮಾಡಿ ಟ್ಯಾಕ್ಸೀಲೇ ಕಳಿಸಿದ'.

'ಲೋ ಸುಬ್ಬು, ಇದು ಒಳ್ಳೇ ವಿಷ್ಯ ಅಲ್ವೇನೋ? ನಿನ್ನ ಮಗ ಕೆಲಸಕ್ಕೆ ವಿದೇಶಕ್ಕೆ ಹೋದ್ನೋ ಅಥವಾ ಮುಂದೆ ಓದಕ್ಕೋ?'

'ಈಗ ಕೆಲಸಕ್ಕೆ ಹೋಗಿದಾನೆ. ಹಾಗೇ ಒದ್ತಾನಂತೆ. ನಂಗೆ ಅದೊಂದೂ ಗೊತ್ತಾಗೊಲ್ಲ ಕಣೋ. ಅದೇನೋ ಹೇಳ್ದ ಯಾರೋ ಸ್ಪಾನ್ಸರ್ ಮಾಡಿದಾರೆ ಅಂತ. ನಾನೇನೋ ಹೇಳಿದೆನಪ್ಪಾ, ನಮ್ಮ ದೇಶದ ಗಾಳಿ ನೀರು ಕುಡಕೊಂಡು ಇಲ್ಲಿ ವಿದ್ಯಾಭ್ಯಾಸ ಮಾಡಿದೀಯ. ಇಲ್ಲೇ ಯಾವುದಾದರೂ ಕೆಲಸಕ್ಕೆ ಸೇರ್ಕೋ ಅಂತ. ಕೇಳಬೇಕಲ್ಲ. ಕೊನೆಗೆ ಬೈದೆ. ನಮ್ಮ ಸರಕಾರ ನಿಂಗೆ ಖರ್ಚು ಮಾಡಿರುವುದನ್ನೆಲ್ಲಾ ವಾಪಸ್ಸು ಕೊಡಬೇಕು ಅಂದೆ. ಊಹೂಂ. ವಿದೇಶಕ್ಕೆ ಹೋಗ್ಲೇಬೇಕು ಅಂತ ಹಠ ಹಿಡಿದು ಹೋದ. ಮನೆ ಮಾಡಿ ನನ್ನನ್ನೂ ಕರೆಸ್ಕೋತಾನಂತೆ. ನಂಗೆ ಇಷ್ಟಾ ಇಲ್ಲಾ ಕಣೋ. ಪರದೇಶಕ್ಕೆ ಯಾರು ಹೋಗ್ತಾರೆ. ಅಕಸ್ಮಾತ್ ಅಲ್ಲೇ ಏನಾದ್ರೂ ಪ್ರಾಣ ಹೋದ್ರೆ ನಾನು ಪರದೇಶೀನೇ ಆಗೋಗ್ತೀನಪ್ಪ. ನಂಗೆ ಹೀಗೇ ಇರಬೇಕು. ನಿನ್ನ ಜೊತೆ ಒಂದು ಹತ್ತು ನಿಮಿಷ ಮಾತಾಡಿದ್ರೆ ಏನೋ ಸಮಾಧಾನ'.

'ಇದೇನೋ ಶುಭ ಸಮಾಚಾರಾನೇ, ಆದ್ರೆ, ನೀನು ಒಂಟಿ ಆದ್ಯೆಲ್ಲೋ?'

'ಏನು ಮಾಡ್ಲಿ ಹೇಳು?'

'ಇನ್ನೊಂದು ಮದುವೆ ಮಾಡ್ಕೋ.'

'

ನಾನೇನೋ ರೆಡಿ ಆದ್ರೆ ಯಾರಪ್ಪ ಹೆಣ್ಣು ಕೊಡ್ತಾರೆ?' ಹ್ಹಿಹಿಹಿ ಎಂದು ತನ್ನ ಜೋಕಿಗೆ ತಾನೇ ನಕ್ಕ.

'ಅವಳು, ಅದೇ ನನ್ ಹೆಂಡ್ತಿ, ಅಷ್ಟು ಬೇಗ ಹೋಗ್ತಾಳೇಂತ ಗೊತ್ತೇ ಇರಲಿಲ್ಲ ನೋಡು. ಮಗ ಕೈಗೆ ಬರೋವರೆಗೂ ಇದ್ದಿದ್ರೆ ಖುಷಿ ಪಟ್ಟಿರೋಳು.'

‘ಹುಟ್ಟು, ಸಾವು ನಮ್ಮ ಕೈಯ್ಯಲಿದ್ಯಾ ಸುಬ್ಬು? ಏನಾದ್ರಾಗ್ಲೀ, ನೀನು ಅದೃಷ್ಟವಂತ ಕಣಯ್ಯ. ನನ್ನ ಮಗಾನೂ ವಿದೇಶಕ್ಕೆ ಹೋಗಕ್ಕೆ ಕುಣೀತಾ ಇದಾನೆ. ಆಗ್ತಾ ಇಲ್ಲಾ.’

‘ಅಯ್ಯೋ ಜೊತೆಯಲ್ಲಿ ಮಗ ಇದ್ದು, ಸೊಸೆ ಮೊಮ್ಮೆಕ್ಕಳು ಎಲ್ಲಾ ಇದ್ರೆ ಅದೃಷ್ಟ ಕಣಯ್ಯ. ನಾನು ನೋಡು ಒಂಟಿ ಪಿಶಾಚಿ ಆಗಿದೀನಿ‘.

ಅಪ್ಪನನ್ನೇ ನೆಚ್ಚಿಕೊಂಡಿದ್ದರೆ ಇವನ ಮಗನ ಕಥೆ ಅಷ್ಟೇ, ಚಿಪ್ಪೇ ಗತಿಯಾಗುತ್ತಿತ್ತು. ಮಗ ಬುದ್ದಿವಂತ ಓದು ಮುಗಿಯುವವರೆಗೂ ಸ್ಕಾಲರ್‌ಶಿಪ್ಪು, ಫ್ರೀಶಿಪ್ಪು ಸಿಕ್ತು. ಹಾಗಾಗಿ ಹೇಗೋ ಮುಂದೆ ಬಂದ. ಸುಬ್ಬುವಿನ ಒಂದು ಒಳ್ಳೆಯ ಗುಣ ಎಂದರೆ ಎಂತಹ ಸಂಕಷ್ಟ ಬಂದಾಗಲೂ ವೆಂಕಿಯನ್ನು ಒಂದು ಪೈಸೆ ದುಡ್ಡು ಕೇಳಲಿಲ್ಲ. ಮನೆ ರಿಪೇರಿ ಎಂದು ಬ್ಯಾಂಕಿನ ಸಾಲಕ್ಕಾಗಿ ಓಡಾಡುತ್ತಿದ್ದ. ಇವನಿಗೆ ಸರಿಯಾದ ಸಂಬಳ ಇಲ್ಲದ ಕಾರಣ ಬ್ಯಾಂಕಿನಿಂದ ಸಾಲ ಸಿಗಲಿಲ್ಲ. ಕೊನೆಗೆ ವೆಂಕಿ ಒಂದಿಪ್ಪತ್ತೈದು ಸಾವಿರ ಇವನ ಕೈಯ್ಯಲ್ಲಿಟ್ಟರೆ,

‘ಬೇಡಾ ವೆಂಕಿ. ನಮ್ಮ ಸ್ನೇಹದ ಮಧ್ಯೆ ಈ ಹಣಾ ಬರೂದು ಬೇಡಾ. ಹಣಾ ಬಂದ್ರೆ ನಾವು ದೂರಾಗಿಬಿಡ್ತೀವಿ. ದಿನಾ ನಂಗೆ ಸಿಗೋ ಕಾಫೀಗೂ ಕಲ್ಲು ಹಾಕಬೇಡ್ವೋ‘ ಎಂದು ನಯವಾಗಿ ನಿರಾಕರಿಸಿದ್ದ. ಅವನ ಮಾತುಗಳ ಹಿಂದಿನ ದಾರ್ಶನಿಕತೆಗೆ ವೆಂಕಟೇಶನಿಗೆ ಗೆಳೆಯನ ಬಗ್ಗೆ ಅಭಿಮಾನ ಉಕ್ಕಿಬಂದಿತ್ತು.

ಸುಮತೀದು ಒಂದೇ ಗಲಾಟೆ ‘ನಿಮ್ಮ ಕೆಲಸಕ್ಕೆ ಬಾರದ ಸ್ನೇಹಿತನ ಮಗ ವಿದೇಶಕ್ಕೆ ಹೋಗಿದಾನೆ. ನಮಗೂ ಒಬ್ಬನೇ ಮಗ. ನಮ್ಗೆ ಅವನ್ನು ಕಳುಹಿಸಲು ಸಾಧ್ಯವಾಗುತ್ತಿಲ್ಲ. ನಿಮ್ಮ ಸಹಪಾಠಿ ವಾಸನ್ ಅವರನ್ನು ಭೇಟಿ ಮಾಡಿ’.

‘ನಿನ್ನ ಮಗ ಓದಿ ಒಳ್ಳೆ ಅಂಕ ಪಡೆದರೆತಾನೇ ಏನಾದರೂ ಮಾಡುವುದು. ಅದು ಅಲ್ಲದೆ ಅವರೆಲ್ಲಾ ಹೇಗೆ ಸಹಾಯ ಮಾಡುತ್ತಾರೆ? ಇಲ್ಲೇ ಓದಿ ಕೆಲಸಕ್ಕೆ ಸೇರಿದರೆ ಏನು ತೊಂದರೆ?’ ಅದೆಲ್ಲಕ್ಕಿಂತ ನನಗೆ ಅವರನ್ನು ಸಹಾಯ ಕೇಳಲು ಮತ್ತೆ ನಮ್ಮ ಸ್ನೇಹವನ್ನು ನೆನಪಿಸುವುದು ಇಷ್ಟ ಇಲ್ಲಾ. ನಾನು ಇಲ್ಲಿಯವರೆಗೂ ಯಾರ ಮುಂದೆಯೂ ದೇಹಿ ಎಂದಿಲ್ಲ’.

‘ಹಾಗೆ ಹೇಳಿ. ಒಟ್ಟಿನಲ್ಲಿ ನಿಮ್ಮ ಮಗ ಓದಿ ಮುಂದೆ ಬರುವುದು ನಿಮಗೆ ಇಷ್ಟಾ ಇಲ್ಲಾ.’

ಇವರ ಈ ಆತುರದ ಬುದ್ದಿಗೆ ಸರಿಯಾಗಿ ಒಬ್ಬ ಏಜೆಂಟ್ ಒಂದು ಸಮೂಹವನ್ನು ಒಟ್ಟಾಗಿ ಕರೆದೊಯ್ಯುವುದಾಗಿ ಇವರಿಂದ ಲಕ್ಷಾಂತರ ಹಣ ಪಡೆದು ದುಬೈವರೆಗೂ ಕರೆದುಕೊಂಡು ಹೋಗಿ ಕೈಬಿಟ್ಟಿದ್ದ. ಕೈಯ್ಯಲ್ಲಿರುವುದೆಲ್ಲಾ ಖರ್ಚಾಗಿ ವಾಪಸ್ಸು ಬರಲು ದುಡ್ಡಿಲ್ಲದೇ ಇರುವಾಗ ಸುಬ್ಬೂ ಮಗ ಸಹಾಯ ಮಾಡದೇ ಇದ್ದಿದ್ದರೆ ಇವನ ಸ್ಥಿತಿ ದೇವರೇ ಗತಿ. ಪಾಪ ಅವನು ದುಬೈನಲ್ಲಿರುವ ತನ್ನ ಸ್ನೇಹಿತನಿಗೆ ಹೇಳಿ ಟಿಕೇಟಿಗೆ ತಾನೇ ದುಡ್ಡು ಕೊಟ್ಟು ಇವನಿಗೆ ಮರಳಿ ಮನೆಗೆ ಬರುವಂತೆ ಮಾಡಿದುದು ವೆಂಕಟೇಶಯ್ಯನ ಕುಟುಂಬ ಹೇಗೆ ತಾನೇ ಮರೆಯಲು ಸಾಧ್ಯ. ಸುಬ್ಬುಗೆ ಧನ್ಯವಾದ ತಿಳಿಸೋಣವೆಂದರೆ ಅವನ ಫೋನ್ ನಂಬರ್ ತಿಳಿದಿರಲಿಲ್ಲ. ಕೊನೆಗೆ ಮಗನ ಜೊತೆ ಮಾತನಾಡಿ ತಿಳಿಸಿದ್ದಾಯಿತು.

ಸುಬ್ಬುವಿನ ನೆನಪಲ್ಲೇ ದಿನ ಕಳೆಯಿತು. ರಾತ್ರೆ ಸುಮಾರು ಹತ್ತು ಗಂಟೆಯ ಹೊತ್ತಿಗೆ ಫೋನು ಬಂತು. 'ಇಷ್ಟು ಹೊತ್ತಿನಲ್ಲಿ ಯಾರಪ್ಪಾ' ಎಂದು ಸ್ವಲ್ಪ ಬೇಸರದಿಂದಲೇ ಮೊಬೈಲು ಫೋನನ್ನು ಕೈಗೆತ್ತಿಕೊಂಡ. ವಾಟ್ಸಪ್ ಕಾಲು. ಸುಬ್ಬುವಿನ ಮಗನ ಸಂಖ್ಯೆ. ಓಹೋ ಗೆಳೆಯ ಅಂತೂ ನನ್ನೊಂದಿಗೆ ಮಾತಾಡೋದಕ್ಕೆ ಮನಸ್ಸು ಮಾಡಿದಾನೆ ಎಂದು ಮನಸ್ಸು ಪ್ರಫುಲ್ಲಿತವಾಯಿತು. ಅದಕ್ಕೆ ಅವನ ನೆನಪು ಅಷ್ಟೊಂದು.

'ನಾನು ಸುಬ್ಬಣ್ಣಾ ಅವರ ಮಗ ಮಾತಾಡ್ತಾ ಇದೀನಿ....' ಅವನೇನೋ ಹೇಳುತ್ತಿದ್ದ ಆದರೆ ವೆಂಕಿಗೆ ತಾಳ್ಮೆ ಇಲ್ಲ. ಕೊಡು, ಕೊಡು ನಮ್ಮ ಸುಬ್ಬೂಗೆ '

'ಅಂಕಲ್ ನಮ್ಮ ತಂದೆ...' ಯಾಕೋ ತಲೆ ಸುತ್ತಿ ಬಂದಂತಾಯ್ತು. ಫೋನನ್ನು ಮಗನ ಕೈಗೆ ಕೊಟ್ಟು ಸೋಫಾದ ಮೇಲೆ ಕುಸಿದು ಕುಳಿತ. ಕೈ ಕಾಲುಗಳಲ್ಲಿ ಸಣ್ಣ ನಡುಕ.

'ಓಹೋ, ನಿಮ್ಮ ಸ್ನೇಹಿತರು ನಿಮ್ಮನ್ನು ನೆನಪು ಮಾಡಿಕೊಂಡಿದ್ದಾರೆ. ಮಾತಾಡಿ' ಸುಮತಿಯ ಮಾತುಗಳು ಕೇಳಲಿಲ್ಲ. ಮಗನಿಗೆ ಈಗಾಗಲೇ ಅವನ ಪರಿಚಯವಿದ್ದುದರಿಂದ ನಿಧಾನವಾಗಿ ಮಾತನಾಡಿದ. ಅಪ್ಪನ ಮುಖ ಬಿಳಚಿಕೊಂಡಿತ್ತು.

'ಅಪ್ಪಾ, ನಿಮ್ಮ ಸ್ನೇಹಿತರು ಸುಬ್ಬು. ಹೋಗಿಬಿಟ್ರಂತೆ, ಕಾರ್ಡಿಯಾಕ್ ಅರೆಸ್ಟ್. ಅವರ ಮಗ ಫೋನು ಮಾಡಿದ್ದ'

ಹಿಂದಿನ ದಿನದಿಂದಲೂ ಸುಬ್ಬು ಬಹಳವಾಗಿ ಕಾಡುತ್ತಿದ್ದ. ಯಾಕೋ ಅವರ ಮಗ ಮಾತನಾಡುತ್ತಿದ್ದೇನೆ ಎಂದಾಗ ಧೈರ್ಯವೇ ಬರಲಿಲ್ಲ. ವಾಟ್ಸಪ್ ಕಾಲಿನಲ್ಲಿ ನೀನು ಮಾತನಾಡಿದ ಎಷ್ಟೋ ಹೊತ್ತಿನ ನಂತರ ನಂಗೆ ಕೇಳುತ್ತಪ್ಪ. ನಾನು ಅಲ್ಲಿಗೆ ಬಂದಾಗಲೇ ಮಾತನಾಡುತ್ತೀನಿ' ಎಂದು ಫೋನ್ ಮಾಡಿರಲಿಲ್ಲ.

'ಸಾವಿರಾರು ಮೈಲಿ ದೂರದಿಂದ ಬರಬೇಕು ಅಲ್ವೇನಯ್ಯ'

'ಆದೇನೋಪ್ಪಾ, ಆದ್ರೂ ನಂಗೆ ನಿನ್ನ ಮುಖ ನೋಡಿಕೊಂಡು ಕೈಯ್ಯಲ್ಲಿ ಕಾಫಿ ಹಿಡಕೊಂಡು ಮಾತನಾಡಿದಾರೇನೇ ಸಮಾಧಾನ 'ಎನ್ನುತ್ತಿದ್ದ.

ಎಲ್ಲಿ ಕುಳಿತರೂ ಎಲ್ಲಿ ನಿಂತರೂ ಅವನದೇ ಯೋಚನೆ. ಮಗ ವಿದೇಶಕ್ಕೆ ಹೋಗಿ ಎರಡು ವರ್ಷಗಳ ನಂತರ ಮರಳಿ ಬಂದಾಗ ಸಾಮಾನ್ಯವಾಗಿ ಎಲ್ಲರೂ ಮಗನನ್ನು ನೋಡುವ ಆತುರ ಕಾತರ ಸಂತೋಷ ಸಂಭ್ರಮ ಇರುತ್ತದೆ. ಆದರೆ ಸುಬ್ಬೂ ಮಾತ್ರ ನಿರಾತಂಕವಾಗಿದ್ದ. ಇದ್ದಕ್ಕಿದ್ದಂತೆ ಸುಬ್ಬು, ಒಂದು ವಾರ ಬರಲಿಲ್ಲ. ಅವನಿಂದ ಫೋನೂ ಇಲ್ಲ. ತಡೆಯದೆ ವೆಂಕಿ ಮಗನಿಗೆ ಮಾಡಿದ.

'ಅಂಕಲ್ ನಾವಿಲ್ಲಿ ಚೆನ್ನೈಗೆ ಬಂದಿದೀವಿ. ವೀಸಾ ಮಾಡಿಸ್ತಾ ಇದೀನಿ ಅಪ್ಪನಿಗೆ'

'ಹೌದಾ. . . ಭಲೇ ಭಲೇ.. ತುಂಬಾ ಸಂತೋಷ ಕಣಪ್ಪಾ. ನಿಮ್ಮ ತಂದೆ ಜೀವನದಲ್ಲಿ ತುಂಬಾ ಕಷ್ಟ ಪಟ್ಟಿದಾರೆ. ಒಳ್ಳೇ ಕೆಲಸಾ ಮಾಡಿದೆ.'

ಬಂದವನೇ ಸುಬ್ಬು, 'ವೆಂಕಿ, ವಿದೇಶಕ್ಕೆ ಹೋಗುತ್ತಿದ್ದೇನೆ ಮಗ ತುಂಬಾ ಬಲವಂತ ಮಾಡ್ದ. ಆರು ತಿಂಗಳು ಇರಬೇಕು ಅಂತಾ ಟಿಕೀಟು ಮಾಡಿಬಿಟ್ಟಿದ್ದಾನಪ್ಪ'.

ಸುಮತಿಗೆ ಆಶ್ಚರ್ಯ. ತಮಗೆ ಈ ಭಾಗ್ಯವಿಲ್ಲವಲ್ಲ ಎಂದು ಒಂದು ಕಡೆ ದು:ಖ. ಆದರೆ ಮಗ ಮರಳಿ ಬಂದದ್ದೇ ಒಂದು ಪವಾಡ. ಸುಬ್ಬೂ ಮಗನೇ ವಿದೇಶಕ್ಕೆ ಹೋಗುತ್ತಿದ್ದಾನೆಂದರೆ ನಮ್ಮ ಮಗ ಹೋಗದೆ ಇದ್ದರೇ ಎಂಬುದು ಅವಳ ಯೋಚನೆ.

'ಅವನು ಮೆರಿಟ್‌ನಲ್ಲಿ ಬಂದವನು ಕಣೆ. ಓದುವಾಗಲೇ ಅವನಿಗೆ ಕೆಲಸ ಸಿಕ್ಕಿತ್ತು. ಕಂಪನಿ ಕಡೆಯಿಂದ ಖರ್ಚಿಲ್ಲದೆ ಹೋಗುತ್ತಿದ್ದಾನೆ' ಎಂದು ಹೆಂಡತಿಯನ್ನು ಸಮಾಧಾನ ಮಾಡಿದರೂ ಅವಳಿಗೆ ಅಷ್ಟು ಸುಲಭವಾಗಿ ಅರಗಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. 'ಸುಬ್ಬು, ಅಂತಹ ಮಗನನ್ನು ಪಡೆದಿರುವುದು ನಿನ್ನ ಅದೃಷ್ಟ ಕಣಯ್ಯ'ಎಂದರೆ, 'ಇಂಥ ಸೊಗಸಾದ ಕಾಫಿ ದಯಪಾಲಿಸುವ ಸ್ನೇಹಿತ ಸಿಕ್ಕಿದ್ದು ನನ್ನ ಅದೃಷ್ಟ ಕಣಯ್ಯ' ಎನ್ನುತ್ತಿದ್ದ.

ಬಾಲ್ಕನಿಯಲ್ಲಿ ಎರಡು ಕುರ್ಚಿ ಸದಾ ಹಾಕಿರುತ್ತಿತ್ತು. ಸುಬ್ಬು ಬಂದವನು ಸೀದಾ ಬಾಲ್ಕನಿಗೆ ಹೋಗಿ ಅಲ್ಲೇ ತನ್ನ ಸ್ನೇಹಿತನಿಗಾಗಿ ಕಾಯುತ್ತಿದ್ದ.   ಅವನ ನೆರಳು ಕಂಡಿತೆಂದರೆ ವೆಂಕಿಗೆ ಏನೋ ಸಂತೋಷ. 'ಸುಮತಿ ...ಕಾ..' ಎಂದರೆ ಸಾಕು 'ಗೊತ್ತಾಯ್ತು ಬಿಡಿ, ನಿಮಗೂ ಕೆಲಸ ಇಲ್ಲಾ ನಿಮ್ಮ ಸ್ನೇಹಿತರಿಗೂ ಕೆಲಸ ಇಲ್ಲ ಎಂದು ಬೈದುಕೊಂಡೇ ಕಾಫಿ ತರುತ್ತಿದ್ದಳು. ಒಂದು ಹದಿನೈದು ಇಪ್ಪತ್ತು ನಿಮಿಷಗಳ ಮಾತುಕತೆ ಅಷ್ಟೇ. ವೆಂಕಿ ಹೊರಟು ಬಿಡುತ್ತಿದ್ದ. ಮತ್ತೆ ಮಾರನೆಯ ದಿನ ಬೆಳಗ್ಗೆ. ಭಾನುವಾರವೂ ಹೆಚ್ಚು ಹೊತ್ತು ಕೂಡುತ್ತಿರಲಿಲ್ಲ. ನಿಂಗೆ ಸಿಗೋದೊಂದೇ ಭಾನುವಾರ. ಬರ್ತೀನಪ್ಪಾ ಎಂದು ಹೊರಟುಬಿಡುತ್ತಿದ್ದ.

'ಅಪ್ಪ ಸುಬ್ಬು ಅಂಕಲ್ ...'

'ಇನ್ನೆಲ್ಲಿ ಸುಬ್ಬು? ಎಲ್ಲಿಂದಲೋ ಬಂದ. ಇಷ್ಟು ದಿನ ವೆಂಕಿಯ ಸ್ನೇಹಿತನಾಗಿದ್ದ. ಈಗ ಇದ್ದಕ್ಕಿದ್ದಂತೆ ಮರೆಯಾದ. ಈ ಸ್ನೇಹವನ್ನು ಏನು ಹೇಳುವುದೋ ಗೊತ್ತಿಲ್ಲ. ರಕ್ತ ಸಂಬಂಧವಲ್ಲ, ಬಂಧುತ್ವ ಇಲ್ಲ ಆದರೂ ವಿಶ್ವಾಸದ ಎಳೆ ಅವರಿಬ್ಬರನ್ನೂ ಹೊಸೆದಿತ್ತು. ಅದೂ ಅಲ್ಪ ಕಾಲ.

ಬಾಲ್ಕನಿಯಲ್ಲಿ ಅವನು ಕುಳಿತುಕೊಳ್ಳುತ್ತಿದ್ದ ಕುರ್ಚಿ ಖಾಲಿ ಖಾಲಿ. ಅಲ್ಲಿ ಅವನ ನೆರಳು ಕಾಣುತ್ತಿತ್ತು. ಅವನ ಮುಗ್ಧ ನಗು ಸೊರ್ ಸೊರ್ ಕಾಫಿ ಹೀರುತ್ತಿದ್ದ ಶಬ್ದ ಕೇಳುತ್ತಿತ್ತು..

***

ಸಣ್ಣ ಕತೆ

ದೂರದ ಬೆಟ್ಟ ನುಣ್ಣಗೆ

– ಸುಜಾತಾ ರವೀಶ್

ಸಾವಿರ ಮನೆಗಳದ್ದ ಬಹು ಪ್ರತಿಷ್ಟಿತ ವಸತಿ ಸಮುಚ್ಚಯ ಮೈತ್ರಿ ಸದನ. ಸಮಯ ಬೆಳಗ್ಗೆ 7_30. ಅಲ್ಲಿನ ಮೂರನೆಯ ಕಾವೇರಿ ಬಿಲ್ಡಿಂಗ್‌ನ ಎಂಟನೇ ಅಂತಸ್ತಿನ ಲಿಫ್ಟ್ ಮುಂದೆ ನಿಂತಿದ್ದಾಳೆ ವನಿತಾ.

ಗಂಜಿ ಮಾಡಿದ ಗರಿಗರಿ ಕಾಟನ್ ಸೀರೆ, ಅದಕ್ಕೊಪ್ಪುವಂತಹ ಆಯೊಡೈಸ್ಡ್ ಸಿಲ್ವರ್‌ಸೆಟ್, ಕಿವಿಗೆ ಕತ್ತಿಗೆ ಮ್ಯಾಚಿಂಗ್ ಬಳೆ ಒಟ್ಟಿನಲ್ಲಿ ಟಿಪ್ ಟಾಪ್ ಆಗಿ ಅಲಂಕರಿಸಿಕೊಂಡು ಕೆಲಸಕ್ಕೆ ಹೊರಟ ಮೂವತ್ತಾರರ ಆಸುಪಾಸಿನವಳು. ಲಿಫ್ಟ್ ಇನ್ನೇನು ಬಂತು ಅನ್ನೋವಷ್ಟರಲ್ಲಿ ಅವಳನ್ನು ಕೂಡಿದವಳು ಜನನಿ. ಅದೇ ಅಂತಸ್ತಿನ ಅವಳದೇ ಹೆಚ್ಚುಕಡಿಮೆ ವಯಸ್ಸಿನ ಗೃಹಿಣಿ. ಸ್ನೇಹದ ನಗೆಬೀರಿ ಲಿಫ್ಟಿನೊಳಗೆ ಸೇರಿಕೊಂಡರು.

"ಇದೇನು ಇಷ್ಟು ಬೇಗ ಹೊರಟಿದ್ದೀರಿ ಕೆಲಸಕ್ಕೆ" ಜನನಿಯ ಪ್ರಶ್ನೆ.

"ಹೂಂ ಜನನಿ, ಇಂದು ಆಫೀಸಿನಲ್ಲಿ ಆಡಿಟಿಂಗ್ ಇದೆ. ಅದಕ್ಕೆ ಸ್ವಲ್ಪ ಬೇಗ ಹೊರಟೆ. ನೀವೇನು ಯಾವುದೋ ಸಮಾರಂಭಕ್ಕೆ ಹೊರಟಹಾಗಿದೆ" ವನಿತಾಳ ಮರುಪ್ರಶ್ನೆ.

"ಹೂನ್ರೀ ನಮ್ಮೆಜಮಾನರ ಚಿಕ್ಕಮ್ಮನ ಮಗಳ ಸೀಮಂತ ಇವತ್ತು ಮೈಸೂರಿನಲ್ಲಿ. ಅವರಿಗೆ ರಜೆ ಇಲ್ಲವಲ್ಲ ಅದಕ್ಕೆ ನಾನೇ ಹೊರಟೆ. ಸಂಜೆಗೆ ವಾಪಾಸ್ಸು"

"ಹೌದಾ" ಎಂದಂದು ಸುಮ್ಮನಾದಳು ವನಿತಾ. ಲಿಫ್ಟು ಬೇಸ್‌ಮೆಂಟಿಗೆ ತಲುಪಿತು. ಪತಿಯ ಕಾರಿನೆಡೆಗೆ ಹೊರಟವಳು, "ಬನ್ನಿ ಎಲ್ಲಾದರೂ ನಿಯರೆಸ್ಟ್ ಜಾಗಕ್ಕೆ ಡ್ರಾಪ್ ಮಾಡುತ್ತೇವೆ" ಎಂದಳು. "ಇಲ್ಲಪ್ಪ, ಓಲಾಗೆ ಬುಕ್ ಮಾಡಿದ್ದೇನೆ ಐದು ಮಿಷದಲ್ಲಿ ಬರುತ್ತೆ ಥ್ಯಾಂಕ್ಯೂ" ಎಂದಾಗ ಬೈ ಹೇಳಿ ಬೇರಾದರು.

ಓಲಾದಲ್ಲಿ ಕುಳಿತ ಮೇಲೆ ಜನನಿಯ ಮನ ವನಿತಳ ವಿಷಯವನ್ನೇ ಯೋಚಿಸುತ್ತಿತ್ತು.ಎಷ್ಟು ಪುಣ್ಯವಂತೆ. ಗಂಡನಿಗೆ ಪ್ರತಿಷ್ಠಿತ ಕಂಪನಿಯ ಕೆಲಸ. ಇವಳು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಉದ್ಯೋಗಿ. ಇಬ್ಬರಿಗೂ ಕೈ ತುಂಬಾ ಸಂಬಳ. ಬೆಳಗಾದರೆ ಝುಮ್ಮಂತ ಅಲಂಕರಿಸಿಕೊಂಡು ಹೊರಡುತ್ತಾಳೆ.

ಸಂಜೆ ಬಂದ ಮೇಲೂ ಅಷ್ಟೇ ಮನಸ್ಸಾದರೆ ಅಡುಗೆ. ಇಲ್ಲದಿದ್ದರೆ ಸ್ವಿಗ್ಗಿ, ಜಮಾಟ ಬುಕ್ ಮಾಡೋದು. ಮನೆಗೆ ನೆಂಟರು ಬಂದರು ಅಂದರೆ ಸರಿ ಕ್ಯಾಟರಿಂಗಿಗೆ ಆರ್ಡರು. ಕೈಯಲ್ಲಿ ದುಡ್ಡಿದ್ದರೆ ಎಷ್ಟು ಚೆಂದ. ಬೇಕಾದವರಿಗೆ ಗಿಫ್ಟ್ ಕೊಡಲು ಆಗುತ್ತೆ ಪ್ರತಿಯೊಂದಕ್ಕೂ ನನ್ನ ಹಾಗೆ ಪತಿಯ ಮುಂದೆ ಕೈಚಾಚುವ ಅಥವಾ ಮಾಡಿದ ಖರ್ಚಿಗೆ ಲೆಕ್ಕ ಹೇಳುವ ಪ್ರಶ್ನೆಯೇ ಇಲ್ಲ. ವರ್ಷ ಎರಡು ವರ್ಷಕ್ಕೊಮ್ಮೆ ಹೊರಗೆ ಸುತ್ತಾಡಲು ಹೋಗುತ್ತಲೇ ಇರುತ್ತಾರೆ. ಬಟ್ಟೆಬರೆ ಒಡವೆಗಳೂ ಅಷ್ಟೆ, ಧಾರಾಳವಾಗಿ ತೆಗೆದುಕೊಳ್ಳುತ್ತಾಳೆ. "ಎಣಿಸಿ ಹಾಕಿದ ಕಜ್ಜಾಯ" ಎಂಬಂತಹ ನಮ್ಮ ತರಹದ ಬದುಕಲ್ಲ. ಈ ಫ್ಲ್ಯಾಟ್ ತೆಗೆದುಕೊಂಡ ಮೇಲಂತೂ ಉಸಿರು ಕಟ್ಟುವಷ್ಟು ಆರ್ಥಿಕ ಬಿಕ್ಕಟ್ಟು. ಮನೆಯಲ್ಲೇ ಇರುವ ಸೊಸೆ ಎಂದು ಆಗಾಗ ಬಂದು ಬೀಡುಬಿಡುವ ಅತ್ತೆ ಮಾವ ಬೆಂಗಳೂರಿನಲ್ಲಿ ಏನೇ ಕೆಲಸವಿದ್ದರೂ ತಮ್ಮ ಮನೆಯಲ್ಲೇ ಝಂಡಾ ಊರುವ ಬಂಧು ಬಳಗ ಸುಧಾರಿಸಲೇ ಸಾಕಾಗಿ ಹೋಗಿಬಿಡುತ್ತದೆ . ಇನ್ನೂ ವಾರಾಂತ್ಯ ಅಂದರೆ ನನಗೆ ಸುಸ್ತು ಎಂದು ಪೂರ ದಿನ ಮಲಗಿಯೇ ರೆಸ್ಟ್ ತೆಗೆದುಕೊಳ್ಳುವ ಪತಿ. ವಾರವೆಲ್ಲ ಮನೆಯಲ್ಲೇ ಇರುತ್ತಾಳೆ, ಅವಳಿಗೂ ಚೇಂಜ್ ಬೇಕು ಅಂತ ಯಾರಿಗೂ ಅನಿಸಲ್ಲ. ಡಿಗ್ನಿಫೈಡ್ ಲೇಬರ್‌ನ ಪಟ್ಟ ಅಷ್ಟೆ. ಹೋಮ್

ಮೇಕರ್ ಅಂತ ಇರೋದು ಬೇರೆ. ನಾನೂ ಅಷ್ಟೆ ಹಟಹಿಡಿದು ಯಾವುದಾದರೂ ಕೆಲಸಕ್ಕೆ ಸೇರಿಬಿಡಬೇಕಿತ್ತು ಮದುವೆಯಾದ ಹೊಸದರಲ್ಲೇ. ಆಗ ಅದೇ ರೂಢಿಯಾಗಿರುತ್ತಿತ್ತು. ಏನೋ ಸ್ವಲ್ಪ ಈ ಫ್ಲ್ಯಾಟ್‌ಗೆ ಬಂದಮೇಲೆ ಮಹಿಳಾ ಸಂಘ, ದೇವರನಾಮ ಅಂತ ಚೂರು ಮನಸ್ಸು ಬೇರೆಕಡೆ ಹರಿಯಲು ಸಾಧ್ಯವಾಗಿವೆ ಇಲ್ಲದಿದ್ದರೆ ನಾಲ್ಕು ಗೋಡೆಗಳೊಳಗಿನ ಬಂಧಿಯಾಗಿ ಉಳಿದುಬಿಡುತ್ತಿದ್ದೆ ನಾನು. ಈದಿನ ಊರಿನಲ್ಲಿದ್ದ ತನ್ನ ತಂದೆ ತಾಯಿ ಹೋಗಲು ಸಾಧ್ಯವಿಲ್ಲ, ಕುಟುಂಬದ ಪ್ರತಿನಿಧಿಯಾಗಿ ನಾನು ಹೋಗಲೇಬೇಕು ಅಂತ ನನ್ನ ಬಲವಂತವಾಗಿ ಹೊರಡಿಸಿದರು. ಇವತ್ತು ನಮ್ಮ ಕಿಟ್ಟಿ ಪಾರ್ಟಿಯ ಮೀಟಿಂಗ್ ಇತ್ತು . ಅದು ಮಿಸ್ಸಾಯಿತು . ಅಲ್ಲದೆ ನಮ್ಮ ಕಡೆಯ ಯಾವುದಾದರೂ ಸಮಾರಂಭಕ್ಕೆ ಹೋಗುತ್ತೇನೆ ಎಂದರೆ ಅದೇನು ಅಂತಹ ಅವಶ್ಯಕವಾ, ಬೇಡ ಬಿಡು ಎಂದು ಸುಮ್ಮನಾಗಿಬಿಡುತ್ತಾರೆ. ಎಲ್ಲದಕ್ಕೂ ಪಡೆದುಕೊಂಡು ಬರಬೇಕು ಎಂದು ನಿಟ್ಟುಸಿರಿಟ್ಟಳು . ಅಷ್ಟರಲ್ಲಿ ಸೆಟಲೈಟ್ ಬಸ್‌ಸ್ಟ್ಯಾಂಡ್ ಬಂತು. ಹಣ ಪಾವತಿಸಿ ಮೈಸೂರಿನ ಬಸ್ ಹತ್ತಲು ಹೊರಟಳು ಜನನಿ.

ಕಾರು ಹತ್ತಿ ಗಂಡನ ಪಕ್ಕ ಮುಂದಿನ ಸೀಟಿನಲ್ಲಿ ಕುಳಿತ ವನಿತಾಳ ಮನವೂ ಜನನಿಯ ವಿಷಯವಾಗಿಯೇ ಯೋಚಿಸ ತೊಡಗಿತು. ಎಂತಹ ಆರಾಮದ ಬದುಕು. ಎಷ್ಟು ಸಣ್ಣಸಣ್ಣ ಸಮಾರಂಭಗಳಿಗೂ ಹೀಗೆ ಅಲಂಕರಿಸಿಕೊಂಡು ನಿರಾಳ ವಾಗಿ ಹೋಗಿಬರುತ್ತಾಳೆ. ನನಗಂತೂ ಪ್ರತಿಯೊಬ್ಬರಿಂದಲೂ ಬೈಗುಳ. ಯಾವುದಕ್ಕೂ ಬರುವುದಿಲ್ಲ ದೊಡ್ಡಸ್ಥಿಕೆ ಅಂತ. ಇಲ್ಲಿ ನನಗೆ ರಜದ ಸಮಸ್ಯೆ ಯಾರಿಗೆ ಹೇಳಿಕೊಳ್ಳುವುದು? ಚಿಕ್ಕಪುಟ್ಟದ್ದಕ್ಕೆಲ್ಲ ರಜಾ ಕೊಡುವುದಿಲ್ಲ. ಕೊಟ್ಟರೂ ಹಾಕಲು ಮನಸ್ಸಿರುವುದಿಲ್ಲ ಮುಂದೆ ಏನಾದರೂ ಬೇಕಾದರೆ ಎಂಬ ಭಯದಲ್ಲಿ ಇರುವುದೇ ಆಗತ್ತೆ. ಬೆಳಗ್ಗೆ ಅಷ್ಟು ಬೇಗ ಏನೋ 1ಬೇಯಿಸಿ ಎಷ್ಟೋ ಬಾರಿ ಬೆಳಗಿನ ತಿಂಡಿಯನ್ನು ತಿನ್ನಲು ಆಗಿರುವುದಿಲ್ಲ. ಅಂತಹ ಆತುರದಲ್ಲಿ ಓಡುವುದು. ಕೆಲವೊಮ್ಮ ಬರುವಷ್ಟರಲ್ಲಿ ಎಂತಹ ಸುಸ್ತಾಗಿರುತ್ತದೆ ಎಂದರೆ ಯಾವುದೋ ಒಂದು ತರಿಸಿ ತಿಂದು ಹಾಸಿಗೆ ಕಾಣೋಣ ಎಂದೆನಿಸಿಬಿಟ್ಟಿರುತ್ತದೆ. ರುಚಿಯಾಗಿ ಮಾಡಿಕೊಂಡು ತಿನ್ನಲೂ ಯೋಗ ಇರಬೇಕು. ಇಬ್ಬರ ಸಂಪಾದನೆ ಎಂದು ಕಾರು, ಫ್ಲ್ಯಾಟು ಎಲ್ಲದಕ್ಕೂ ಸಾಲ ಮಾಡಿ ಕೈ ಕಟ್ಟುವಷ್ಟು ಆರ್ಥಿಕ ಬಿಕ್ಕಟ್ಟು. ಕೆಲಸ ಮಾಡದಿದ್ದರೆ ವಿಧಿಯೇ ಇಲ್ಲ ಎನ್ನುವಂತೆ ಕುತ್ತಿಗೆ ಹಿಡಿದ ಹಾಗಾಗಿದೆ. ನನಗೆ 1ತಲೆನೋವು, ನೆಗಡಿ ಅಂದರೂ ಏನೋ ಗುಳಿಗೆ ನುಂಗಿ ಆಫೀಸಿಗೆ ಓಡುವಂತಹ ಸ್ಥಿತಿ. ನಿದ್ರೆ ಅನ್ನುವುದು ಸಹ ಲಗ್ಸುರಿಯಾಗಿದೆ. ಇನ್ನು ಹವ್ಯಾಸಗಳ ಮಾತೆಲ್ಲಿ? ಅದೇ ಆರಾಮ. ಗೃಹಿಣಿಯಾಗಿದ್ದರೆ ಮನೆಯವರನ್ನೆಲ್ಲಾ ಕಳಿಸಿದ ಮೇಲೆ ನಮ್ಮ ಹವ್ಯಾಸಗಳಿಗೂ ಸಮಯ ಸಿಕ್ಕುತ್ತಿತ್ತು ಕಣ್ತುಂಬಾ ನಿದ್ರಿಸಲೂಬಹುದು. ಈಗ ಮನೆಗೆ ಯಾರಾದರೂ ಬರುತ್ತಾರೆ ಎಂದರೆ ಬೆಚ್ಚುವಂತೆ ಆಗುತ್ತದೆ . ಮಾಡಲು ಸಾಧ್ಯವಿಲ್ಲದಿದ್ದಾಗ ಆ ಕ್ಯಾಟರಿಂಗ್‌ಗಳಿಗೆ ಒಂದಕ್ಕೆರಡು ತೆತ್ತುವುದು, ರುಚಿಯೂ ಇರುವುದಿಲ್ಲ ಮತ್ತೆ ಮಾಡಲಿಲ್ಲ ಎಂಬ ಕೆಟ್ಟ ಹೆಸರು ಹೊತ್ತುಕೊಳ್ಳುವುದು. ದೆವ್ವದ ತರಹ ವಾರವೆಲ್ಲಾ ದುಡಿದು ಕುಂಭಕರ್ಣನ ತರಹ ಶನಿವಾರ ಭಾನುವಾರ ಮಲಗುವುದು. ಅದು ಯಾವುದೇ ಸಮಾರಂಭ ಅಥವಾ ಮನೆಗೆ ನೆಂಟರು ಇಲ್ಲದಿದ್ದರೆ ಒಂದಷ್ಟು ರೆಸ್ಟ್. ಯಾರಾದರೂ ಬಂದರೆ ಅದಕ್ಕೂ ಖೋತಾ. ಅಲ್ಲದೆ ವಾರದ ಬಾಕಿ ಉಳಿದ ಕೆಲಸಗಳನ್ನು ಮಾಡುವವರು ಯಾರು? ಪ್ರವಾಸಕ್ಕೆ ಸೌಲಭ್ಯವಿದೆ ಎಂದು ಎಲ್ಲಾದರೂ ಹೋಗಿ ತಿರುಗಾಡುವುದು. ಆದರೆ ಕೆಲವೊಮ್ಮೆ ಅದು ಬೇಡವೆಂದು ಅನ್ನಿಸಿಬಿಡುತ್ತದೆ ವಾಪಸ್ ಬಂದ ಮೇಲೆ ಮನೆಯ ಸವರಣಿಕೆ, ಆಫೀಸಿನ ಪೆಂಡಿಂಗ್ ಕೆಲಸಗಳು ಅದರ ಬದಲು ಮನೆಯಲ್ಲೇ ನೆಮ್ಮದಿಯಾಗಿ ಇದ್ದಿದ್ದರೆ ಆಗುತ್ತಿತ್ತು ಅನ್ನಿಸಿಬಿಡುತ್ತದೆ. ಆನೆಯ ಕಷ್ಟ ಆನೆಗೆ, ಇರುವೆ ಭಾರ ಇರುವೆಗೆ ಎಂಬಂತೆ ಸಂಪಾದನೆಗೆ ತಕ್ಕಂತೆ ಕಮಿಟ್‌ಮೆಂಟ್‌ಗಳನ್ನು ಮಾಡಿಕೊಂಡು ಆರ್ಥಿಕವಾಗಿಯೂ ಏನೂ ಧಾರಾಳತನ ತೋರಿಸುವಂತೆಯೂ ಇಲ್ಲ. ನಮ್ಮ ಇಷ್ಟದ ಹಾಗೆ ಖರ್ಚು ಮಾಡುವ ಸ್ವಾತಂತ್ರ್ಯವೂ ಇಲ್ಲ. ಸಾಕಾಗಿ ಹೋಗಿದೆ ಒಳಗೆ ಹೊರಗೆ ಎರಡೂ ಕಡೆ ದುಡಿಯುವ ಮನಸ್ಸಿಗೂ ದೇಹಕ್ಕೂ ಸುಸ್ತು ಕೊಡುವ ಈ ಉದ್ಯೋಗಿ ಎಂಬ ಪಟ್ಟ.

"ಏನು ಕನಸು ಕಾಣ್ತಾ ಇದೀಯ, ಬಂತು ನಿಮ್ಮ ಆಫೀಸು ಇಳಿ" ಎಂಬ ಮಾತಿಗೆ ಕಣ್ಣುಬಿಟ್ಟು ಬೈ ಹೇಳಿ ಇಳಿದು ಹೋದಳು ವನಿತಾ, ತನ್ನ ಮತ್ತೊಂದು ದಿನದ ಕರ್ಮ ಸವೆಸಲು. ***

ಪುಸ್ತಕ ಪರಿಚಯ

'ಹ್ಯಾಂಡ್‌ಬುಕ್ ಆಫ್ ಟ್ರಜರಿ ಮ್ಯಾನೇಜ್‌ಮೆಂಟ್'

(Handbook of Treasury Management)

ಲೇಖಕರು ; ಡಾ ಜಗನ್ನಾಥ

ಪರಿಚಯ: ಬೆಂ.ಶ್ರೀ.ರವೀಂದ್ರ



ಈ ದಿನ, ಇಂಗ್ಲೀಷ್‌ನಲ್ಲಿ ಡಾ. ಜೆಎನ್ ಜಗನ್ನಾಥ ರಚಿಸಿರುವ 'ಹ್ಯಾಂಡ್‌ಬುಕ್ ಆಫ್ ಟ್ರೆಜರಿ ಮ್ಯಾನೇಜ್ ಮೆಂಟ್' ಎಂಬ ಪುಸ್ತಕವನ್ನು ಪರಿಚಯಿಸುತ್ತಿರುವೆ. ಇಂಗ್ಲೀಷ್ ಪುಸ್ತಕವನ್ನು ಇಲ್ಲಿ ಪ್ರಸ್ತಾಪಿಸುತ್ತಿರುವ ಕಾರಣವೆಂದರೆ, ಒಂದು, ಬ್ಯಾಂಕಿಂಗ್‌ಗೆ ಸಂಬಂಧ ಪಟ್ಟಂತಹ ಪುಸ್ತಕ. ಎರಡು, ನಮ್ಮ ವೇದಿಕೆಯ ಜಗನ್ನಾಥ್ ಅವರು ಬರೆದಿದ್ದಾರೆ. ಮೂರನೆಯದು, ಲೇಖಕರು ಕನ್ನಡದಲ್ಲಿ ಬ್ಯಾಂಕಿಂಗ್ ಬರಹದ ಬಗ್ಗೆ ಹೊಸ ಆಶೆಯನ್ನು ಹುಟ್ಟಿಸಿದ್ದಾರೆ ಎಂಬುದು. ನಮ್ಮ ಬದುಕಿಗೆ ಬಹಳ ಅಗತ್ಯವಾದ ಬ್ಯಾಂಕಿಂಗ್‌ನ ವೈಶಿಷ್ಟ್ಯವಾದ ವಿಷಯದ ಬಗೆಗಿನ ಸೃಜನಶೀಲ ಕೃತಿಯಿದು.

ಬಹುಶ್ರುತರಾದ ಲೇಖಕರು, ಎಂಕಾಂ, ಎಂಬಿಎ, ಎಂಎ, ಸಿಎಐಐಬಿ, ಖಜಾನೆ ವ್ಯವಸ್ಥಾಪನದಲ್ಲಿ ಡಿಪ್ಲೋಮೋ, ಮಾನವ ಸಂಪನ್ಮೂಲ ವ್ಯವಸ್ಥಾಪನದಲ್ಲಿ ಡಿಪ್ಲೋಮೋ ಹಾಗೂ ಫ್ಲಾರಿಡಾ ವಿಶ್ವವಿದ್ಯಾನಿಲಯದಿಂದ ಖಜಾನೆ ವ್ಯವಸ್ಥಾಪನ ವಿಷಯದಲ್ಲಿ ಡಾಕ್ಟರೇಟ್ ಪದವಿಗಳನ್ನು ಪಡೆದಿದ್ದಾರೆ. 25 ವರ್ಷ ಕಾಲ ಬ್ಯಾಂಕಿನ ಸೇವೆ, ಆರು ವರ್ಷ ಖಜಾನೆ ವ್ಯವಸ್ಥಾಪನದ ವಹಿವಾಟು ಜವಾಬ್ದಾರಿ. ನಂತರ ಇನ್ಫೋಸಿಸ್‌ನಲ್ಲಿ 14 ವರ್ಷ ಸೇವೆ, 50ಕ್ಕೂ ಹೆಚ್ಚು ದೇಶಗಳಿಗೆ ಭೇಟಿಕೊಟ್ಟು ಜ್ಞಾನ ದಾಸೋಹ ಮಾಡಿದ ತರಬೇತಿ ಮುಖ್ಯಸ್ಥರು.

ಬ್ಯಾಂಕು ಎಂದರೆ ಹಣದ ಠೇವಣಿಯನ್ನು ತೆಗೆದುಕೊಳ್ಳುವುದು ಮತ್ತು ಸಾಲ ನೀಡುವುದೆಂದು ಸಾಮಾನ್ಯರು ಭಾವಿಸುತ್ತಾರೆ. ಆದರೆ ಬ್ಯಾಂಕು ತನ್ನ ಲಾಭಾಂಶವನ್ನು ವಿಸ್ತರಿಸಿಕೊಳ್ಳಲು ಇತರ ಚಟುವಟಿಕೆಗಳಲ್ಲಿಯೂ ತೊಡಗಿ ಕೊಳ್ಳುತ್ತದೆ. ಅದರಲ್ಲಿ ಪ್ರಮುಖವಾದುದೆಂದರೆ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿನ ವಹಿವಾಟು.

"ಖಜಾನೆ ವ್ಯವಸ್ಥಾಪನ" ಎಂದರೆ ಬ್ಯಾಂಕಿನ ಸಂಪನ್ಮೂಲಗಳನ್ನು/ನಿಧಿಗಳನ್ನು ಅಂತಾರಾಷ್ಟ್ರೀಯ/ದೇಶೀಯ ಮಾರುಕಟ್ಟೆಯಲ್ಲಿ ಊಹಾತ್ಮಕ ವ್ಯವಹಾರದಲ್ಲಿ ತೊಡಗಿಸಿ ಆದಾಯವನ್ನು ಹೆಚ್ಚಿಸಿಕೊಳ್ಳುವುದು. ನಿಧಿ ಮತ್ತು ದ್ರವತ್ವವನ್ನು ಭದ್ರವಾಗಿ ಇಟ್ಟುಕೊಂಡು ಮಿಂಚಿ ಮಾಯವಾಗುವ ಅವಕಾಶಗಳನ್ನು ಉಪಯೋಗಿಸಿಕೊಂಡು

ಲಾಭಾಂಶವನ್ನು ಹೆಚ್ಚಿಸುವುದು. ವಿಶ್ವ ಹಣಕಾಸು ಮಾರುಕಟ್ಟೆಯ ಅತ್ಯುತ್ತಮ ಕಾನೂನುಬದ್ಧ ಅಭ್ಯಾಸಗಳ ಮೂಲಕ ವಿದೇಶಿ ವಿನಿಮಯ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಹೊಂದಿಸಿಕೊಂಡು ಲಾಭಗಳಿಸುವುದು.

ಇದೊಂದು ರೀತಿಯ ಚಾಟಿಯಿಲ್ಲದೆ ಬುಗುರಿ ಆಡಿಸುವ, ಚೆಂಡಿಲ್ಲದೆ ಎಸೆಯುವ, ದಾಂಡಿಲ್ಲದೆ ಬೀಸುವ, ತನ್ಮೂಲಕ 4–6 ಗಳಿಸಿ ಶತಕ ಬಾರಿಸುವ ಆಟ. ಎಡವಟ್ಟಾದರೆ ಕಾಣದ ವಿಕೆಟ್ಟು ಹಾರಿ ಹೋಗುವುದು. ಬ್ಯಾಟರ್ ಗಾಯಗೊಳ್ಳುವನು ಅಥವಾ ತನ್ನ ವಿಕೆಟ್ಟನ್ನು ಒಪ್ಪಿಸಿ ಹೊರನಡೆಯುವನು. ಈ ರೀತಿಯ ವಿಚಿತ್ರವಾದ ಸೂಕ್ಷ್ಮವಾದ ಹಣಕಾಸಿನಾಟ.

ಖಜಾನೆ ವ್ಯವಸ್ಥಾಪನವು ವಿಶಾಲವಾದ ಸವಾಲನ್ನು ಒಡ್ಡುವ ಸಂಕೀರ್ಣ ಶಾಸ್ತ್ರ. ಇದರ ಬಗ್ಗೆ ಬೃಹತ್ ಗ್ರಂಥಗಳು ಪ್ರಕಟವಾಗಿವೆ. ಜಗನ್ನಾಥರರದು ಸರ್ವೋಪಯೋಗಿಯಾದ ಕೈಪಿಡಿ. ಆಗತಾನೆ ಖಜಾನೆ ವ್ಯವಸ್ಥಾಪನ ಕ್ಷೇತ್ರಕ್ಕೆ ಕಾಲಿರಿಸಿರುವವರಿಗೆ ಯಾವ ರೀತಿ ಕೆಲಸವನ್ನು ನಿಭಾಯಿಸಬೇಕು ಎಂಬುದನ್ನು ವಾಸ್ತವ ನೆಲೆಯಲ್ಲಿ ಹೇಳಿಕೊಡುತ್ತದೆ, ಕೈಯನ್ನು ಹಿಡಿದು ನಡೆಸುವ ತಾಯಿಯಂತೆ. ಮತ್ತೊಂದೆಡೆಯಲ್ಲಿ ಪಳಗಿದ ಆಟಗಾರರಿಗೂ ದಾರಿಯನ್ನು ತೋರುವ ತರಬೇತುದಾರನಂತೆ. ಇಷ್ಟು ವಿಸ್ತೃತವಾದ/ಸಂಕೀರ್ಣವಾದ ವಿಷಯವನ್ನು 103 ಪುಟಗಳ ಪುಟ್ಟ ಪುಸ್ತಕದಲ್ಲಿ 8 ಅಧ್ಯಾಯಗಳಲ್ಲಿ ಸಮಗ್ರವಾಗಿ ಲೇಖಕರು ಹಿಡಿದಿಟ್ಟಿದ್ದಾರೆ. ಇದು ಸಾಹಸವೇ ಸರಿ. ಉಂಗುರದೊಳಗೆ ಆನೆಯನ್ನು ತೂರಿಸಿದಂತೆ. ಆನೆಗೆ ನೋವು ಆಗಿಲ್ಲ. ಉಂಗುರ ಮುರಿದಿಲ್ಲ. ಇದುವೇ ಲೇಖಕರ ಜಾದೂ.

ಎಂಟು ಅಧ್ಯಾಯಗಳು – ಖಜಾನೆ ವ್ಯವಸ್ಥಾಪನ, ವ್ಯುತ್ಪನ್ನಗಳು, ತಾಂತ್ರಿಕ ವಿಶ್ಲೇಷಣೆ, ವಿದೇಶಿ ವಿನಿಮಯ, ವಹಿವಾಟು ವಿಭಾಗದಲ್ಲಿ ವಿದೇಶಿ ವಿನಿಮಯ ಕಾರ್ಯಾಚರಣೆಗಳು, ಸ್ವದೇಶಿ ಮಾರುಕಟ್ಟೆ, ಸಾರಾಂಶ ಹಾಗೂ ಸಂಕ್ಷಿಪ್ತ ಪದಗಳನ್ನು ಒಳಗೊಂಡಿದೆ.

ಮೊದಲ ಅಧ್ಯಾಯದಲ್ಲಿ, ಖಜಾನೆಯ ಅಗತ್ಯ, ಅರ್ಥ, ವಿಸ್ತಾರ, ನಿಧಿಯ ವ್ಯವಸ್ಥಾಪನೆ, ಬಂಡವಾಳ ಪರ್ಯಾಪ್ತತೆ, ನಷ್ಟ ಸಂಭಾವ್ಯತೆಯ ವ್ಯವಸ್ಥಾಪನೆ ಮೊದಲಾದುವುಗಳನ್ನು ವಿವರಿಸಿ ಬ್ಯಾಂಕಿನೊಳಗಣ ಆಡಳಿತ ವ್ಯವಸ್ಥೆಯ ಬಗ್ಗೆ ತಿಳಿಸಿದ್ದಾರೆ. ಕ್ಲಿಷ್ಟವಾದ ಹಲವಾರು ಪರಿಕಲ್ಪನೆಗಳನ್ನು ಸರಳವಾಗಿ ಬಿಡಿಸಿದ್ದಾರೆ. ಖಜಾನೆ ಪ್ರಕ್ರಿಯೆಯು ಬಹಳ ಉದಾರವೂ ಅಲ್ಲದ, ಬಹಳ ಬಿಗಿಯೂ ಅಲ್ಲದ ಕ್ರಿಯೆ. ನಷ್ಟ ಸಂಭಾವ್ಯತೆಯನ್ನು ಗುರುತಿಸುವುದು, ಊಹಿಸುವುದು ಮತ್ತು ನಷ್ಟಸಂಭವಕ್ಕೆ ಒಡ್ಡಿಕೊಳ್ಳುವುದನ್ನು ಮಿತಿಗೊಳಿಸುವುದು ಮುಖ್ಯವಾದೆಂದು ಗುರುತಿಸುತ್ತಾರೆ. ಒಬ್ಬ ವಹಿವಾಟುದಾರರು ಸರಿಯಾದ ತೀರ್ಮಾನಗಳನ್ನು ತೆಗೆದುಕೊಳ್ಳದಿದ್ದರೆ ಅಪಾರವಾದ ನಷ್ಟ ಸಂಭವಿಸಬಹುದೆಂಬ ಅರಿವನ್ನು ಮೂಡಿಸುತ್ತಾರೆ.

ಎರಡನೆಯ ಅಧ್ಯಾಯದಲ್ಲಿ, ವ್ಯುತ್ಪನ್ನಗಳ ಬಗ್ಗೆ ವಿವರವಾಗಿ ಬರೆಯುತ್ತಾರೆ. ಖುಷಿಕೊಡುವ ಸಂಗತಿಯೆಂದರೆ ಸಂಕೀರ್ಣವಾದ ಖಜಾನೆ ಚಟುವಟಿಕೆಯನ್ನು ಸುರಳೀತವಾದ ಆಕರ್ಷಕ ಉದಾಹರಣೆಗಳ ಮೂಲಕ ವಿವರಿಸುವ ಚಾಕಚಕ್ಯತೆ. ಬ್ಯಾಂಕಿಂಗ್‌ನಲ್ಲಿ ಖಜಾನೆ ವ್ಯವಸ್ಥಾಪನದ ಬಗ್ಗೆ ಅರಿವು ಇರದವರಿಗೂ ಕೂಡ ಅರ್ಥವಾಗುವ ಮೋಡಿ.

ಮೂರನೆಯ ಅಧ್ಯಾಯವು ಮಾರುಕಟ್ಟೆ ವಿಶ್ಲೇಷಣೆಯ ಬಗ್ಗೆ. ಯಾವರೀತಿ ವೇಗವಾಗಿ ನಡೆಯುವ ಮಾರುಕಟ್ಟೆಯನ್ನು ವಿಶ್ಲೇಷಿಸಬೇಕು ಎಂದು ಸೂಚ್ಯವಾಗಿ ತಿಳಿಸಿಕೊಟ್ಟಿದ್ದಾರೆ. ಹೆಚ್ಚಿನ ಓದಿಗೆ ಈ ಕೈಪಿಡಿ ದಾರಿದೀಪದಂತೆ.

ನಾಲ್ಕನೆಯದು, ವಿದೇಶಿ ವಿನಿಮಯ ಮಾರುಕಟ್ಟೆಗೆ ಮೀಸಲಾಗಿದೆ. ವಿದೇಶಿ ಹಣ ಕೊಂಡುಕೊಳ್ಳುವುದು ಮಾರುವುದು, ಅತ್ಯುತ್ತಮವಾದ ಬೆಲೆಯನ್ನು ಪಡೆಯುವುದು ಹೇಗೆ, ಯಾವ ರೀತಿ ಪಡೆಯುವುದು, ಹರಾಜಿನಲ್ಲಿ ಭಾಗವಹಿಸುವುದು ಹೇಗೆ ಎಂಬುದರ ಬಗ್ಗೆ ವಿವರಣೆ.

ಐದನೆಯ ಅಧ್ಯಾಯವು, ವಿದೇಶಿ ವಿನಿಮಯ ನಡೆಸುವ ಕೋಣೆಯೊಳಗಿನ ಕಾರ್ಯಾಚರಣೆಗಳ ಬಗ್ಗೆ ಸುಲಲಿತವಾಗಿ ತಿಳಿಸಿಕೊಡುತ್ತದೆ. ಜಗನ್ನಾಥ್ ಹೇಳುತ್ತಾರೆ, ಒಬ್ಬ ಒಳ್ಳೆಯ ವಹಿವಾಟುದಾರ ಬದಲಾಗುತ್ತಿರುವ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಈತನಿಗೆ ಒತ್ತಡದ ನಡುವೆ ಕೆಲಸ ಮಾಡುವ ಸಾಮರ್ಥ್ಯ, ಹೊಸ ಜವಾಬ್ದಾರಿಗಳನ್ನು ಒಪ್ಪಿಕೊಳ್ಳುವ ಮನೋಭೂಮಿಕೆ, ಶೀಘ್ರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಶಕ್ತಿ, ಒಂದು ರೀತಿಯ ಧಾಡಸೀತನ ಜೊತೆಗೆ ಮುಖ್ಯವಾಗಿ ಒಬ್ಬ ವ್ಯಕ್ತಿ ತಪ್ಪು ಮಾಡಲು ಸಾಧ್ಯ ಎಂಬುದನ್ನು ಗುರುತಿಸುವ ಸೂಕ್ಷ್ಮತೆ ಇರಬೇಕು, ವಹಿವಾಟು ಕೋಣೆಯಲ್ಲಿ ಸಂಪೂರ್ಣ ವಿಶ್ವಾಸದ ವಾತಾವರಣವಿರಬೇಕು, ವಹಿವಾಟುದಾರ ಅದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಬೇಕು ಎಂದು.

ಆರನೆಯ ಅಧ್ಯಾಯವು, ಅಂತರ್ದೇಶಿಯ ಮಾರುಕಟ್ಟೆಗೆ ಮೀಸಲು. ಇಲ್ಲಿರುವ ಹಲವಾರು ಪರಿಕಲ್ಪನೆಗಳನ್ನು ಬಹಳ ಚೆನ್ನಾಗಿ ಬಿಡಿಸಿಟ್ಟಿದ್ದಾರೆ. ಖಜಾನೆ ವ್ಯವಹಾರದ ತಂತ್ರಗಳು, ಗಳಿಸಿಕೊಳ್ಳಬೇಕಾದ ಸಾಮರ್ಥ್ಯ ಎಲ್ಲವನ್ನು ಕೈಪಿಡಿಯಲ್ಲಿ ಲೇಖಕರು ಗುರುತಿಸಿದ್ದಾರೆ.

ಅಕ್ಟೋಬರ್ ನಾಲ್ಕರಂದು ಅಂತರ್ಜಾಲದ ಮೂಲಕ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ, ಸಮನ್ವಯ ಸಮಿತಿ ಕನ್ನಡವೇ ಸತ್ಯ ಗುಂಪಿನ ಪರವಾಗಿ ಮಾತನಾಡುವ ಗೌರವವನ್ನು ಜಗನ್ನಾಥ್ ನನಗೆ ನೀಡಿದ್ದರು. ನಾನು ಅಭಾರಿ.

’ಇಂತಹ ಪುಸ್ತಕಗಳನ್ನು ಕನ್ನಡದಲ್ಲಿ ಬರೆಯಿರಿ" ಎಂದು ಕೋರಿದಾಗ, ಜಗನ್ನಾಥ್ ಈ ರೀತಿ ಸ್ಪಂದಿಸಿದ್ದಾರೆ: "ತಾವು ತಿಳಿಸಿದಂತೆ ಈ ವಿಚಾರವನ್ನು ಕನ್ನಡದಲ್ಲಿ ಬರೆಯುವ ಪ್ರಯತ್ನ ಮಾಡುತ್ತೇನೆ".

ಪ್ರಾಚಾರ್ಯ ಎಚ್ಚೆಸ್ಕೆ ಮಾರ್ಗದರ್ಶನದಲ್ಲಿ ಸಮನ್ವಯ ಸಮಿತಿಯು ‘ಕನ್ನಡದಲ್ಲಿ ಬ್ಯಾಂಕಿಂಗ್, ಬ್ಯಾಂಕಿಂಗ್‌ನಲ್ಲಿ ಕನ್ನಡ’ ಎಂಬ ಘನ ಉದ್ದೇಶದಿಂದ, ‘ಬ್ಯಾಕಿಂಗ್ ಪ್ರಪಂಚ’ ತ್ರೈಮಾಸಿಕ ಪತ್ರಿಕೆ ಹಾಗೂ ಹಲವಾರು ಬ್ಯಾಂಕಿಂಗ್ ಕಮ್ಮಟಗಳನ್ನು 1980–90ರ ದಶಕದಲ್ಲಿ ನಡೆಸಿತು. ಎಚ್ಚೆಸ್ಕೆ ಅವರ ಮನೋಭಿಲಾಷೆಗೆ ಪೂರಕವಾಗಿ ಜಗನ್ನಾಥ ಅವರು ಸ್ಪಂದಿಸಿರುವುದು ಖುಷಿ ತಂದಿದೆ. ನಾನು ಕೃತಜ್ಞ. ಅತಿಶೀಘ್ರದಲ್ಲಿ ಬ್ಯಾಂಕಿಂಗ್ ಬಗ್ಗೆ ಕನ್ನಡದಲ್ಲಿ ಸಮರ್ಥವಾಗಿ ಬರೆಯಬಲ್ಲ ಲೇಖಕರೊಬ್ಬರು ಉದಯವಾಗುತ್ತಾರೆ.

ಜಗನ್ನಾಥ ಅವರಿಗೆ ಅಭಿನಂದನೆಗಳು. ಇನ್ನಷ್ಟು ಹೆಚ್ಚಿನ ಬರಹಗಳು/ಪುಸ್ತಕಗಳನ್ನು ಅವರು ರಚಿಸಲಿ. ನಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸಲಿ.

ಪುಸ್ತಕಗಳನ್ನು ಕೊಳ್ಳಲು ಶ್ರೀ ಜಗನ್ನಾಥ ಅವರನ್ನು ಸಂಪರ್ಕಿಸಿ. ಅವರ ಚರವಾಣಿ ಸಂಖ್ಯೆ: ; 8095863119.

***